ಸೋಮವಾರ, ಮೇ 25, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಿಯಾ ಸಿಮೆಂಟ್™
ಪ್ರಚಂಡ ಬಲವಾದ ಘರ್ಜನೆ
MAXLOAD Bulk Cement

ಪರಿಸರ ಸೂಕ್ಷ್ಮ ವಲಯದಲ್ಲಿ ವಸತಿ ಸಂಕೀರ್ಣ

ಕಾವೇರಿ ವನ್ಯಜೀವಿ ವಿಭಾಗದಲ್ಲಿ ತಲೆ ಎತ್ತಲಿರುವ ಉದ್ದೇಶಿತ ಯೋಜನೆಗೆ ಪರಿಸರವಾದಿಗಳ ತೀವ್ರ ವಿರೋಧ

• ಓದೇಶ ಸಕಲೇಶಪುರ

ರಾಮನಗರ: ಕಾವೇರಿ ವನ್ಯಜೀವಿ ವಿಭಾಗದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಒಳಪಡುವ ಚೀಲಂದವಾಡಿ ಅರಣ್ಯದ ಕಂದಾಯ ಜಮೀನಿನಲ್ಲಿ ಆಚಾರ್ಯ ಕುಟೀರ ವಸತಿ ಸಂಕೀರ್ಣಕ್ಕೆ ಯೋಜನೆ ಸಿದ್ಧವಾಗಿದೆ. ಇದಕ್ಕೆ ಪರಿಸರವಾದಿಗಳು ಹಾಗೂ ಸ್ಥಳೀಯರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಓಂ ಶಾಂತಿಧಾಮ ಟ್ರಸ್ಟ್ ವತಿಯಿಂದ ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ ಚೀಲಂದವಾಡಿ ಸರ್ವೆ ನಂಬರ್ 2, 3, 4, 5, 6 ಹಾಗೂ 7ರ ಕಂದಾಯ ಭೂಮಿಯಲ್ಲಿ ಒಟ್ಟು 10 ನಿವೇಶನಗಳಲ್ಲಿ ವಸತಿ ಸಂಕೀರ್ಣ ನಿರ್ಮಾಣ ಯೋಜನೆ ರೂಪಿಸಲಾಗಿದೆ. ಅರಣ್ಯ ಇಲಾಖೆ ಅನುಮತಿಗಾಗಿ ಟ್ರಸ್ಟ್ ಎದುರು ನೋಡುತ್ತಿದೆ.

> ಟ್ರಸ್ಟ್‌ನ ಉದ್ದೇಶಿತ ವಸತಿ ಸಂಕೀರ್ಣ ನಿರ್ಮಾಣ ಪರಿಸರಕ್ಕೆ ಮಾರಕವಾಗಿದೆ. ಯಾವುದೇ ಕಾರಣಕ್ಕೂ ಅನುಮತಿ ಕೊಡಬಾರದು
> **ಗುರುಪ್ರಸಾದ್,** ಪರಿಸರವಾದಿ

> ಇದು ಪರಿಸರ ಸೂಕ್ಷ್ಮ ವಲಯ. ಯಾವುದೇ ಕಾರಣಕ್ಕೂ ವಸತಿ ಸಂಕೀರ್ಣ ನಿರ್ಮಿಸಲು ಅವಕಾಶ ಕೊಡಬಾರದು. ಅನುಮತಿ ಕೊಟ್ಟರೆ ರೈತ ಸಂಘ ಪ್ರತಿಭಟಿಸಲಿದೆ
> **ನಲ್ಲಹಳ್ಳಿ ಶ್ರೀನಿವಾಸ್,** ರೈತ ಸಂಘ, ಕನಕಪುರ ತಾಲ್ಲೂಕು

ಆವಾಸಸ್ಥಾನ: 'ಕಾವೇರಿ ವನ್ಯಜೀವಿ ವಿಭಾಗ ಕಾಡಾನೆ, ಚಿರತೆ, ಜಿಂಕೆ, ಕಾಡುಕೋಣ, ಕಾಡುಹಂದಿ, ನವಿಲು, ಹಾವು, ಮಂಗಗಳು ಸೇರಿದಂತೆ ಅಪರೂಪದ ವನ್ಯಜೀವಿಗಳು ಹಾಗೂ ವೈವಿಧ್ಯಮಯ ಮರಗಿಡಗಳ ಆವಾಸ ಸ್ಥಾನವಾಗಿದೆ' ಎಂದು ಪರಿಸರವಾದಿ ಗುರುಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ಅನುಮತಿ ನೀಡುವುದೇ ಮೇಲ್ವಿಚಾರಣೆ ಸಮಿತಿ?

ವಸತಿ ಸಂಕೀರ್ಣಕ್ಕೆ ಅನುಮತಿ ಕೋರಿ ಶಾಂತಿಧಾಮ ಟ್ರಸ್ಟ್ ಅಧ್ಯಕ್ಷ ಜಿ.ಅನಂತಪ್ಪ ಅರಣ್ಯ ಇಲಾಖೆಗೆ ಪತ್ರ ಬರೆದಿದ್ದಾರೆ. ಈ ವಿಷಯ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮೇ 25ರಂದು ನಡೆಯುವ ಕಾವೇರಿ ವನ್ಯಜೀವಿ ವಿಭಾಗದ ಪರಿಸರ ಸೂಕ್ಷ್ಮ ವಲಯದ ಮೇಲ್ವಿಚಾರಣೆ ಸಮಿತಿ ಸಭೆ ಮುಂದೆ ಚರ್ಚೆಗೆ ಬರಲಿದೆ.

ಸಭೆಯಲ್ಲಿ ಕನಕಪುರ, ಮಳವಳ್ಳಿ, ಹನೂರು ಕ್ಷೇತ್ರಗಳ ಶಾಸಕರು, ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾಧಿಕಾರಿಗಳು (ಬೆಂಗಳೂರು ದಕ್ಷಿಣ, ಮಂಡ್ಯ, ಚಾಮರಾಜನಗರ), ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಪರಿಸರವಾದಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿದಂತೆ 16 ಮಂದಿ ಭಾಗವಹಿಸಲಿದ್ದಾರೆ. ವಸತಿ ಸಂಕೀರ್ಣಕ್ಕೆ ಸಮಿತಿ ಒಪ್ಪಿಗೆ ನೀಡುವುದೇ ಎಂಬುದನ್ನು ಕಾದು ನೋಡಬೇಕಿದೆ.

'ಕಾವೇರಿ ನದಿಯ ಸಂಗಮ–ಮೇಕೆದಾಟು ಬಳಿ ಓಂ ಶಾಂತಿಧಾಮ ಟ್ರಸ್ಟ್ ಪ್ರಸ್ತುತ ಗುರುಕುಲ ಶಿಕ್ಷಣ ಮತ್ತು ಯೋಗ ತರಬೇತಿ ನೀಡುತ್ತಿದೆ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅರಣ್ಯ ಇಲಾಖೆಯು ಇಂತಹದ್ದಕ್ಕೆಲ್ಲ ಅವಕಾಶವನ್ನೇ ನೀಡಬಾರದಿತ್ತು' ಎಂದರು.

ಈಗಾಗಲೇ ಧಕ್ಕೆ: 'ಜಿಲ್ಲೆಯ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಈಗ ರೆಸಾರ್ಟ್, ಹೋಮ್‌ಸ್ಟೇಗಳಿವೆ. ಮಿತಿ ಮೀರಿದ ಪ್ರವಾಸಿಗರ ಭೇಟಿ ಹಾಗೂ ವಾಹನಗಳ ಸಂಚಾರದಿಂದ ವನ್ಯಜೀವಿಗಳಿಗೂ ತೊಂದರೆಯಾಗುತ್ತಿದೆ. ವಸತಿ ಸಂಕೀರ್ಣಕ್ಕೆ ಅನುಮತಿ ಕೊಟ್ಟರೆ ಮತ್ತಷ್ಟು ಧಕ್ಕೆಯಾಗಲಿದೆ' ಎಂದು ಕನಕಪುರ ತಾಲ್ಲೂಕು ರೈತ ಸಂಘದ ಮುಖಂಡ ನಲ್ಲಹಳ್ಳಿ ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣ ಏಳು ಪೊಲೀಸರ ಅಮಾನತು

ರಾಮನಗರ: ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದಾಗ ಮಾರ್ಗಮಧ್ಯದ ವಡೇರಹಳ್ಳಿ ಬಳಿ ಜಿಲೆಟಿನ್ ಕಡ್ಡಿ ಪತ್ತೆಯಾಗಿದ್ದ ಪ್ರಕರಣದ ಸಂಬಂಧ ಅಂದು ಸ್ಥಳದಲ್ಲಿ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಪಿಎಸ್‌ಐ ಸೇರಿದಂತೆ ಏಳು ಪೊಲೀಸರನ್ನು ಕರ್ತವ್ಯಲೋಪದ ಮೇಲೆ ಅಮಾನತು ಮಾಡಲಾಗಿದೆ.

ಸಾತನೂರು ಠಾಣೆ ಪಿಎಸ್‌ಐ ದುರ್ಗೇಗೌಡ, ಕಗ್ಗಲೀಪುರ ಠಾಣೆ ಎಎಸ್‌ಐ ಶಂಕರ, ರಾಮನಗರ ಟೌನ್ ಠಾಣೆ ಹೆಡ್ ಕಾನ್‌ಸ್ಟೆಬಲ್‌ಗಳಾದ ಡಿ.ವಿ. ಪ್ರಕಾಶ್, ಶರತ್ ಕುಮಾರ್, ರವಿ ಟಿ., ಗೋವಿಂದರಾಜು ಹಾಗೂ ಹಾಸನದ ಎಎಸ್ಸಿ ತಂಡದ ಸುರೇಶ್ ಬಾಬು ಅವರನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ ಗೌಡ ಅಮಾನತುಗೊಳಿಸಿದ್ದಾರೆ.

ಪ್ರಧಾನಿ ಮೋದಿ ಭೇಟಿ ವೇಳೆ ಮೇ 10ರಂದು ಅವರ ವಾಹನ ಸಾಗುವ ವಡೇರಹಳ್ಳಿ ಬಳಿ ಚೆಕ್ ಪೋಸ್ಟ್‌ನ ರಸ್ತೆ ಬದಿ ಬಾಕ್ಸ್‌ನಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಈ ಘಟನೆಯು ಪ್ರಧಾನಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಭದ್ರತೆ ಮತ್ತು ಬಂದೋಬಸ್ತ್ ಕುರಿತು ಚರ್ಚೆ ಹುಟ್ಟು ಹಾಕಿತ್ತು. ಬೆಂಗಳೂರು ನಗರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸರ ಜಂಟಿ ತನಿಖೆ ಜತೆಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಪ್ರಕರಣದ ತನಿಖೆ ಕೈಗೊಂಡಿದೆ.

600 ಚೀಲ ಯೂರಿಯಾ ವಶಕ್ಕೆ



ಮೈಸೂರು: ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯ ಕೊಡಗಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 600 ಚೀಲ (ತಲಾ 45 ಕೆ.ಜಿ.) ಯೂರಿಯಾ ರಸಗೊಬ್ಬರವನ್ನು ಕೃಷಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಕೃಷಿ ಬಳಕೆಗೆಂದು ಮೀಸಲಿಟ್ಟಿದ್ದ ಈ ಯೂರಿಯಾವನ್ನು ಇದಾಯತ್ ಉಲ್ಲಾ ಎಂಬುವರು ತಮ್ಮ ತೋಟದಲ್ಲಿ ಅಕ್ರಮವಾಗಿ ಶೇಖರಿಸಿದ್ದರು. ಕಾಳಸಂತೆಯಲ್ಲಿ ಕೈಗಾರಿಕೆ ಬಳಕೆಗೆ ಮಾರಲೆಂದು ಇದನ್ನು ಸಂಗ್ರಹಿಸಿ ಇಡಲಾಗಿತ್ತು.

ಖಚಿತ ಮಾಹಿತಿ ಮೇರೆಗೆ ತಿ. ನರಸೀಪುರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ರೂಪಾ ನೇತೃತ್ವದ ತಂಡವು ದಾಳಿ ನಡೆಸಿ ಯೂರಿಯಾ ವಶಕ್ಕೆ ಪಡೆಯಿತು. ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಟಿಕೆ ಸುದ್ದಿ

ಪಿಯು ಪರೀಕ್ಷೆ–2 ಕಲಾ ವಿಭಾಗದಲ್ಲಿ ವರುಣ್ ಪ್ರಥಮ



ಜೆ.ವರುಣ್

ಮಧುಗಿರಿ: ದ್ವಿತೀಯ ಪಿಯು ಪರೀಕ್ಷೆ–1ರಲ್ಲಿ 600ಕ್ಕೆ 594 ಅಂಕ ಗಳಿಸಿ ರಾಜ್ಯಕ್ಕೆ ಮೂರನೇ ಸ್ಥಾನ ಗಳಿಸಿದ್ದ ಜೆ.ವರುಣ್, ಪಿಯು ಪರೀಕ್ಷೆ–2ರಲ್ಲಿ ಹೆಚ್ಚುವರಿ ನಾಲ್ಕು ಅಂಕ ಗಳಿಸಿ 600ಕ್ಕೆ 598 ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ವರುಣ್ ತಾಲ್ಲೂಕಿನ ಕಸಬಾ ಹೋಬಳಿ ಕಟ್ಟಡ ಕಾರ್ಮಿಕ ದಂಪತಿ ಲಕ್ಷ್ಮಮ್ಮ ಮತ್ತು ಜಯಣ್ಣ ಪುತ್ರ. ಪಟ್ಟಣದ ಗೌತಮ ಬುದ್ಧ ಅನುದಾನಿತ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ. ಯಾವುದೇ ಟ್ಯೂಷನ್‌ಗೆ ಹೋಗದೆ ಈ ಸಾಧನೆ ಮಾಡಿದ್ದಾರೆ. ಇಂಗ್ಲಿಷ್‌ನಲ್ಲಿ 98, ಉಳಿದೆಲ್ಲ ವಿಷಯಗಳಲ್ಲಿ ಶೇ 100ರಷ್ಟು ಅಂಕ ಗಳಿಸಿದ್ದಾರೆ.


ಬೋನಿಗೆ ಬಿದ್ದ ಚಿರತೆ



ನಾಗಮಲೆ ಸಮೀಪದ ಇಂಡಿಗನತ್ತ ಬಳಿ ಭಾನುವಾರ ಬೋನಿಗೆ ಬಿದ್ದ ಚಿರತೆ

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಮಹದೇಶ್ವರ ಬೆಟ್ಟ ವ್ಯಾಪ್ತಿಯ ನಾಗಮಲೆ ಸಮೀಪದ ಇಂಡಿಗನತ್ತ ಬಳಿ ಭಾನುವಾರ ಚಿರತೆ ಬೋನಿಗೆ ಬಿದ್ದಿದೆ. 'ಈಚೆಗೆ ಮಲೆ ಮಹದೇಶ್ವರದಲ್ಲಿ ಪಾದಯಾತ್ರೆ ಹೊರಟಿದ್ದ ಬೆಂಗಳೂರು ಮೂಲದ ಬಾಲಕನನ್ನು ಕೊಂದುಹಾಕಿದ್ದ ಚಿರತೆ ಇದು' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ದೃಢಪಡಿಸಿದ್ದಾರೆ. ಬಾಲಕನ ಸಾವಿನ ಬಳಿಕ ಅರಣ್ಯ ಇಲಾಖೆ ಚಿರತೆ ಸೆರೆ ಕಾರ್ಯಾಚರಣೆ ಆರಂಭಿಸಿತ್ತು. ಚಲನವಲನ ಪತ್ತೆಗೆ ಥರ್ಮಲ್ ಡ್ರೋನ್ ಕ್ಯಾಮೆರಾ ಬಳಸಿತ್ತು. ದಾಳಿ ನಡೆಸಿದ ಸ್ಥಳದ ಸುತ್ತಮುತ್ತಲಿನ ಮಾರ್ಗಗಳಲ್ಲಿ ನಾಲ್ಕು ಬೋನು, 20 ಟ್ರ್ಯಾಪ್ ಕ್ಯಾಮೆರಾ, 4 ಡ್ರೋನ್ ಕ್ಯಾಮೆರಾ ಇರಿಸಲಾಗಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕುಸಿದು ಬಿದ್ದು ಕಾರ್ಮಿಕ ಸಾವು



ನಾಗಪ್ಪ ಕಂಪೂರು

ಜಾಲಹಳ್ಳಿ (ರಾಯಚೂರು ಜಿಲ್ಲೆ): ಸಮೀಪದ ಚಿಂಚೋಡಿ ಗ್ರಾಮದಲ್ಲಿ ಭಾನುವಾರ ನರೇಗಾ ಕೆಲಸಕ್ಕೆ ತೆರಳಿದ್ದ ಕಾರ್ಮಿಕ ನಾಗಪ್ಪ ಕಂಪೂರು (58) ಕುಸಿದು ಬಿದ್ದು, ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟಿದ್ದಾರೆ. 'ಕೆಲಸದ ಸ್ಥಳದಲ್ಲಿ ನೆರಳು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿರಲಿಲ್ಲ. ಝಳದ ಕಾರಣಕ್ಕೆ ಕುಸಿದು ಬಿದ್ದಿದ್ದಾರೆ' ಎಂದು ಮೃತನ ಕುಟುಂಬಸ್ಥರು ಆರೋಪಿಸಿದ್ದಾರೆ.





ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ನಗರದ ರಂಗಿನಕಟ್ಟಾ ಬಳಿ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲು ಅಗೆದಿಟ್ಟ ಸ್ಥಳದಲ್ಲಿ ಮಳೆ ನೀರು ತುಂಬಿಕೊಂಡಿತ್ತು (ಎಡಚಿತ್ರ). ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಚಿರತ್ನಾಳದಲ್ಲಿ ಹಳ್ಳ ಉಕ್ಕಿ ಹರಿದು ತಾತ್ಕಾಲಿಕ ಸೇತುವೆ ಕೊಚ್ಚಿಕೊಂಡು ಹೋಗಿದೆ –ಪ್ರಜಾವಾಣಿ ಚಿತ್ರಗಳು

ಕಿತ್ತೂರು, ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ ನಗರ ಸೇರಿದಂತೆ ಧಾರವಾಡ, ಬಳ್ಳಾರಿ, ವಿಜಯನಗರ, ಉತ್ತರ ಕನ್ನಡ, ಬೆಳಗಾವಿ, ವಿಜಯಪುರ ಜಿಲ್ಲೆ ಒಳಗೊಂಡು ಕಿತ್ತೂರು, ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಶನಿವಾರ ತಡರಾತ್ರಿಯಿಂದ ಭಾನುವಾರ ಮುಂಜಾನೆವರೆಗೆ ವ್ಯಾಪಕ ಮಳೆ ಆಗಿದೆ.

ಧಾರವಾಡ ಜಿಲ್ಲೆಯ ಕೆಲವೆಡೆ ಮಳೆಯೊಂದಿಗೆ ಗುಡುಗು, ಮಿಂಚಿನ ಆರ್ಭಟ ಜೋರು ಇತ್ತು. ಧಾರವಾಡ ನಗರದಲ್ಲಿ 1 ಸೆಂ.ಮೀ., ಮಳೆಯಾಗಿದೆ.

8 ಮನೆಗಳಿಗೆ ಹಾನಿ: ಬಳ್ಳಾರಿ ಜಿಲ್ಲೆಯಲ್ಲಿ ಸುರಿದ ಮಳೆಗೆ 8 ಮನೆಗಳಿಗೆ ಹಾನಿಯಾಗಿದೆ. ಸಿಡಿಲು ಬಡಿದು ಸಂಡೂರಿನಲ್ಲಿ 2 ಎಮ್ಮೆಗಳು ಮೃತಪಟ್ಟಿವೆ. 'ಕಂಪ್ಲಿಯಲ್ಲಿ–4, ಸಿರುಗುಪ್ಪ –3, ಸಂಡೂರಿನಲ್ಲಿ 1 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 8 ಮನೆಗಳಿಗೆ ಹಾನಿಯಾಗಿದೆ.

2 ವಿದ್ಯುತ್ ಪರಿವರ್ತಕ, 3 ವಿದ್ಯುತ್ ಕಂಬಗಳು, 28 ಮರಗಳು ಉರುಳಿವೆ' ಎಂದು ಕಂದಾಯ ಇಲಾಖೆ ತಿಳಿಸಿದೆ. ಸಂಡೂರು ತಾಲ್ಲೂಕಿನಲ್ಲಿ 2.1 ಹೆಕ್ಟೇರ್‌ನಲ್ಲಿ ಹತ್ತಿ ಬೆಳೆ ನಾಶವಾಗಿದೆ.

ಹೊಸಪೇಟೆ ವರದಿ: ತಾಲ್ಲೂಕಿನ ಧರ್ಮಸಾಗರ, ಭುವನಹಳ್ಳಿ ಭಾಗದಲ್ಲಿ ವಿದ್ಯುತ್ ಪರಿವರ್ತಕಗಳು ಉರುಳಿವೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಚಿಲಗೋಡು ಗ್ರಾಮದಲ್ಲಿ ಸಿಡಿಲು ಬಡಿದು ಆಕಳು ಮೃತಪಟ್ಟಿದೆ. ಹಂಪಿ ಬಳಿ 10 ಎಕರೆ ಬಾಳೆ ಬೆಳೆ ಹಾನಿ ಉಂಟಾಗಿದೆ. ತಂಪಿನ ವಾತಾವರಣ ಕಾರಣ ಹಂಪಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲೂ ಗುಡುಗು ಸಹಿತ ಮಳೆ ಸುರಿಯಿತು. ದಾಂಡೇಲಿಯಿಂದ ಭಾಗವತಿ ಸಂಪರ್ಕಿಸುವ ರಸ್ತೆಯಲ್ಲಿ ಮರ ಬಿದ್ದು ಸಂಚಾರ ಸ್ಥಗಿತಗೊಂಡಿತ್ತು. ಕಾರವಾರ, ಹೊನ್ನಾವರ ಸೇರಿ ಹಲವೆಡೆ ಸಿಡಿಲಿನ ಅಬ್ಬರಕ್ಕೆ ಎಲೆಕ್ಟ್ರಾನಿಕ್ ಉಪಕರಣಗಳು ಸುಟ್ಟು ಹಾನಿಯಾದವು.

ಬೆಳಗಾವಿ ಜಿಲ್ಲೆಯ ಸವದತ್ತಿ, ಮುನವಳ್ಳಿ, ಹಿರೇಬಾಗೇವಾಡಿ, ಎಂ.ಕೆ.ಹುಬ್ಬಳ್ಳಿ ಮತ್ತು ಕೌಜಲಗಿಯಲ್ಲಿ ಗುಡುಗು–ಮಿಂಚು ಸಹಿತ, ಬೆಳಗಾವಿ ನಗರ, ಗೋಕಾಕ, ಚನ್ನಮ್ಮನ ಕಿತ್ತೂರು, ರಾಮದುರ್ಗ, ಯರಗಟ್ಟಿಯಲ್ಲಿ ಉತ್ತಮ ಮಳೆಯಾಯಿತು.

ವಿಜಯಪುರ ನಗರ ಸೇರಿದಂತೆ ತಾಳಿಕೋಟೆ, ನಾಲತವಾಡ, ಮುದ್ದೇಬಿಹಾಳ, ಚಡಚಣ, ಹೊರ್ತಿ ಹಾಗೂ ದೇವರ ಹಿಪ್ಪರಗಿ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ಮಳೆ ಎಲ್ಲಿ, ಎಷ್ಟು?

(ಸೆಂ.ಮೀಟರ್‌ಗಳಲ್ಲಿ)

ಹೊನ್ನಾವರ ತಾಲ್ಲೂಕಿನ ಹೆರಂಗಡಿ	12
ಹೊಸಪೇಟೆ	6.24
ಗಾದಿಗನೂರು	5.62
ಹಗರಿಬೊಮ್ಮನಹಳ್ಳಿ ತಾಲ್ಲೂಕು ಮಾಲವಿ	7.92
ಕೂಡ್ಲಿಗಿ ತಾಲ್ಲೂಕು ಗುಡೇಕೋಟೆ	7.13

ಮನೆಗಳಿಗೆ ನೀರು, ಪ್ರತಿಭಟನೆ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಗಾದಿಗನೂರಿನಲ್ಲಿ ಹೆದ್ದಾರಿ ಕಾಮಗಾರಿ ವೇಳೆ ಚರಂಡಿ ಅವ್ಯವಸ್ಥೆಯಿಂದಾಗಿ ಮನೆಗಳಿಗೆ ನೀರು ನುಗ್ಗಿ ಸ್ಥಳೀಯರು ಆಕ್ರೋಶಗೊಂಡು 2 ಗಂಟೆ ಹೆದ್ದಾರಿ ತಡೆದು ಪ್ರತಿಭಟಿಸಿದರು.

ಡಿವೈಎಸ್‌ಪಿ, ಎನ್‌ಎಚ್‌ಎಐ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಲೋಪ ಸರಿಪಡಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ಕೊನೆಗೊಂಡಿತು.

ಯುವಕ, ಹತ್ತು ಜಾನುವಾರು ಸಾವು

ಕಲಬುರಗಿ: ಶನಿವಾರ ತಡರಾತ್ರಿ ಭಾರಿ ಮಳೆಯಿಂದಾಗಿ ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ, ಬೀದರ್ ಜಿಲ್ಲೆಗಳು ತತ್ತರಿಸಿವೆ. ಮಳೆ ಸಂಬಂಧಿ ಅವಘಡದಿಂದ ಕೊಪ್ಪಳ ಜಿಲ್ಲೆಯಲ್ಲಿ ಯುವಕ ಮೃತಪಟ್ಟಿದ್ದಾನೆ. ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಐದು ಜಾನುವಾರು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಐದು ಜಾನುವಾರುಗಳು ಮೃತಪಟ್ಟಿವೆ.

ಕೊಪ್ಪಳ ಜಿಲ್ಲೆಯ ಕಾಮನೂರಿನಿಂದ ಭಾನುವಾರ ಬೈಕ್‌ನಲ್ಲಿ ಹೊರಟಿದ್ದ ಗ್ರಾಮದ ಕಿರಣ ಹನುಮಂತಪ್ಪ ಕುರಬಡಗಿ (23) ಮಳೆಯಿಂದ ರಸ್ತೆಯಲ್ಲಿ ಬಿದ್ದಿದ್ದ ಮರಕ್ಕೆ ಡಿಕ್ಕಿ ಹೊಡೆದಿದ್ದರಿಂದ ಮೃತಪಟ್ಟಿದ್ದಾರೆ. ಮಹೇಶ ಮಲ್ಲಪ್ಪ ಹುಳ್ಳಿ (25) ಗಾಯಗೊಂಡಿದ್ದಾರೆ.

ಸಿಂಧನೂರು ತಾಲ್ಲೂಕಿನಲ್ಲಿ ತಾತ್ಕಾಲಿಕ ಸೇತುವೆ ಕೊಚ್ಚಿಕೊಂಡು ಹೋಗಿದೆ. ರಾಯಚೂರು ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ 17.4 ಮಿ.ಮೀ ಮಳೆ ದಾಖಲಾಗಿದೆ. ದೇವದುರ್ಗ, ಮಾನ್ವಿ, ಸಿರವಾರದಲ್ಲೂ ಸಾಧಾರಣ ಮಳೆಯಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ 225 ವಿದ್ಯುತ್ ಕಂಬ, 41 ವಿದ್ಯುತ್ ಪರಿವರ್ತಕಗಳಿಗೆ (ಟಿಸಿ) ಹಾನಿಯಾಗಿದೆ. ಇಡೀ ದಿನ ಜಿಲ್ಲೆಯ ಹಲವೆಡೆ ವಿದ್ಯುತ್ ವ್ಯತ್ಯಯವಾಗಿದೆ.

ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲೂ ಬಿರುಸಿನ ಮಳೆಯಾಗಿದೆ. ಕಲಬುರಗಿ ಹೊರವಲಯದ ರಾಮನಗರದಲ್ಲಿ ಅಲೆಮಾರಿ ಸಮುದಾಯದ ಗುಡಿಸಲುಗಳು ಗಾಳಿಗೆ ಕಿತ್ತು ಹೋಗಿದ್ದರಿಂದ ನಿವಾಸಿಗಳು ಆಸರೆಗಾಗಿ ಪರದಾಡಿದರು.

ಮಂತ್ರಾಲಯ: ಪರದಾಡಿದ ಭಕ್ತರು

ಮಂತ್ರಾಲಯದ ರಾಘವೇಂದ್ರಸ್ವಾಮಿಗಳ ಮಠದ ಆವರಣದಲ್ಲಿ ಮಲಗಿದ್ದ ನೂರಾರು ಭಕ್ತರು ಬೆಳಗಿನ ಜಾವ ಅಬ್ಬರಿಸಿದ ಮಳೆಯಲ್ಲಿ ನೆನೆದು ತೊಂದರೆ ಅನುಭವಿಸಿದರು. ಮಠದ ಶ್ರೀಗಳು ತಕ್ಷಣ ಸ್ಥಳಕ್ಕೆ ಬಂದು ಪಕ್ಕದ ಕಲ್ಯಾಣ ಮಂಟಪದ ಬೀಗ ತೆಗೆಯಿಸಿ, ಭಕ್ತರಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದರು.

ಕಾಂಗ್ರೆಸ್‌ಗೆ 12 ಸದಸ್ಯರ ರಾಜೀನಾಮೆ

ಧಾರವಾಡ: 'ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ರಾಜ್ಯಪಾಲರು ಅನುಮೋದನೆ ನೀಡಬೇಕು ಎಂದು ಆಗ್ರಹಿಸಿ ಹೋರಾಟ ತೀವ್ರಗೊಂಡಿದ್ದು, ಪಾಲಿಕೆಯ 12 ಕಾಂಗ್ರೆಸ್ ಸದಸ್ಯರು (ಒಬ್ಬರು ನಾಮನಿರ್ದೇಶಿತ ಸದಸ್ಯ) ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಸೂರವ್ವ ಪಾಟೀಲ, ರಾಜಶೇಖರ ಕಮತಿ, ದಿಲಶಾದ್ ಬೇಗಂ ನದಾಫ್, ದೀಪಾ ನೀರಲಕಟ್ಟಿ, ನಾಮನಿರ್ದೇಶಿತ ಸದಸ್ಯ ಪ್ರಕಾಶ ಬಾಬುರಾವ ಘಾಟಗೆ, ಶಂಭುಗೌಡ ಸಾಲಮನಿ, ಪರ್ವಿನ್ ದೇಸಾಯಿ, ಗಣೇಶ ಮುಧೋಳ, ಕವಿತಾ ಕಬ್ಬೇರ, ಬಿಲ್ಕಿಸ್‌ಬಾನು ಮುಲ್ಲಾ, ಮಂಜುನಾಥ ಬಡಕುರಿ, ಮಯೂರ ಮೋರೆ ರಾಜೀನಾಮೆ ನೀಡಿದ್ದಾರೆ.

ಪ್ರತ್ಯೇಕ ಪಾಲಿಕೆಗಾಗಿ 10 ದಿನದಿಂದ ನಡೆಯುತ್ತಿರುವ ಹೋರಾಟ ಪಕ್ಷಾತೀತ ಮತ್ತು ಜಾತ್ಯತೀತವಾಗಿದೆ. ನಮಗೆ ಅಧಿಕಾರಕ್ಕಿಂತಲೂ ಜನರ ಹಿತ, ಭಾವನೆಗಳು ಮುಖ್ಯ. ಹೋರಾಟಕ್ಕೆ ಸಂಪೂರ್ಣ ಧ್ವನಿಯಾಗಲು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇವೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಪ್ರತ್ಯೇಕ ಪಾಲಿಕೆ ವಿಚಾರದಲ್ಲಿ ಕಾಂಗ್ರೆಸ್‌ನವರು ಹೋರಾಟಗಾರರ ಜತೆ ಸೇರಿ ರಾಜಕೀಯ ಮಾಡುತ್ತಿದ್ದಾರೆ ಎಂದು ಕೆಲವರು ಆರೋಪಿಸಿದ್ದಾರೆ. ಪಕ್ಷಾತೀತ, ಜಾತ್ಯತೀತವಾಗಿ ಹೋರಾಟ ಮಾಡುವ ನಿಟ್ಟಿನಲ್ಲಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇವೆ' ಎಂದು ಕವಿತಾ ಕಬ್ಬೇರ ತಿಳಿಸಿದರು.

> ಸದಸ್ಯರು ರಾಜೀನಾಮೆ ಪತ್ರವನ್ನು ನೀಡಿದ್ದಾರೆ. ರಾಜೀನಾಮೆ ಪತ್ರವನ್ನು ಪಕ್ಷದ ಜಿಲ್ಲಾಧ್ಯಕ್ಷರಿಗೆ ಕಳುಹಿಸುತ್ತೇವೆ
> **ಅರವಿಂದ ಏಗನಗೌಡರ,** ಅಧ್ಯಕ್ಷ, ಬ್ಲಾಕ್ ಕಾಂಗ್ರೆಸ್

ಬದುಕು ಮೂರಾಬಟ್ಟೆ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ಹೊರವಲಯದ ರಾಮನಗರದಲ್ಲಿ ಶನಿವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ಅಲೆಮಾರಿ ಕುಟುಂಬದ ಜೋಪಡಿ ಮೇಲ್ಭಾಗದ ತಾಡಪತ್ರಿ ಕಿತ್ತುಹೋಗಿದ್ದು, ಮಹಿಳೆಯೊಬ್ಬರು ಸಾಮಗ್ರಿಗಳನ್ನು ಎತ್ತಿಡುವ ದೃಶ್ಯ ಭಾನುವಾರ ಕಂಡು ಬಂತು

ಜಗತ್ತಿನ 800ಕ್ಕೂ ಹೆಚ್ಚು ಕಡೆ ವೈಮಾನಿಕ ಪ್ರದರ್ಶನ ನೀಡಿದ ಹೆಗ್ಗಳಿಕೆ

'ಸೂರ್ಯಕಿರಣ' ಏರೋಬ್ಯಾಟಿಕ್‌ಗೆ 30ರ ಸಂಭ್ರಮ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ವಾಯುಪಡೆಯ ಪ್ರತಿಷ್ಠಿತ 'ಸೂರ್ಯಕಿರಣ' ಏರೋಬ್ಯಾಟಿಕ್ ತಂಡ (ಎಸ್‌ಕೆಎಟಿ) ಈಗ 30ರ ಸಂಭ್ರಮದಲ್ಲಿದೆ. ಮೂರು ದಶಕಗಳಲ್ಲಿ ಈ ತಂಡದ ಕಾರ್ಯ ಹಾಗೂ ಸಾಧನೆ ಅನನ್ಯವಾಗಿದ್ದು, ವಾಯುಪಡೆಯ 'ರಾಯಭಾರಿ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಒಂಬತ್ತು ಸೂರ್ಯಕಿರಣ ವಿಮಾನಗಳ ಏರೋಬ್ಯಾಟಿಕ್ ತಂಡವು ಮೈನವಿರೇಳಿಸುವ ವೈಮಾನಿಕ ಪ್ರದರ್ಶನಕ್ಕೆ ಹೆಸರಾಗಿದೆ. ಕಣಿವೆ, ಸಮುದ್ರ ತೀರ ಸೇರಿದಂತೆ ಹಲವು ಪ್ರಮುಖ ಸ್ಥಳಗಳಲ್ಲಿ ತನ್ನ ವೃತ್ತಿಪರತೆ ಪ್ರದರ್ಶಿಸಿದ ಖ್ಯಾತಿ ಇದಕ್ಕಿದೆ.

ಭಾರತದ ಪ್ರಮುಖ ನಗರಗಳು ಸೇರಿದಂತೆ ಚೀನಾ, ಶ್ರೀಲಂಕಾ, ಮ್ಯಾನ್ಮಾರ್, ಥಾಯ್ಲೆಂಡ್, ಸಿಂಗಪುರ, ಯುನೈಟೆಡ್ ಅರಬ್ ಎಮಿರೇಟ್ಸ್ ಸೇರಿದಂತೆ ಹಲವೆಡೆ ಸಾವಿರಾರು ಕಿ.ಮೀ ಕ್ರಮಿಸಿ, ಅತ್ಯುತ್ತಮ ಪ್ರದರ್ಶನ ನೀಡಿದೆ.

'ಏರೋಬ್ಯಾಟಿಕ್ ತಂಡ 1996ರ ಮೇ 27ರಂದು ಬೀದರ್ ವಾಯುಪಡೆ ತರಬೇತಿ ಕೇಂದ್ರದಲ್ಲಿ ಸ್ಥಾಪನೆಗೊಂಡಿತ್ತು. 1996ರ ಸೆಪ್ಟೆಂಬರ್‌ನಲ್ಲಿ ಕಿರಣ ಎಂ.ಕೆ.–2 ಹೆಸರಿನ ವಿಮಾನಗಳ ಮೊಟ್ಟ ಮೊದಲ ಸಾರ್ವಜನಿಕ ವೈಮಾನಿಕ ಪ್ರದರ್ಶನ ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದಿತ್ತು. ಇದಾದ ಬಳಿಕ ಹಲವೆಡೆ ಈ ಲೋಹದ ಹಕ್ಕಿಗಳು ಕರಾಮತ್ತು ತೋರಿದ್ದವು.

2015ರಲ್ಲಿ ಕಿರಣ ಎಂ.ಕೆ.–2 ವಿಮಾನಗಳ ಜಾಗವನ್ನು ಕೆಂಪು–ಬಣ್ಣಗಳ 'ಹಾಕ್ ಎಂ.ಕೆ.–132 ಜೆಟ್ ವಿಮಾನಗಳು ತುಂಬಿದವು. ತಂಡ ಈವರೆಗೆ 800ಕ್ಕೂ ಹೆಚ್ಚು ವೈಮಾನಿಕ ಪ್ರದರ್ಶನಗಳನ್ನು ನೀಡಿದೆ. ಈ ವಿಮಾನಗಳ ತರಬೇತಿ ಬೀದರ್ ಆಕಾಶದಲ್ಲಿ ನಿತ್ಯ ಸಾಮಾನ್ಯ.

ಸಂಕೀರ್ಣ ತರಬೇತಿ: ಈ ತಂಡದ ಪೈಲಟ್‌ಗಳಿಗೆ ಅತ್ಯಂತ ಸಂಕೀರ್ಣ ತರಬೇತಿಗೆ ಒಳಪಡಿಸಲಾಗುತ್ತದೆ. ಜಗತ್ತಿನ ಅತ್ಯುತ್ತಮ ಪೈಲಟ್‌ಗಳನ್ನು ಕೊಟ್ಟಿರುವ ಈ ತಂಡವು ಈಗ 30ರ ಸಂಭ್ರಮಕ್ಕೆ ಸಿದ್ಧಗೊಂಡಿದೆ.

ಮುಖ್ಯಾಂಶಗಳು
- 1996ರಲ್ಲಿ ಬೀದರ್ ವಾಯುಪಡೆ ತರಬೇತಿ ಕೇಂದ್ರದಲ್ಲಿ ಸ್ಥಾಪನೆ
- ಪೈಲಟ್‌ಗಳಿಗೆ ಅತ್ಯಂತ ಸಂಕೀರ್ಣ ತರಬೇತಿ



ಸೂರ್ಯಕಿರಣ ಏರೋಬ್ಯಾಟಿಕ್ ತಂಡದ ವೈಮಾನಿಕ ಪ್ರದರ್ಶನದ ಸಂಗ್ರಹ ಚಿತ್ರ

ಹಂಪಿ: ಆಳ್ವಾರ್‌ರ ಮತ್ತೆರಡು ಭಗ್ನ ವಿಗ್ರಹಗಳು, 23 ಮೀಟರ್ ಉದ್ದದ ಚರಂಡಿ ಗೋಚರ

ಹಜಾರರಾಮ ದೇಗುಲದಲ್ಲಿ ವ್ಯಾಳ ಶಿಲ್ಪ ಪತ್ತೆ

ಪ್ರಜಾವಾಣಿ ವಾರ್ತೆ


ಹೊಸಪೇಟೆ (ವಿಜಯನಗರ): ಅತ್ಯಂತ ಶಕ್ತಿಶಾಲಿ ಮತ್ತು ರೋಚಕ ಕಾಲ್ಪನಿಕ ಪ್ರಾಣಿ 'ಯಾಳಿ' ಎಂದೂ ಕರೆಯಲಾಗುವ ಎರಡು ಅಡಿ ಎತ್ತರದ ವ್ಯಾಳದ ಕಲ್ಲಿನ ಕೆತ್ತನೆಯು ಹಂಪಿಯ ಹಜಾರರಾಮ ದೇವಸ್ಥಾನದ ಆವರಣದಲ್ಲಿ ಪತ್ತೆಯಾಗಿದೆ.

ಜತೆಗೆ ಆಳ್ವಾರ್‌ರ ಮತ್ತೆರಡು ಭಗ್ನ ವಿಗ್ರಹಗಳು, 23 ಮೀಟರ್ ಉದ್ದದ ಚರಂಡಿ ಪತ್ತೆಯಾಗಿದೆ. ಚಪ್ಪಡಿಕಲ್ಲು ಹಾಸುವ ಕಾಮಗಾರಿಗಾಗಿ ಮಣ್ಣನ್ನು ಅಗೆಯುತ್ತಿದ್ದಾಗ ಇವು ಪತ್ತೆಯಾಗಿವೆ.

'ಹಜಾರರಾಮ ದೇವಸ್ಥಾನದ ಭಿತ್ತಿಚಿತ್ರಗಳ ರೂಪದಲ್ಲಿ ಮಾತ್ರ ವ್ಯಾಳಗಳು ಇರುವುದಲ್ಲ, ಇಲ್ಲಿ ವ್ಯಾಳದ ಕೆತ್ತನೆ ನಡೆದು ಮಹಾದ್ವಾರದಲ್ಲಿ ಇಡಲಾಗಿತ್ತು ಎಂಬುದಕ್ಕೆ ಇದು ಸಾಕ್ಷಿ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ ತಿಳಿಸಿದರು.

'ಆಳ್ವಾರ್‌ರ ಭಗ್ನಗೊಂಡ ಎರಡು ವಿಗ್ರಹಗಳು ನಾಲ್ಕು ದಿನಗಳ ಹಿಂದೆ ಪತ್ತೆಯಾಗಿದ್ದವು. ಇದೀಗ ಮತ್ತೆರಡು ವಿಗ್ರಹಗಳು ಪತ್ತೆಯಾಗಿವೆ. ಜತೆಗೆ 23 ಮೀಟರ್ ಉದ್ದದ ಕಲ್ಲಿನ ಚರಂಡಿ ಕಾಣಿಸಿದೆ. ವಿಜಯನಗರ ಕಾಲದಲ್ಲಿ ನೀರು ಹರಿದುಹೋಗಲು ಎಂತಹ ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂಬುದಕ್ಕೆ ಸಾಕ್ಷಿಯಾಗುತ್ತಿದೆ' ಎಂದು ತಿಳಿಸಿದರು.

ಕಿರುಗಾಲುವೆ?: 'ಇದು ಚರಂಡಿ ಆಗಿರುವ ಸಾಧ್ಯತೆ ಇಲ್ಲ, ಬದಲಿಗೆ ರಾಣಿ ಸ್ನಾನಗೃಹದಿಂದ ಮಹಾನವಮಿ ದಿಬ್ಬದ ಮೂಲಕ ಬರುತ್ತಿದ್ದ ನೀರಿನ ಹರಿವಿಗೆ ನಿರ್ಮಿಸಲಾಗಿದ್ದ ಕಿರುಗಾಲುವೆ ಇರಬಹುದು' ಎಂದು ಪ್ರವಾಸಿ ಮಾರ್ಗದರ್ಶಿ ವಿರೂಪಾಕ್ಷಿ ವಿ.ಹಂಪಿ ಅಭಿಪ್ರಾಯಪಟ್ಟಿದ್ದಾರೆ.



ಹಂಪಿಯ ಹಜಾರರಾಮ ದೇವಸ್ಥಾನದ ಆವರಣದಲ್ಲಿ ಭಾನುವಾರ ನಡೆದ ಉತ್ಖನನ ವೇಳೆ ದೊರೆತ ವ್ಯಾಳ ಶಿಲ್ಪ –ಪ್ರಜಾವಾಣಿ ಚಿತ್ರ



ಉತ್ಖನನ ವೇಳೆ ಕಾಣಿಸಿದ ಪುರಾತನ ಚರಂಡಿ

ಏನಿದು 'ವ್ಯಾಳ'?

ಸಿಂಹ, ಆನೆ ಮತ್ತು ಕುದುರೆಯಂತಹ ಪ್ರಾಣಿಗಳ ಅಂಗಾಂಗಗಳನ್ನು ಸಂಯೋಜಿಸಿ ಸೃಷ್ಟಿಸಲಾದ ಒಂದು ವಿಶಿಷ್ಟ ಕಾಲ್ಪನಿಕ ರೂಪವೇ ವ್ಯಾಳ. ಇದು ಬುದ್ಧಿವಂತಿಕೆ ಮತ್ತು ಅಪಾರ ಶಕ್ತಿಯ ಸಂಕೇತ.

ಇವು ನಕಾರಾತ್ಮಕ ಶಕ್ತಿಗಳು ಅಥವಾ ಕೆಟ್ಟ ದೃಷ್ಟಿ ದೇವಾಲಯದೊಳಗೆ ಪ್ರವೇಶಿಸದಂತೆ ತಡೆಯುವ 'ರಕ್ಷಕರು' ಎಂಬ ಭಾವನೆ ಇದ್ದು, ದೇವಾಲಯಗಳ ಪ್ರವೇಶ ದ್ವಾರಗಳು, ಕಂಬಗಳಲ್ಲಿ ಇವುಗಳನ್ನು ಕೆತ್ತುವ ಸಂಪ್ರದಾಯ ಇದೆ.

ಮುರಿನಕಟ್ಟೆ: ಬೆಳಿಗ್ಗೆ ನಿರ್ಮಾಣ, ಸಂಜೆ ತೆರವು

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಇಲ್ಲಿನ ವೆಂಕಟಾಪುರದ ಜಾಗಟೆಬೈಲ್ ಸಮೀಪ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ದೇವರ ಹೊರೆ ಇಳಿಸುತ್ತಿದ್ದ ಮುರಿನಕಟ್ಟೆಯನ್ನು ಭಾನುವಾರ ಬೆಳಿಗ್ಗೆ ಹಿಂದೂ ಜಾಗರಣ ವೇದಿಕೆಯವರು, ಸ್ಥಳೀಯರು ನಿರ್ಮಿಸಿದರು. ರಾತ್ರಿ ವೇಳೆಗೆ ಮುಸ್ಲಿಂ ಸಮುದಾಯದವರು ಅದನ್ನು ತೆರವುಗೊಳಿಸಿದರು.

ನಾಲ್ಕು ವರ್ಷಗಳ ಹಿಂದೆ ಹೆದ್ದಾರಿ ಕಾಮಗಾರಿ ಆರಂಭವಾದಾಗ ಮುರಿನಕಟ್ಟೆ ಪ್ರದೇಶವನ್ನು ತೆರವುಗೊಳಿಸಲಾಗಿತ್ತು.

ಮುರಿನಕಟ್ಟೆ ಇದ್ದ ಸ್ಥಳದ ಹಿಂಬದಿ ಮುಸ್ಲಿಮರೊಬ್ಬರು ಮನೆ ಕಟ್ಟಲು ಸಿದ್ಧತೆ ನಡೆಸಿದ್ದರು. ಕಟ್ಟೆ ಜಾಗ ಒತ್ತುವರಿ ಆಗಬಹುದು ಎಂದು ಆಕ್ಷೇಪಿಸಿದ್ದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಕಟ್ಟೆ ನಿರ್ಮಿಸಿದ್ದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಮುಸ್ಲಿಂ ಸಮುದಾಯದ ಕೆಲವರು ಕಟ್ಟೆ ತೆರವುಗೊಳಿಸಬೇಕು ಎಂದು ಪಟ್ಟು ಹಿಡಿದರು. ಕಟ್ಟೆ ಇದ್ದ ಜಾಗದಲ್ಲಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ರಾತ್ರಿ ವೇಳೆ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಮುಸ್ಲಿಮರು ಕಟ್ಟೆ ತೆರವಿಗೆ ಒತ್ತಾಯಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಹಲವು ಅಧಿಕಾರಿಗಳ ಎದುರಿನಲ್ಲೇ ಕಟ್ಟೆ ಒಡೆದು ತೆರವುಗೊಳಿಸಿದರು.

ಘಟನೆಗೆ ಸಂಬಂಧಿಸಿ ತಡರಾತ್ರಿವರೆಗೂ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ.



ಭಟ್ಕಳದ ಹೆದ್ದಾರಿ ಬದಿಯಲ್ಲಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಮುರಿನಕಟ್ಟೆಯನ್ನು ನಿರ್ಮಿಸಿದರು

ಸೋಮವಾರ, ಮೇ 25, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ತಪಾಸಣೆ
ಹರಿಯಾಣದಲ್ಲಿ ನಾಗರಿಕ ಸೇವೆಗಳ ಪರೀಕ್ಷೆಗೆ (ಪೂರ್ವಭಾವಿ) ಹಾಜರಾದ ಅಭ್ಯರ್ಥಿಯೊಬ್ಬರನ್ನು ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದ ದೃಶ್ಯ



ಗುಲ್ವೀರ್ ದಾಖಲೆ
ಭಾರತದ ಗುಲ್ವೀರ್ ಸಿಂಗ್ ಅವರು ಲಾಸ್ ಏಂಜಲೀಸ್‌ನಲ್ಲಿ ನಡೆದ 'ಲಾ ಟ್ರ್ಯಾಕ್ ಫೆಸ್ಟ್' ಕೂಟದ ಪುರುಷರ 5,000 ಮೀ. ಓಟವನ್ನು 13 ನಿಮಿಷ 03.93 ಸೆಕೆಂಡುಗಳಲ್ಲಿ ಕ್ರಮಿಸಿ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು

ಎಸ್‌ಐಆರ್: ಕಾಂಗ್ರೆಸ್–ಬಿಜೆಪಿ ತಂತ್ರ ಪ್ರತಿತಂತ್ರ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭವಾಗುತ್ತಿದ್ದಂತೆಯೇ, ಅದರ ಪರ ಮತ್ತು ವಿರುದ್ಧವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ತಂತ್ರ–ಪ್ರತಿತಂತ್ರ ರೂಪಿಸುತ್ತಿವೆ. ಎಸ್‌ಐಆರ್ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಆಯ್ಕೆಯನ್ನು ಮುಕ್ತವಾಗಿ ಇರಿಸಿಕೊಂಡೇ, ಜನ್ಮದಿನಾಂಕ ಮತ್ತು ಜನ್ಮಸ್ಥಳದ ದಾಖಲೆ ಇಲ್ಲದ ಅರ್ಹರಿಗೆ ದಾಖಲೆಗಳನ್ನು ಒದಗಿಸುವ ಬಗ್ಗೆ ಆಡಳಿತಾರೂಢ ಕಾಂಗ್ರೆಸ್ ಚಿಂತನೆ ನಡೆಸಿದೆ. ಇನ್ನೊಂದೆಡೆ ಅರ್ಹರಷ್ಟೇ ಮತದಾರರ ಪಟ್ಟಿಯಲ್ಲಿ ಉಳಿಯುವಂತೆ ಎಚ್ಚರಿಕೆ ವಹಿಸಬೇಕು ಎಂದು ಬಿಜೆಪಿ ವರಿಷ್ಠರು ರಾಜ್ಯ ನಾಯಕರಿಗೆ ತಾಕೀತು ಮಾಡಿದ್ದಾರೆ.

'ಸರ್ಕಾರವೇ ದಾಖಲೆ ಕೊಡುವ ಚಿಂತನೆ'

'ಯಾವುದೇ ಅರ್ಹರ ಹೆಸರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯದಂತೆ ಎಚ್ಚರಿಕೆ ವಹಿಸಿ, ಸೈನಿಕರಂತೆ ಕೆಲಸ ಮಾಡಬೇಕು. ಅಲ್ಲದೇ, ಸರ್ಕಾರ ಜನರಿಗೆ ಬೇಕಾದ ದಾಖಲೆಗಳನ್ನು ಒದಗಿಸಿಕೊಡಬೇಕು. ಇದು ಜವಾಬ್ದಾರಿಯುತ ಸರ್ಕಾರದ ಕೆಲಸ. ಕೇರಳದಲ್ಲಿ ಇದೇ ರೀತಿ ಮಾಡಲಾಗಿದೆ' ಎಂದು ಪಕ್ಷದ ಕಾರ್ಯಕರ್ತರು, ನಾಯಕರಿಗೆ ಕಾಂಗ್ರೆಸ್ ಮುಖಂಡರು ಸೂಚನೆ ನೀಡಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕುರಿತು ಚರ್ಚಿಸಲು ಕೆಪಿಸಿಸಿ ವತಿಯಿಂದ ನಗರದ ಹೊರವಲಯದ ದೇವನಹಳ್ಳಿಯಲ್ಲಿರುವ ಜೆಡಬ್ಲ್ಯು ಮ್ಯಾರಿಯೆಟ್ ಹೊಟೇಲ್‌ನಲ್ಲಿ ಭಾನುವಾರ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ಪ್ರಮುಖ ಭಾಗವಹಿಸಿದರು.

ಎಸ್‌ಐಆರ್ ಪ್ರಕ್ರಿಯೆಯ ಕುರಿತು ಸಭೆಯಲ್ಲಿ ಪ್ರಾತ್ಯಕ್ಷಿಕೆ ನೀಡಲಾಯಿತು. ಬೇರೆ ರಾಜ್ಯಗಳಲ್ಲಿ ಈಗಾಗಲೇ ನಡೆದಿರುವ ಎಸ್‌ಐಆರ್ ಬಗ್ಗೆ ಚರ್ಚೆ ನಡೆಯಿತು. ಈ ಪ್ರಕ್ರಿಯೆಯ ಮೂಲಕ ಮತದಾರರ ಪಟ್ಟಿಯಿಂದ ಅರ್ಹ ಮತದಾರರು ಹೊರಗುಳಿಯುವ ಸಾಧ್ಯತೆಗಳಿವೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯದ ಬಗ್ಗೆಯೂ ನಾಯಕರು ಚರ್ಚೆ ನಡೆಸಿದರು.

ಕಡಿಮೆ ಅಂತರದಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲು ಕಂಡಿರುವ ಕ್ಷೇತ್ರಗಳನ್ನು ಕೇಂದ್ರೀಕರಿಸಿ, ಎಸ್‌ಐಆರ್ ನೆಪದಲ್ಲಿ ಮತದಾರರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕುವ ಯತ್ನವನ್ನು ಆ ಪಕ್ಷದವರು ನಡೆಸಬಹುದು. ಅದಕ್ಕೆ ಅವಕಾಶ ನೀಡಬಾರದು. ಬಿಎಲ್‌ಎಗಳನ್ನು ಬಳಸಿಕೊಂಡು ಮತದಾರರ ಪಟ್ಟಿ ಪರಿಷ್ಕರಣೆಯ ಮೇಲೆ ಕಣ್ಣಿಡಲು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸರ್ಕಾರದಿಂದ ಜಾಗೃತಿ: 'ಜವಾಬ್ದಾರಿಯುತ ಸರ್ಕಾರವಾಗಿ ಜನರಿಗೆ ಎಸ್‌ಐಆರ್ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಚುನಾವಣಾ ಆಯೋಗ ನೀಡುವ ಅರ್ಜಿ ತುಂಬಿಸಿ, ದಾಖಲೆ ಸಹಿತ ವಾಪಸ್ ನೀಡಿದವರ ಮತ ಮಾತ್ರ ಉಳಿಯಲಿದೆ. ಅರ್ಜಿ ವಾಪಸ್ ನೀಡದವರ ಮತದಾನದ ಹಕ್ಕು ನಷ್ಟವಾಗಲಿದೆ. ಈ ಬಗ್ಗೆ ಬಿಎಲ್‌ಎಗಳ ಮೂಲಕ ಖಾತರಿಪಡಿಸಬೇಕಾಗಿದೆ' ಎಂದರು.

'ಮತದಾನದ ಹಕ್ಕು ಕಳೆದುಕೊಂಡರೆ ಯಾವುದೇ ಸೌಲಭ್ಯ-ಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಗೃಹಲಕ್ಷ್ಮೀ ಯೋಜನೆ ಹಣ, ಪಿಂಚಣಿ, ಮನೆ, ಜಮೀನು ಸೇರಿದಂತೆ ಸರ್ಕಾರದ ಎಲ್ಲ ಯೋಜನೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ' ಎಂದರು.

ಸಮಸ್ಯೆಯಾದರೆ ಜನ ಪ್ರಶ್ನೆ ಮಾಡಲಿದ್ದಾರೆ: 'ಎಲ್ಲ ಪಕ್ಷಗಳು ಬಿಎಲ್‌ಎಗಳಿಗೆ ತರಬೇತಿ ನೀಡುತ್ತಿವೆ. ನಮ್ಮಿಂದ ಹಾಗೂ ಸರ್ಕಾರದಿಂದ ಏನೂ ತೊಂದರೆ ಆಗಬಾರದು, ಎಲ್ಲರಿಗೂ ನ್ಯಾಯ ಒದಗಿಸಿಕೊಡಬೇಕು ಎಂಬುದು ನನ್ನ ಆಶಯ' ಎಂದರು.

'ಬಡವರ ಉಪಯೋಗಕ್ಕೆ ಜನ ಕಲ್ಯಾಣ ಯೋಜನೆಗಳನ್ನು ನೀಡಲಾಗುತ್ತಿದೆ. ಮತನಾದನದ ಹಕ್ಕು ಇಲ್ಲ ಎಂದು ಯೋಜನಾ ಸೌಲಭ್ಯಗಳನ್ನು ನಿರಾಕರಿಸಿದರೆ ಜನರು ನಿಮ್ಮಿಂದಲೇ ಸೌಲಭ್ಯಗಳು ಇಲ್ಲ ಎನ್ನುತ್ತಾರೆ. ಬಿಜೆಪಿಯವರೇ ಎಸ್‌ಐಆರ್ ಮಾಡಿರಬಹುದು. ಆದರೆ, ಜನ ನಮ್ಮನ್ನು ಪ್ರಶ್ನೆ ಮಾಡುತ್ತಾರೆ' ಎಂದರು.

ಎಸ್‌ಐಆರ್ ಬಗ್ಗೆ ಮನವರಿಕೆ: 'ಹಳ್ಳಿ ಜನಕ್ಕೆ ಎಸ್‌ಐಆರ್ ಬಗ್ಗೆ ಏನು ತಿಳಿದಿರುತ್ತದೆ. ನಾವುಗಳು ಮನವರಿಕೆ ಮಾಡಬೇಕು. ಲಕ್ಷಾಂತರ ಜನ ವಲಸೆ ಕಾರ್ಮಿಕರು ಸೇರಿದಂತೆ ಜೀವನೋಪಾಯಕ್ಕೆ ಗೋವಾ ಸೇರಿದಂತೆ ಅನೇಕ ಕಡೆಗೆ ವಲಸೆ ಹೋಗಿರುತ್ತಾರೆ. ಈ ವೇಳೆ ಮನೆಗೆ ಬಂದಾಗ ಯಾರು ಇಲ್ಲದಿದ್ದರೆ ತೊಂದರೆಯಾಗುತ್ತದೆ' ಎಂದರು.

ಎಲ್ಲ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಕ್ಷದ ಹಿರಿಯ ಮುಖಂಡರು ಮತ್ತು ಆಹ್ವಾನಿತ ನಾಯಕರು ಸಭೆಯಲ್ಲಿ ಇದ್ದರು.



ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ನಾಯಕರು, ಶಾಸಕರು, ಸಂಸದರು ಭಾಗಿಯಾಗಿದ್ದರು



ಎಸ್‌ಐಆರ್ ಪ್ರಕ್ರಿಯೆ ಕುರಿತು ಚರ್ಚಿಸಲು ಸಭೆಯಲ್ಲಿ ಭಾಗವಹಿಸಿದ ಕಾಂಗ್ರೆಸ್ ನಾಯಕರು

'ಎಸ್‌ಐಆರ್ ನಡೆದರೆ ಗೆಲುವು ಖಚಿತ'

'ಎಸ್‌ಐಆರ್ ಸರಿಯಾಗಿ ನಡೆದರೆ ಗೆಲುವು ನಮ್ಮದಾಗುತ್ತದೆ. ಹೀಗಾಗಿ ಎಸ್‌ಐಆರ್ ಸರಿಯಾಗಿ ನಡೆಯಬೇಕು' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಹೇಳಿದ್ದಾರೆ.

ಎಸ್‌ಐಆರ್‌ಗೆ ರಾಜ್ಯ ಬಿಜೆಪಿ ನಾಯಕರು ಮಾಡಿಕೊಂಡಿರುವ ತಯಾರಿಯ ಬಗ್ಗೆ ಸಭೆ ನಡೆಸಿದ ಅವರು, ಈ ಪ್ರಕ್ರಿಯೆಯಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗಿಯಾಗಬೇಕೆಂದು ತಾಕೀತು ಮಾಡಿದ್ದಾರೆ.

'ಸ್ಥಳೀಯ ಸಂಸ್ಥೆ ಮಟ್ಟದಿಂದ ವಿಧಾನಸಭೆವರೆಗೂ ಕಾಂಗ್ರೆಸ್ ವಿರುದ್ಧ ರಾಜ್ಯದ ಜನರು ಆಕ್ರೋಶಭರಿತರಾಗಿದ್ದಾರೆ. ಎಸ್‌ಐಆರ್ ನಡೆದರೆ ಅನರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯಲಿದ್ದಾರೆ. ಕಾಂಗ್ರೆಸ್ ಆಡಳಿತದಿಂದ ಬೇಸತ್ತಿರುವ ಅರ್ಹ ಮತದಾರರು ಬಿಜೆಪಿಗೇ ಮತ ಹಾಕುತ್ತಾರೆ ಎಂದು ಅವರು ಸಭೆಯಲ್ಲಿ ವಿವರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಎಸ್‌ಐಆರ್ ಪ್ರಕ್ರಿಯೆಗೆ ಪಕ್ಷದಿಂದ ಗರಿಷ್ಠಮಟ್ಟದಲ್ಲಿ ಮತಗಟ್ಟೆ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಕ ಮಾಡಬೇಕು. ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಬಿಎಲ್‌ಎಗಳು ಮಾಡಬೇಕು. ಇದಕ್ಕಾಗಿ ಬಿಎಲ್‌ಎಗಳಿಗೆ ತರಬೇತಿ ಕಾರ್ಯಾಗಾರ ನಡೆಸಬೇಕು. ಎಸ್‌ಐಆರ್ ನಿರ್ವಹಣೆಗೆ ಸಮಿತಿಯೊಂದನ್ನು ರಚಿಸಿ, ಪ್ರತಿ ವಾರ ಸಭೆ ನಡೆಸಬೇಕು ಎಂದು ಸೂಚಿಸಿದ್ದಾರೆ' ಎಂದು ಮೂಲಗಳು ವಿವರಿಸಿವೆ.

'ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಕರಾರುವಾಕ್ಕಾಗಿ ನಡೆಯುವಂತೆ ಎಚ್ಚರಿಕೆ ವಹಿಸಲಾಗಿತ್ತು ಮತ್ತು ಟಿಎಂಸಿ ಸರ್ಕಾರದ ಅಕ್ರಮಗಳನ್ನು ಜನರ ಎದುರು ತೆರೆದಿಡಲಾಗಿತ್ತು. ಕರ್ನಾಟಕದಲ್ಲೂ ಹೀಗೇ ಮಾಡಬೇಕು. ಎಸ್‌ಐಆರ್ ಸರಿಯಾಗಿ ನಡೆದು ಅರ್ಹರಷ್ಟೇ ಉಳಿದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಾಲಿಕೆಗಳ ಚುನಾವಣೆಯಲ್ಲಿ ನಮ್ಮ ಗೆಲುವು ಖಚಿತವಾಗುತ್ತದೆ. ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ನಾವು ಗೆಲ್ಲಬಹುದು. ಜತೆಗೆ, 2028ರ ವಿಧಾನಸಭಾ ಚುನಾವಣೆಯಲ್ಲೂ ಗೆಲುವು ನಮ್ಮದಾಗಲಿದೆ ಎಂದಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ಎಸ್‌ಐಆರ್ ಬಗ್ಗೆ ಜನರಲ್ಲಿ ಅಪನಂಬಿಕೆ ಮೂಡಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಅದಕ್ಕೆ ಅವಕಾಶ ನೀಡಬಾರದು. ಕಾಂಗ್ರೆಸ್ ಆ ಕೆಲಸ ಮಾಡುವುದಕ್ಕೆ ಮುನ್ನವೇ ನಾವು ಜನರಲ್ಲಿ ಅರಿವು ಮೂಡಿಸಬೇಕು ಎಂದು ತಾಕೀತು ಮಾಡಿದ್ದಾರೆ' ಎಂದು ಹೇಳಿವೆ.

ವಿಶ್ವಾಸದ್ರೋಹಿ ಸರ್ಕಾರ: ನಿತಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕಾಂಗ್ರೆಸ್ ಸರ್ಕಾರವು ತನ್ನ ಆಡಳಿತದ ಮೂರೂ ವರ್ಷಗಳಲ್ಲಿ ಜನರನ್ನು ವಂಚಿಸುವ ಕೆಲಸವನ್ನಷ್ಟೇ ಮಾಡಿದೆ' ಎಂದು ನಿತಿನ್ ನವೀನ್ ಆರೋಪಿಸಿದರು.

ಪಕ್ಷದ ಪ್ರಮುಖರ ಸಮಿತಿ ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ತನ್ನ ಒಳಜಗಳದ ಕಾರಣಕ್ಕೆ ರಾಜ್ಯದ ಜನರ ಹಿತವನ್ನು ಕಡೆಗಣಿಸಿದೆ. ಜನಹಿತಕ್ಕೂ ತನಗೂ ಸಂಬಂಧವೇ ಇಲ್ಲ ಎಂಬಂತೆ ಸರ್ಕಾರ ವರ್ತಿಸುತ್ತಿದೆ' ಎಂದು ಟೀಕಿಸಿದರು.

'ಭ್ರಷ್ಟಾಚಾರ ನಿರ್ಮೂಲನೆ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಾಯಕರು, ಈಗ ತಾವೇ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ತಮಗಾಗಿ ಸರ್ಕಾರ ನಡೆಸುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳನ್ನು ಮೂಲೆಗೆ ತಳ್ಳಿದ್ದಾರೆ. ದೆಹಲಿಯ ಕಾಂಗ್ರೆಸ್ ತಂಡಕ್ಕೆ ಕರ್ನಾಟಕವು ಎಟಿಎಂ ಆಗಿದೆ' ಎಂದು ಆಪಾದಿಸಿದರು.

ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಖಂಡನೆ

'ಕನಿಷ್ಠ ವೇತನ:19 ವಲಯಕ್ಕೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಯಲ್ಲಿ ಗಾರ್ಮೆಂಟ್ಸ್ ಸೇರಿದಂತೆ 19 ಉದ್ಯಮಗಳನ್ನು ಹೊರಗಿಟ್ಟಿರುವುದನ್ನು ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (ಜಿಎಟಿಡಬ್ಲ್ಯುಯು) ಖಂಡಿಸಿದೆ.

'ವಿವಿಧ ಅನುಸೂಚಿತ ಉದ್ಯಮಗಳಲ್ಲಿ ವೇತನ ದರದಲ್ಲಿ ವ್ಯತ್ಯಾಸಗಳು ಕಂಡುಬಂದಿರುವುದರಿಂದ ಹಾಗೂ ಎಲ್ಲ ವರ್ಗದ ಕಾರ್ಮಿಕರಿಗೂ ಸಮಾನವಾದ ಕನಿಷ್ಠ ವೇತನ ದೊರೆಯಬೇಕೆಂಬ ಸದುದ್ದೇಶದಿಂದ ಈ ಪರಿಷ್ಕರಣೆ ಮಾಡಲಾಗಿದೆ' ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ. ಆದರೆ, ಸರ್ಕಾರದ ಈ ಹೇಳಿಕೆ ಸುಳ್ಳು. ಗಾರ್ಮೆಂಟ್ಸ್ ಸೇರಿದಂತೆ 19 ಉದ್ಯಮಗಳನ್ನು ಪರಿಷ್ಕರಣೆಯಿಂದ ಹೊರಗಿಡಲಾಗಿದ್ದು ಈ ಉದ್ಯಮಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕರಿಗೆ ಅನ್ಯಾಯವೆಸಗಲಾಗಿದೆ ಎಂದು ಜಿಎಟಿಡಬ್ಲ್ಯುಯು ಅಧ್ಯಕ್ಷೆ ಪ್ರತಿಭಾ ಆರ್. ತಿಳಿಸಿದ್ದಾರೆ.

ತುಂಡು ಕೆಲಸದ (ಪೀಸ್‌ವರ್ಕ್) ಸ್ವರೂಪಗಳಿರುವ ಹಾಗೂ ಶ್ರಮಿಕ ಪ್ರಾಧಾನ್ಯ ಉದ್ದಿಮೆಗಳಿಗೆ ವೇತನ ಸಂಹಿತೆ 2019ರ 8(1)ಎ ಪ್ರಕಾರ ಸಮಿತಿ ಮೂಲಕ ಕನಿಷ್ಠ ವೇತನಗಳನ್ನು ಪರಿಷ್ಕರಣೆ ಮಾಡಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ಹೇಳಿದೆ. ಅದಕ್ಕೆ ಸಮಯದ ಮಿತಿ ನಿಗದಿಪಡಿಸಿಲ್ಲ ಎಂದು ಮಾಹಿತಿ ನೀಡಲಾಗಿದೆ.

ಗಾರ್ಮೆಂಟ್ಸ್, ಬೀಡಿ ತಯಾರಿಕೆ, ಗೋಡಂಬಿ ಸಂಸ್ಕರಣೆ, ಲೋಡಿಂಗ್–ಅನ್‌ಲೋಡಿಂಗ್, ಅಗರಬತ್ತಿ, ಸಾಂಬ್ರಾಣಿ ಉತ್ಪನ್ನ ತಯಾರಿಕೆ, ಬೇಸಾಯ, ಅರಣ್ಯ ಮತ್ತು ಕಟ್ಟಿಗೆ ಡಿಪೊ, ಇಟ್ಟಿಗೆ ತಯಾರಿಕೆ, ರೇಷ್ಮೆ ಬಟ್ಟೆ ಉದ್ಯಮ, ಮೀನು ಸಂಬಂಧಿ ಉದ್ಯಮ, ಕಾಫಿ ಕ್ಯೂರಿಂಗ್, ರಬ್ಬರ್, ಚಹಾ, ಕಾಫಿ ತೋಟದ ಕೆಲಸ, ಸ್ಪಿನ್ನಿಂಗ್ ಮಿಲ್, ಬಟ್ಟೆ ತಯಾರಿಕೆ, ವಿನ್ಯಾಸ, ಹೊಲಿಗೆ, ಬಣ್ಣ, ಅಚ್ಚು ಹಾಕುವುದು, ಖಾದಿ ಮತ್ತು ಗ್ರಾಮೀಣ ಉದ್ಯೋಗ, ಶಾಮಿಯಾನ, ಚಪ್ಪರ, ಪೆಂಡಾಲ್, ಹೂವಿನ ಅಲಂಕಾರ, ಪೀಠೋಪಕರಣಗಳ ಜೋಡಣೆ ಕೆಲಸಗಾರರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಉದ್ಯೋಗಿಗಳಿಗೆ ಅನ್ಯಾಯ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

ಪರಿಷ್ಕರಣೆಯಿಂದ ಕೈ ಬಿಟ್ಟ ಉದ್ಯಮಗಳಲ್ಲಿ ಬಹುತೇಕ ದುಡಿಯುತ್ತಿರುವವರು ಬಡ ಮಹಿಳೆಯರೇ ಹೆಚ್ಚು. ಈಗಾಗಲೇ ಇತರ ಉದ್ಯಮದ ಕಾರ್ಮಿಕರಿಗಿಂತ ಅತ್ಯಂತ ಕಡಿಮೆ ವೇತನವನ್ನು ಪಡೆಯುತ್ತಿದ್ದಾರೆ. ಅದರಲ್ಲೂ ಗಾರ್ಮೆಂಟ್ಸ್ ಉದ್ಯಮಕ್ಕೆ ಕಳೆದ 40 ವರ್ಷಗಳಿಂದ ಸತತವಾಗಿ ಕನಿಷ್ಠ ವೇತನ ಪರಿಷ್ಕರಣೆಯಲ್ಲಿ ಅನ್ಯಾಯವಾಗಿದ್ದು, ಗಾರ್ಮೆಂಟ್ಸ್ ಉದ್ಯಮದಲ್ಲಿರುವ ಸುಮಾರು 4 ಲಕ್ಷ ಕಾರ್ಮಿಕರು ಪ್ರಸ್ತುತ ತಿಂಗಳಿಗೆ ₹ 13,000 ಕನಿಷ್ಠ ವೇತನ ಪಡೆದುಕೊಳ್ಳುತ್ತಿದ್ದಾರೆ. ಇದು ಇತರ ಉದ್ಯಮದ ಕಾರ್ಮಿಕರಿಗಿಂತ ಶೇ 30 ರಷ್ಟು ಕಡಿಮೆ ಎಂದು ಹೇಳಿದ್ದಾರೆ.

81 ಉದ್ಯೋಗ ವಲಯದ ಕಾರ್ಮಿಕರಿಗೆ ಶೇ 60 ರಷ್ಟು ಕನಿಷ್ಠ ವೇತನ ಹೆಚ್ಚಿಸಿರುವುದು ಸ್ವಾಗತಾರ್ಹ. ಅದೇ ರೀತಿ ಹೊರಗಿಟ್ಟಿರುವ 19 ಉದ್ಯಮಗಳನ್ನೂ ಪರಿಷ್ಕರಣೆಯ ವ್ಯಾಪ್ತಿಗೆ ತರಬೇಕು ಎಂದು ಅವರು ಆಗ್ರಹಿಸಿದ್ದಾರೆ.

26ಕ್ಕೆ ಸಿ.ಎಂ, ಡಿಸಿಎಂಗೆ ಹೈಕಮಾಂಡ್ ಬುಲಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 26 ರಂದು ದೆಹಲಿಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪಕ್ಷದ ಹೈಕಮಾಂಡ್‌ನಿಂದ ಬುಲಾವ್ ಬಂದಿದೆ.

ಎಸ್‌ಐಆರ್ ಪ್ರಕ್ರಿಯೆ ಕುರಿತು ಕೆಪಿಸಿಸಿ ವತಿಯಿಂದ ದೇವನಹಳ್ಳಿಯಲ್ಲಿ ಭಾನುವಾರ ನಡೆಯುತ್ತಿದ್ದ ರಾಜ್ಯ ಕಾಂಗ್ರೆಸ್ ನಾಯಕರ ಸಭೆಯಲ್ಲಿ ಇಬ್ಬರು ನಾಯಕರು ಭಾಗವಹಿಸಿದ್ದ ವೇಳೆಯಲ್ಲಿ ಎಐಸಿಸಿ ವರಿಷ್ಠರು ದೂರವಾಣಿ ಕರೆ ಮಾಡಿದ್ದಾರೆ.

ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ಹಾಗೂ ಸಂಪುಟ ಪುನರ್‌ರಚನೆ ಕುರಿತು ತೀವ್ರಗೊಂಡಿರುವ ಚರ್ಚೆ, ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಚುನಾವಣೆಯ ಘೋಷಣೆ ಬೆನ್ನಲ್ಲೆ ಇಬ್ಬರನ್ನೂ ದೆಹಲಿಗೆ ಆಹ್ವಾನಿಸಿರುವುದು ಕಾಂಗ್ರೆಸ್ ಆಂತರಿಕ ವಲಯದಲ್ಲಿ ಕುತೂಹಲ ಮೂಡಿಸಿದೆ.

ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ನಂತರ ಕರ್ನಾಟಕದ ರಾಜಕೀಯ ಬೆಳವಣಿಗೆಗಳ ಕುರಿತು ಗಮನಹರಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಕೇರಳದಲ್ಲಿ ಸರ್ಕಾರ ರಚನೆಯ ಬಳಿಕ ಕರ್ನಾಟಕದ ಗೊಂದಲಗಳ ಬಗ್ಗೆ ದೆಹಲಿ ಮಟ್ಟದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಮಾತುಕತೆ ನಡೆಸಿ ಸಮಸ್ಯೆಯನ್ನು ಇತ್ಯರ್ಥಪಡಿಸುವ ಭರವಸೆಯನ್ನು ವರಿಷ್ಠರು ನೀಡಿದ್ದರು.

ಜೂನ್ 18ರಂದು ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಪಕ್ಷದಿಂದ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸುವ ಕುರಿತು ಉಭಯ ನಾಯಕರ ಜೊತೆ ಹೈಕಮಾಂಡ್ ನಾಯಕರು ಮಾತುಕತೆ ನಡೆಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಮುಂಗಾರು ಬಿತ್ತನೆ...

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ



ಮುಂಗಾರು ಪೂರ್ವ ಮಳೆ ಸುರಿದ ಹಿನ್ನೆಲೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನ ಸಂಶಿ ಗ್ರಾಮದ ಹೊಲವೊಂದರಲ್ಲಿ ರೈತರು ಭಾನುವಾರ ಬಿತ್ತನೆ ಕಾರ್ಯ ನಡೆಸಿದರು

'ಬಿಡದಿ: ಚರ್ಚೆಗೆ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಬಿಡದಿ ಟೌನ್‌ಶಿಪ್ ಕುರಿತ ಚರ್ಚೆಗೆ ಡಿ.ಕೆ.ಶಿವಕುಮಾರ್ ಅವರು ಸವಾಲು ಹಾಕಿದ್ದರು. ನಾನು ಚರ್ಚೆಗೆ ಸಿದ್ಧನಿದ್ದೇನೆ' ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಬಿಡದಿ ಚರ್ಚೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಸಿದ್ಧ ನಿದ್ದೇನೆ.ಅವರಿಗೆ ಬಿಡುವಿಲ್ಲ ರೇಟ್ ಫಿಕ್ಸ್, ವಸೂಲಿ ಫಿಕ್ಸ್ ಮಾಡುತ್ತಿದ್ದಾರೆ. ಬಿಡುವು ಮಾಡಿಕೊಂಡು ಚರ್ಚೆಗೆ ಬರಲಿ' ಎಂದು ಹೇಳಿದರು.

ಇದಕ್ಕೂ ಮುನ್ನ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ನಾಯಕರ ಜತೆ ಕುಮಾರಸ್ವಾಮಿ ಸಭೆ ನಡೆಸಿದರು. ಜಿಬಿಎ ಪಾಲಿಕೆಗಳ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಿ ಎಂದು ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ಜಾಹ್ನವಿ ಜೆಡಿಎಸ್ ಸೇರ್ಪಡೆ: ಬಿಗ್‌ಬಾಸ್–12 ರಿಯಾಲಿಟಿ ಷೋ ಮಾಜಿ ಸ್ಪರ್ಧಿ, ಟಿ.ವಿ ನಿರೂಪಕಿ ಜಾಹ್ನವಿ ಅವರು ಭಾನುವಾರ ಜೆಡಿಎಸ್ ಪಕ್ಷಕ್ಕೆ ಸೇರಿದರು.



ಕುಮಾರಸ್ವಾಮಿ

ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ಧ್ವಜ ನೀಡಿ, ಜಾಹ್ನವಿ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಜೆಡಿಎಸ್ ಮಹಿಳಾ ಘಟಕವನ್ನು ಬಲಪಡಿಸುವ ಸಲುವಾಗಿ ಜಾಹ್ನವಿ ಅವರನ್ನು ಪಕ್ಷಕ್ಕೆ ಕರೆತರಲಾಗಿದೆ. ಜೆಡಿಎಸ್‌ನ ಸಿದ್ಧಾಂತಗಳ ಬಗ್ಗೆ ಒಲವಿರುವ ಕಾರಣಕ್ಕೆ ಜಾಹ್ನವಿ ಅವರೂ ಪಕ್ಷದ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜೆಡಿಎಸ್ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಘಟಕದ ಅಧ್ಯಕ್ಷ ರಮೇಶ್‌ಗೌಡ, ಮಹಿಳಾ ಘಟಕದ ಅಧ್ಯಕ್ಷ ರಶ್ಮಿ ರಾಮೇಗೌಡ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ಭಯೋತ್ಪಾದನೆಗೆ ಎ.ಐ ದುರ್ಬಳಕೆ'

ದೆಹಲಿಯ ಕೆಂಪುಕೋಟೆ ಕಾರು ಬಾಂಬ್ ಸ್ಫೋಟ ಪ್ರಕರಣ

ಮುಖ್ಯಾಂಶಗಳು
- ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ
- ಅನ್ಸಾರ್ ಗಜ್ವತ್–ಉಲ್– ಹಿಂದ್‌ಗೆ ಸೇರಿದ ಆರೋಪಿ
- ವ್ಯವಸ್ಥಿತ ವಿಧಾನ ರೂಪಿಸಿಕೊಂಡಿದ್ದ ಆರೋಪಿಗಳು

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಸಮೀಪ ಕಾರು ಬಾಂಬ್ ಸ್ಫೋಟ ಪ್ರಕರಣದ ಆರೋಪಿಯೊಬ್ಬ ಭಯೋತ್ಪಾದನೆಗಾಗಿ ಕೃತಕ ಬುದ್ಧಿಮತ್ತೆ (ಎ.ಐ) ವೇದಿಕೆಯನ್ನು ದುರುಪಯೋಗ ಪಡಿಸಿಕೊಂಡಿರುವುದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪತ್ತೆಹಚ್ಚಿದೆ.

ಕಳೆದ ವರ್ಷ ನವೆಂಬರ್ 10ರಂದು ನಡೆದಿದ್ದ ಸ್ಫೋಟ ಪ್ರಕರಣ ಸಂಬಂಧ ತನಿಖಾ ಸಂಸ್ಥೆಯು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಮೇ 14ರಂದು ಸಲ್ಲಿಸಿದ 7,500 ಪುಟಗಳ ದೋಷಾರೋಪಪಟ್ಟಿಯಲ್ಲಿ ಈ ಅಂಶಗಳ ಬಗ್ಗೆ ವಿವರಿಸಲಾಗಿದೆ.

ದೋಷಾರೋಪ ಪಟ್ಟಿಯಲ್ಲಿ ಹೆಸರಿಸಿರುವ ಆರೋಪಿಯೊಬ್ಬ 'ಅಲ್–ಕೈದಾ' ಸಂಘಟನೆಗೆ ಸೇರಿದ 'ಅನ್ಸಾರ್ ಗಜ್ವತ್– ಉಲ್– ಹಿಂದ್'ನ (ಎಜಿಯುಎಚ್) ಎಂಜಿನಿಯರ್ ಆಗಿದ್ದ ಎನ್ನುವುದು ಗೊತ್ತಾಗಿದೆ. ಭಾರತ ಉಪಖಂಡದಲ್ಲಿ ಅಲ್ ಕೈದಾ (ಎಕ್ಯುಐಎಸ್) ಮತ್ತು ಅದರ ಅಂಗ ಸಂಸ್ಥೆಗಳನ್ನು ಭಯೋತ್ಪಾದಕ ಸಂಘಟನೆಗಳೆಂದು ಗೃಹ ಸಚಿವಾಲಯ ಘೋಷಿಸಿದೆ.

ಆರೋಪಿಗಳು ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಕಾಜಿಗುಂಡ್ ಅರಣ್ಯದಲ್ಲಿ ಕಚ್ಚಾ ಬಾಂಬ್ (ಐಇಡಿ) ತಯಾರಿಸಿ ಪರೀಕ್ಷಿಸಿದ್ದಾರೆ. ಅಲ್ಲದೆ, ಇವುಗಳನ್ನು ತಯಾರಿಸಲು, ಬಳಸಲು ಅಳವಡಿಸಿಕೊಂಡಿದ್ದ ಅತ್ಯಂತ ನಿಖರವಾದ ಹಾಗೂ ವ್ಯವಸ್ಥಿತ ವಿಧಾನವನ್ನು ರೂಪಿಸಿಕೊಂಡಿರುವ ಬಗ್ಗೆ ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಪ್ರಕರಣದ ಆರೋಪಿ ಜಸೀರ್ ಬಿಲಾಲ್ ವಾನಿ 2024–25ರ ಅವಧಿಯಲ್ಲಿ ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವಿ.ವಿ ಆವರಣದಲ್ಲಿ 2–3 ಬಾರಿ ತಂಗಿದ್ದ. ಈ ಪಿತೂರಿಗೆ ತಾಂತ್ರಿಕ ಬೆಂಬಲ ನೀಡಿದ್ದ. ಪ್ರಕರಣದ ಮುಖ್ಯ ಸಂಚುಕೋರ ಡಾ. ಉಮರ್ ಉನ್ ನಬಿಯನ್ನು ಜಸೀರ್ ಬಿಲಾಲ್ ವಾನಿಗೆ ಡಾ. ಆದಿಲ್ ಅಹ್ಮದ್ ರಾದರ್ ಪರಿಚಯಿಸಿದ್ದ ಎಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿದೆ. ಈ ಸ್ಫೋಟದಲ್ಲಿ 11 ಜನರು ಮೃತಪಟ್ಟು, ಅನೇಕರು ಗಾಯಗೊಂಡಿದ್ದರು.

'ಅರಾಜಕತೆ ಸೃಷ್ಟಿಸಿ ಸರ್ಕಾರ ಪತನ ಯತ್ನ'

ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಮುಖಂಡರ ಆರೋಪ


ಮುಖ್ಯಾಂಶಗಳು
- ಸರ್ಕಾರವನ್ನು ಅಸ್ಥಿರಗೊ-ಳಿಸುವ ಪಿತೂರಿ
- ವಿದೇಶಿ ಶಕ್ತಿಗಳ ಕಾರ್ಯಸೂಚಿಯಂತೆ ಕೆಲಸ

ನವದೆಹಲಿ (ಪಿಟಿಐ): 'ನರೇಂದ್ರ ಮೋದಿ ಅವರ ಸರ್ಕಾರ ಒಂದು ವರ್ಷದಲ್ಲಿ ಪತನವಾಗಲಿದೆ ಎಂದು ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ಸಲಹಾ ಮಂಡಳಿ ಸಭೆಯಲ್ಲಿ ರಾಹುಲ್ ಗಾಂಧಿ ಹೇಳಿದ್ದಾರೆ' ಎಂದು ಹಲವು ಬಿಜೆಪಿ ನಾಯಕರು ಭಾನುವಾರ ಆರೋಪಿಸಿದ್ದಾರೆ.

ಕೇಂದ್ರ ಸಚಿವ ಪೀಯೂಷ್ ಗೋಯಲ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಸಂಬಿತ್ ಪಾತ್ರಾ ಸೇರಿದಂತೆ ಬಿಜೆಪಿಯ ಹಲವು ನಾಯಕರು ಭಾನುವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಟೀಕೆಗಳನ್ನು ಮಾಡಿದ್ದಾರೆ.

ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು,'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಮೂಲಕ ನರೇಂದ್ರ ಮೋದಿ ಅವರ ಸರ್ಕಾರವನ್ನು ಅಸ್ಥಿರಗೊಳಿಸುವ ಪಿತೂರಿ ನಡೆಸುತ್ತಿದ್ದಾರೆ' ಎಂದಿದ್ದಾರೆ.

'ರಾಹುಲ್ ಅವರ ಹೇಳಿಕೆ ಕಾಂಗ್ರೆಸ್ ಮತ್ತು ಕೆಲವು ವಿರೋಧಪಕ್ಷಗಳ ದೊಡ್ಡ ಷಡ್ಯಂತ್ರ ಬಯಲು ಮಾಡಿದೆ. ಅವರ 'ಟೂಲ್‌ಕಿಟ್ ಗ್ಯಾಂಗ್' ಭಾರತವನ್ನು ಅಸ್ಥಿರಗೊಳಿಸುವ ಕನಸು ಕಾಣುತ್ತಿದೆ. ವಿದೇಶಿ ಶಕ್ತಿಗಳ ಕಾರ್ಯಸೂಚಿಯಂತೆ ರಾಹುಲ್ ಕೆಲಸ ಮಾಡುತ್ತಿದ್ದಾರೆ' ಎಂದು ಗೋಯಲ್ ಹೇಳಿದ್ದಾರೆ.



ರಾಹುಲ್ ಗಾಂಧಿ



ಪಿಯೂಷ್ ಗೋಯಲ್

'ಚುನಾವಣೆ ಮೂಲಕ ಬಿಜೆಪಿಯನ್ನು ಸೋಲಿಸಲಾಗದು ಎಂದು ಗೊತ್ತಾದ ನಂತರ ಕಾಂಗ್ರೆಸ್ ದೇಶದಲ್ಲಿ ಹಿಂಸೆಗೆ ಚಿತಾವಣೆ ನೀಡುವ ಪ್ರಯತ್ನ ನಡೆಸಿದೆ. ದೇಶದ ಜನರಿಗೆ ರಾಹುಲ್ ಗಾಂಧಿ ಅವರ ನಿಜಬಣ್ಣ ಅರಿವಾಗಿದೆ. ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗಿರುವ ಅವರ ಟೂಲ್‌ಕಿಟ್ ಗ್ಯಾಂಗ್‌ನ ಮುಖವಾಡ ಗೊತ್ತಿದೆ. ಹೀಗಾಗಿ 'ಇಂಡಿ' ಮೈತ್ರಿಕೂಟಕ್ಕೆ ತಕ್ಕ ಉತ್ತರ ನೀಡಲಿದ್ದಾರೆ' ಎಂದರು.

> ಎನ್‌ಡಿಎ ಸರ್ಕಾರ ಪತನವಾಗಲಿದೆ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆ ಹಗಲುಗನಸು ಕಾಣುವಂಥದ್ದು ಮತ್ತು ಕೇವಲ ಕಲ್ಪನೆಯಾಗಿದೆ
>
> **ದೇವೇಂದ್ರ ಫಡಣವೀಸ್,** ಮಹಾರಾಷ್ಟ್ರ ಮುಖ್ಯಮಂತ್ರಿ

> ರಾಹುಲ್ ಹೇಳಿಕೆ ಅವರ ರಾಜಕೀಯ ಹತಾಶೆ ಮಾತ್ರವಲ್ಲ, ಭಾರತವನ್ನು ಅಸ್ಥಿರಗೊಳಿಸುವ ಅಪಾಯಕಾರಿ ಮನಸ್ಥಿತಿಯನ್ನೂ ಬಯಲು ಮಾಡಿದೆ
>
> **ಸುಧಾಂಶು ತ್ರಿವೇದಿ,** ಬಿಜೆಪಿ ರಾಜ್ಯಸಭೆ ಸದಸ್ಯ

> ರಾಹುಲ್ ವಿದೇಶ ಪ್ರವಾಸಕ್ಕೆ ಆರ್ಥಿಕ ನೆರವು ನೀಡುವ ವಿದೇಶಿ ಕಂಪನಿಗಳು ಮತ್ತು ಜಾರ್ಜ್ ಸೋರೋಸ್ ಅಂಥವರ 'ವಿದೇಶಿ ಕಾರ್ಯಸೂಚಿ'ಯ ಭಾಗವೇ ಈ ಹೇಳಿಕೆ
>
> **ಸಂಬಿತ್ ಪಾತ್ರಾ,** ಬಿಜೆಪಿ ರಾಷ್ಟ್ರೀಯ ವಕ್ತಾರ

ಹಾಲುಮತ ಉದ್ಯಮಿಗಳ ಸಂಘ ಆಯೋಜಿಸಿದ್ದ ಕನಕೋದ್ಯಮಿಗಳ ಸಮ್ಮಿಲನದಲ್ಲಿ ಎಚ್‌.ಎಂ.ರೇವಣ್ಣ ಹೇಳಿಕೆ

'ಎಲ್ಲ ಪಕ್ಷಗಳು ಕುರುಬರನ್ನು ಸೆಳೆಯುತ್ತಿವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುರುಬ ಸಮಾಜ ಸಂಘಟಿತವಾಗಿರುವ ಕಾರಣ ಎಲ್ಲ ರಾಜಕೀಯ ಪಕ್ಷಗಳು ನಮ್ಮ ಸಮುದಾಯವನ್ನು ಸೆಳೆಯಲು ಮುಂದಾಗುತ್ತಿವೆ' ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್‌.ಎಂ.ರೇವಣ್ಣ ಹೇಳಿದರು.

ಹಾಲುಮತ ಉದ್ಯಮಿಗಳ ಸಂಘ ಭಾನುವಾರ ಆಯೋಜಿಸಿದ್ದ ಕನಕೋದ್ಯಮಿಗಳ ಸಮ್ಮಿಲನ ಹಾಗೂ ಉದ್ಯಮಿಗಳಿಗೆ ಅವಕಾಶಗಳ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕನಕದಾಸರ ಜಯಂತಿ ಆಚರಣೆ ಮಾಡಿದ ಪರಿಣಾಮ ನಮ್ಮ ಸಮುದಾಯ ಸಂಘಟಿತವಾಗಿದೆ. ಇತ್ತೀಚೆಗೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು 'ನಾನು ಕುರುಬ ಸಮುದಾಯವನ್ನು ಸಂಘಟಿಸುವ ಕೆಲಸ ಮಾಡುತ್ತೇನೆ' ಎಂಬ ಹೇಳಿಕೆ ನೀಡಿದ್ದಾರೆ. ಎಲ್ಲ ಪಕ್ಷಗಳಲ್ಲಿ ನಮ್ಮ ಸಮುದಾಯದ ನಾಯಕರಿದ್ದಾರೆ. ಕುರುಬ ಸಮುದಾಯದ ನಾಯಕರನ್ನು ಬೆಳೆಸುವ ಕೆಲಸ ಆಗಬೇಕು. ಪಕ್ಷ ಅಥವಾ ಸಮುದಾಯ ಅಂತ ಬಂದಾಗ ನಾನು ಸಮಾಜದ ಪರವಾಗಿ ಕೆಲಸ ಮಾಡುತ್ತೇನೆ' ಎಂದರು.

'ಕುರುಬ ಸಮುದಾಯ ಪರಿಶಿಷ್ಟ ಪಂಗಡಕ್ಕೆ ಸೇರಿದ್ದರೆ ನಮ್ಮ ಸಮುದಾಯದ ಉದ್ಯಮಿಗಳಿಗೆ ಸರ್ಕಾರದ ಅನೇಕ ಸೌಲಭ್ಯಗಳು ದೊರೆಯುತ್ತಿದ್ದವು. ಈ ನಿಟ್ಟಿನಲ್ಲಿ ಹೋರಾಟ ನಡೆಯುತ್ತಿದೆ' ಎಂದು ತಿಳಿಸಿದರು.

'ಕರ್ನಾಟಕ ಪ್ರದೇಶ ಕೈಗಾರಿಕಾ ಅಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ಹಂಚಿಕೆ ಮಾಡುವ ನಿವೇಶನಗಳಲ್ಲಿ ಕುರುಬ ಸಮುದಾಯಕ್ಕೆ ಕೆಲ ನಿವೇಶನಗಳನ್ನು ಮೀಸಲಿಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಜಾರಿಗೊಳಿಸಲು ಹೊರಟಿರುವ ನೂತನ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡುವಂತೆ ಪೀಣ್ಯ ಕೈಗಾರಿಕಾ ಸಂಘದ ನಿಕಟಪೂರ್ವ ಅಧ್ಯಕ್ಷ ಆರ್. ಶಿವಕುಮಾರ್ ಅವರು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಎಚ್. ಎಂ. ರೇವಣ್ಣ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರೊಂದಿಗೆ ಈ ಬಗ್ಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.



ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ. ಆರ್. ಹುಲಿನಾಯ್ಕರ್, ಎಚ್. ಎಂ. ರೇವಣ್ಣ, ರಾಮೋಹಳ್ಳಿ ರಾಮಕೃಷ್ಣ ಯೋಗಾಶ್ರಮದ ಯೋಗೇಶ್ವರಾನಂದ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠ ಹೊಸದುರ್ಗ ಶಾಖಾಮಠದ ಈಶ್ವರಾನಂದಪುರಿ ಸ್ವಾಮೀಜಿ, ಬಂಡೆಪ್ಪ ಕಾಶೆಂಪೂರ್, ಹಾಲುಮತ ಉದ್ಯಮಿಗಳ ಸಂಘದ ಅಧ್ಯಕ್ಷ ಸುನಿಲ್ ಜಯರಾಜ್, ಇನ್‌ಸೈಟ್ ಐಎಎಸ್ ಅಕಾಡೆಮಿ ಸಂಸ್ಥಾಪಕ ಬಿ.ಜಿ. ವಿನಯ್ ಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಗ್ಯಾರಂಟಿ ಬಂದ್ ಮಾಡಿ ನೌಕರಿ ಕೊಡಿ'

'ರಾಜ್ಯದಲ್ಲಿ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳನ್ನು ಬಂದ್ ಮಾಡಿ, ಮನೆಗೊಂದು ನೌಕರಿ ಕೊಡುತ್ತೇವೆ ಎಂಬ ಭರವಸೆ ನೀಡಬೇಕು' ಎಂದು ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್ ಒತ್ತಾಯಿಸಿದರು.

'ಎಲ್ಲ ಗ್ಯಾರಂಟಿ ಯೋಜನೆಗಳನ್ನು ಬಂದ್ ಮಾಡಿ, ನಿರುದ್ಯೋಗಿಗಳಿಗೆ ನೌಕರಿ ನೀಡಿದರೆ ಎಲ್ಲರೂ ಸಂತೋಷದಿಂದ ಇರುತ್ತಾರೆ. ಮೊದಲು ನಾವು ಈ ಯೋಜನೆಗಳಿಗೆ ವಿರೋಧ ಮಾಡಿದ್ದೇವೆ. ಆದರೆ ಚುನಾವಣೆಯ ಸಂದರ್ಭದಲ್ಲಿ ಮತಕ್ಕಾಗಿ ಇಂತಹ ಯೋಜನೆಗಳನ್ನು ಜಾರಿ ಮಾಡುವ ಭರವಸೆ ನೀಡುತ್ತಿದ್ದೇವೆ' ಎಂದು ತಿಳಿಸಿದರು.

'ಗ್ರಾಮೀಣ ಭಾಗದಲ್ಲಿರುವ ನಮ್ಮ ಸಮುದಾಯದ ಯುವಕರಿಗೆ ಉದ್ಯಮಿಗಳಾಗುವ ನಿಟ್ಟಿನಲ್ಲಿ ಕೌಶಲ ತರಬೇತಿ ನೀಡಬೇಕು. ನವೋದ್ಯಮಿಗಳಿಗೆ ಹಲವಾರು ಅವಕಾಶಗಳಿವೆ' ಎಂದರು.



ಜ್ವರೇವ್ ಶುಭಾರಂಭ
ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರು ಭಾನುವಾರ ಆರಂಭವಾದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ 6–3, 6–4, 6–2ರಿಂದ ಫ್ರಾನ್ಸ್‌ನ ಬೆಂಜಮಿನ್ ಬೊಂಜಿ ಅವರನ್ನು ಸೋಲಿಸಿ, ಶುಭಾರಂಭ ಮಾಡಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಗೃಹ ಸಾಲ ತೀರಿಸಲು ಸೂಪರ್ ಟ್ರಿಕ್ 10

‘ದೇವೇಗೌಡರ ಮರು ಆಯ್ಕೆಗೆ ಕೋರಿಲ್ಲ’

ಬೆಂಗಳೂರು: ‘ಎಚ್.ಡಿ.ದೇವೇಗೌಡ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿ ಎಂದು ನಾವು ಯಾರನ್ನೂ ಕೇಳಿಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಮ್ಮ ಮಿತ್ರ ಪಕ್ಷ ಬಿಜೆಪಿಗೆ ರಾಜ್ಯ ವಿಧಾನಸಭೆಯಲ್ಲಿ 63 ಸ್ಥಾನಗಳಿವೆ. ಯಾರನ್ನು ಆಯ್ಕೆ ಮಾಡಬೇಕು ಎಂಬುದನ್ನು ಅವರೇ ನಿರ್ಧರಿಸುತ್ತಾರೆ. ಅದು ಅವರಿಗೆ ಬಿಟ್ಟ ವಿಚಾರ’ ಎಂದರು.

‘ಈ ವಿಚಾರದಲ್ಲಿ ನಾನಾಗಲೀ, ದೇವೇಗೌಡರಾಗಲಿ ಯಾರೊಂದಿಗೂ ಚರ್ಚಿಸಿಲ್ಲ. ಇನ್ನೊಬ್ಬರ ಅವಕಾಶವನ್ನು ತಪ್ಪಿಸಿ, ನಾವು ಆ ಸ್ಥಾನವನ್ನು ಕಸಿದುಕೊಳ್ಳುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ





‘ದ್ವೇಷ ಭಾಷಣ’: ಕೇಂದ್ರ ಅಡ್ಡಿ

ಪ್ರಸ್ತಾವಿತ ಮಸೂದೆ ಈ ಹಂತದಲ್ಲಿ ಅಗತ್ಯವಿಲ್ಲ: ಗೃಹ ಸಚಿವಾಲಯ ಅಭಿಪ್ರಾಯ

• ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು
- ಬೆಳಗಾವಿ ಅಧಿವೇಶನದಲ್ಲಿ ಅಂಗೀಕಾರ ಗೊಂಡಿದ್ದ ಮಸೂದೆ
- ರಾಷ್ಟ್ರಪತಿ ಅಂಕಿತಕ್ಕೆ ಕಾಯ್ದಿರಿಸಿದ್ದ ರಾಜ್ಯಪಾಲ
- ಪ್ರಸ್ತಾವಿತ ಮಸೂದೆಯ ಅಗತ್ಯ ಪ್ರಶ್ನಿಸಿದ ಕೇಂದ್ರ

ಬೆಂಗಳೂರು: ದ್ವೇಷ ಭಾಷಣ ಮತ್ತು ದ್ವೇಷಾಪರಾಧ ಎಸಗುವವರನ್ನು ಶಿಕ್ಷೆಗೆ ಗುರಿಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ರೂಪಿಸಿರುವ ಮಹತ್ವಾಕಾಂಕ್ಷಿ ಮಸೂದೆಗೆ ಕೇಂದ್ರ ಸರ್ಕಾರ ಅಡ್ಡಗಾಲು ಹಾಕಿದೆ.



ದ್ವೇಷ ಭಾಷಣ ಹಾಗೂ ದ್ವೇಷಾಪರಾಧಗಳನ್ನು ತಡೆಯಲು ‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳು (ಪ್ರತಿಬಂಧಕ) ಮಸೂದೆ -2025’ ಅನ್ನು ಸಿದ್ಧಪಡಿಸಿ, ಅಂಕಿತಕ್ಕಾಗಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಸರ್ಕಾರ ಕಳುಹಿಸಿತ್ತು. ಆದರೆ, ಹಲವು ಕಾರಣಗಳನ್ನು ನೀಡಿ ಅಂಕಿತ ಹಾಕಲು ನಿರಾಕರಿಸಿದ್ದ ರಾಜ್ಯಪಾಲರು, ಮಸೂದೆಯನ್ನು ರಾಷ್ಟ್ರಪತಿಯ ವಿವೇಚನೆಗೆ ಕಾಯ್ದಿರಿಸಿದ್ದರು. ರಾಜ್ಯ ಸರ್ಕಾರ ರಾಷ್ಟ್ರಪತಿಯ ಅಂಕಿತಕ್ಕೆ ರವಾನಿಸಿತ್ತು.

ಆದರೆ, ‘ಇಂಥದ್ದೊಂದು ಮಸೂದೆಯ ಅಗತ್ಯ ಇದೆಯೇ’ ಎಂದು ಪ್ರಶ್ನಿಸಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಪತ್ರ ಬರೆದಿದೆ.

‘ಪ್ರಸ್ತಾವಿತ ಮಸೂದೆಯಲ್ಲಿರುವ ಅಂಶಗಳು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)- 2023ರ ವ್ಯಾಪ್ತಿಯಲ್ಲಿ ಮತ್ತು ಈಗಾಗಲೇ ಜಾರಿಯಲ್ಲಿರುವ ಕಾನೂನುಗಳ ಅಡಿಯಲ್ಲಿ ಸೇರಿಕೊಂಡಿವೆ. ಹೀಗಿರುವಾಗ, ರಾಜ್ಯ ಸರ್ಕಾರವು ಪ್ರತ್ಯೇಕ ಕಾನೂನು ಜಾರಿಗೊಳಿಸುವುದರಿಂದ ನಕಲು ಅಥವಾ ಏಕರೂಪತೆಯ ಕೊರತೆ ಆಗಬಹುದು’ ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ (ಕೇಂದ್ರ–ರಾಜ್ಯ ವಿಭಾಗ) ತನ್ನ ಪತ್ರದಲ್ಲಿ ಅಭಿಪ್ರಾಯಪಟ್ಟಿದೆ.

‘ಈ ಅಂಶಗಳ ಕಾರಣಕ್ಕೆ ಪ್ರಸ್ತಾವಿತ ಮಸೂದೆಯು ಈ ಹಂತದಲ್ಲಿ ಅಗತ್ಯವಿಲ್ಲವೆಂದು ಭಾವಿಸಲಾಗಿದೆ. ಅಲ್ಲದೆ, ಈ ಮಸೂದೆಯಲ್ಲಿ ಉಲ್ಲೇಖಿಸಿರುವ ಎಲ್ಲ ಕಳವಳಗಳನ್ನು ಪರಿಹರಿಸಲು ಸದ್ಯ ಜಾರಿಯಲ್ಲಿರುವ ಕಾನೂನು ಚೌಕಟ್ಟು ಸಾಕು’ ಎಂದೂ ಸಚಿವಾಲಯ ಸ್ಪಷ್ಟವಾಗಿ ಹೇಳಿದೆ. ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಈ ಅಭಿಪ್ರಾಯ ನೀಡಲಾಗಿದೆ ಎಂದು ತಮ್ಮ ಇಲಾಖೆಯ ಕಾನೂನು ಘಟಕಕ್ಕೆ ಸಚಿವಾಲಯದ ಉಪ ಕಾರ್ಯದರ್ಶಿ ಸುಭಾಷ್ ಕುಮಾರ್ ತಿಳಿಸಿದ್ದಾರೆ.

▶ 7

ಮಸೂದೆಯಲ್ಲಿ ಏನಿದೆ?



ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಸಿದ್ಧಪಡಿಸಿದ್ದ ಈ ಮಸೂದೆಯು 2025ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದಿದ್ದ ವಿಧಾನಮಂಡಲ ಅಧಿವೇಶನದಲ್ಲಿ ಬಿಜೆಪಿ ಸದಸ್ಯರ ತೀವ್ರ ವಿರೋಧ ಮತ್ತು ಪ್ರತಿಭಟನೆ ನಡುವೆ ಅಂಗೀಕಾರಗೊಂಡಿತ್ತು. ದ್ವೇಷ ಭಾಷಣ ಪ್ರಸರಣೆ, ಪ್ರಕಟಣೆ, ಪ್ರಚಾರ ತಡೆಯಲು, ನಿರ್ದಿಷ್ಟ ವ್ಯಕ್ತಿ, ಸಮೂಹ, ಸಂಸ್ಥೆಗಳ ವಿರುದ್ಧ ದ್ವೇಷ ಹುಟ್ಟಿಸುವ ಅಪರಾಧಗಳನ್ನು ತಡೆಯಲು ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಮೊದಲ ಬಾರಿಗೆ ದ್ವೇಷ ಭಾಷಣ ಮಾಡಿದರೆ ಅಥವಾ ದ್ವೇಷ ಅಪರಾಧದಲ್ಲಿ ಭಾಗಿಯಾದರೆ ಕನಿಷ್ಠ 1 ವರ್ಷ, ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ, ಪುನರಾವರ್ತನೆ ಮಾಡಿದರೆ ಕನಿಷ್ಠ 2 ವರ್ಷದಿಂದ ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ, ₹1 ಲಕ್ಷ ದಂಡ ವಿಧಿಸಲು ಅವಕಾಶ ನೀಡಲಾಗಿತ್ತು. ದ್ವೇಷ ಭಾಷಣ ಮಾಡಿದರೆ ಕಾನೂನಿನ ಅಡಿಯಲ್ಲಿ ಪ್ರಕರಣ ದಾಖಲಾದರೆ ಜಾಮೀನುರಹಿತ ಪ್ರಕರಣವಾಗಲಿದೆ. ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಮೂಲಕ ದ್ವೇಷ ಭಾಷಣಗಳ ವಿಚಾರಣೆಗೂ ಅವಕಾಶ ನೀಡಲಾಗಿದೆ.

ಶಿರಾಲಿ ಅಳ್ವೆಕೋಡಿಯಲ್ಲಿ ದುರಂತ

ಭಟ್ಕಳ: 10 ಮಂದಿ ಜಲಸಮಾಧಿ

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಚಿಪ್ಪಿಕಲ್ಲು ಆರಿಸಿ ತರಲು ತಾಲ್ಲೂಕಿನ ಶಿರಾಲಿ ಅಳ್ವೆಕೋಡಿಯ ತಟ್ಟಿಹಕ್ಕಲ ಕಳಿನಟ್ಟಿ ಹೊಳೆಗೆ ಇಳಿದಿದ್ದ, ಶಾರದಾಹೊಳೆ ಗ್ರಾಮದ 10 ಮಂದಿ ಭಾನುವಾರ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮೃತರು ಸಂಬಂಧಿಕರು.

ಲಕ್ಷ್ಮಿ ಮಹಾದೇವ ನಾಯ್ಕ (40), ಉಮೇಶ ಮಂಜುನಾಥ ನಾಯ್ಕ (25), ಲಕ್ಷ್ಮಿ ಮಾದೇವ ನಾಯ್ಕ (40), ಲಕ್ಷ್ಮಿ ಅಣ್ಣಪ್ಪ ನಾಯ್ಕ (50), ಲಕ್ಷ್ಮಿ ಶಿವರಾಮ ನಾಯ್ಕ (40), ಜ್ಯೋತಿ ನಾಗಪ್ಪ ನಾಯ್ಕ (40), ಮಾಲತಿ ಜಟ್ಟಪ್ಪ ನಾಯ್ಕ (38), ಮಾಸ್ತಮ್ಮ ಮಂಜುನಾಥ ನಾಯ್ಕ (45), ಮಂಜಮ್ಮ ಗೊಯ್ದ ನಾಯ್ಕ (40), ನಾಗರತ್ನ ಪರಮೇಶ್ವರ ನಾಯ್ಕ (38) ಮೃತರು. ಅಳ್ವೆಕೋಡಿಯಲ್ಲಿ ಶವಗಳು ಪತ್ತೆಯಾಗಿವೆ.

ಮಾದೇವ ಬೈರಪ್ಪ ನಾಯ್ಕ (45) ಅವರು ಕಣ್ಮರೆಯಾಗಿದ್ದು, ಅವರ ಪತ್ತೆಗಾಗಿ ಶೋಧ ಕಾರ್ಯಾಚರಣೆ ನಡೆದಿದೆ. ತೀವ್ರ ಅಸ್ವಸ್ಥಗೊಂಡಿದ್ದ ಮಾದೇವಿ ಮಂಜುನಾಥ ನಾಯ್ಕ (60), ಲತಾ ಜಗದೀಶ ನಾಯ್ಕ (38), ನಾಗರತ್ನ ಈಶ್ವರ ನಾಯ್ಕ (40) ಅವರನ್ನು ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ.

▶ 7


ಭಟ್ಕಳದ ತಾಲ್ಲೂಕು ಆಸ್ಪತ್ರೆ ಶವಾಗಾರದ ಎದುರು ಮೃತರ ಸಂಬಂಧಿಕರು ಸೇರಿದ್ದರು

ಹೆಚ್ಚಿನವರು ಕೂಲಿ ಕಾರ್ಮಿಕರು

ಮೃತರಲ್ಲಿ ಬಹುತೇಕರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು. ಚಿಪ್ಪಿಕಲ್ಲು ಹೇರಳವಾಗಿ ಸಿಗುವ ಕಾರಣಕ್ಕೆ ಈ ನದಿಗೆ 7 ಕಿ.ಮೀ ದೂರದ ಶಾರದಾ ಹೊಳೆ ಗ್ರಾಮದಿಂದ ಬಂದಿದ್ದರು.

‘ಮಾಲತಿ ಜಟ್ಟಪ್ಪ ನಾಯ್ಕ ಆಶಾ ಕಾರ್ಯಕರ್ತೆಯಾಗಿದ್ದರು. ಲಕ್ಷ್ಮಿ ಶಿವರಾಮ ನಾಯ್ಕ ಅವರ ಪತಿ 12 ವರ್ಷದ ಹಿಂದೆ ಮೃತಪಟ್ಟಿದ್ದಾರೆ. ಅವರಿಗೆ 3 ಮಕ್ಕಳು. ಶಿರಾಲಿಯ ಸೇಂಟ್ ಥಾಮಸ್ ಶಾಲೆಯಲ್ಲಿ ಸಹಾಯಕಿಯಾಗಿದ್ದ ಲಕ್ಷ್ಮಿ ರಜೆ ಇದ್ದುದರಿಂದ ಚಿಪ್ಪಿಕಲ್ಲು ಆರಿಸಲು ಬಂದಿದ್ದರು’ ಎಂದು ಮೃತರ ಸಂಬಂಧಿಯೊಬ್ಬರು ಕಣ್ಣೀರಾದರು.

₹7 ಲಕ್ಷ ಪರಿಹಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ದುರಂತದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿರುವ ಪ್ರಧಾನ ಮಂತ್ರಿ ಕಚೇರಿಯು ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ, ಗಾಯಗೊಂಡವರಿಗೆ ₹50 ಸಾವಿರ ಪರಿಹಾರ ನೀಡುವುದಾಗಿ ಘೋಷಿಸಿದೆ.

ಯುದ್ಧ ಅಂತ್ಯ: ಇರಾನ್– ಅಮೆರಿಕ ಒಪ್ಪಿಗೆ?

ಟೆಹರಾನ್ (ಎಎಫ್‌ಪಿ): ಪಶ್ಚಿಮ ಏಷ್ಯಾದ ಯುದ್ಧ ಕೊನೆಗೊಳಿಸಲು ಅಮೆರಿಕ ಹಾಗೂ ಇರಾನ್ ಒಪ್ಪಂದಕ್ಕೆ ಮುಂದಾಗಿವೆ ಎಂದು ಅಮೆರಿಕದ ಉನ್ನತ ರಾಜತಾಂತ್ರಿಕರೊಬ್ಬರು ತಿಳಿಸಿದ್ದಾರೆ.



‘ಆದರೆ, ಈ ಒಪ್ಪಂದವು ತನ್ನ ಪರಮಾಣು ಕಾರ್ಯಕ್ರಮದ ಮೇಲೆ ಕಡಿವಾಣ ಹಾಕುವಂತಿಲ್ಲ’ ಎಂದು ಇರಾನ್ ಹೇಳಿದೆ.

ಅಮೆರಿಕ ಹಾಗೂ ಇರಾನ್‌ನ ನಡುವೆ ಏಪ್ರಿಲ್ 8ರಿಂದ ಕದನ ವಿರಾಮ ಜಾರಿಯಲ್ಲಿದೆ. ಮಧ್ಯವರ್ತಿಗಳು ಮಾತುಕತೆಯ ಮೂಲಕ ಇತ್ಯರ್ಥಪಡಿಸಲು ಯತ್ನಿಸುತ್ತಿದ್ದರೂ, ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್ ಹಿಡಿತ ಸಾಧಿಸಿದ್ದು, ಇರಾನ್‌ನ ಬಂದರಿನ ಮೇಲೆ ಅಮೆರಿಕ ನಿರ್ಬಂಧ ಮುಂದುವರಿದಿದೆ.

▶ 10

ಒಪ್ಪಂದಕ್ಕೆ ಅವಸರ ಇಲ್ಲ: ಟ್ರಂಪ್



ವಾಷಿಂಗ್ಟನ್ (ಎಎಫ್‌ಪಿ): ‘ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಕೊನೆಗಾಣಿಸುವುದಕ್ಕಾಗಿ ಇರಾನ್ ಜೊತೆ ಒಪ್ಪಂದ ಮಾಡಿಕೊಳ್ಳುವ ವಿಷಯದಲ್ಲಿ ಅಮೆರಿಕ ಅವಸರ ಮಾಡುವುದಿಲ್ಲ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದಾರೆ.

▶ 10

ವ್ಯಾಪಾರ ಒಪ್ಪಂದಕ್ಕೆ ಶೀಘ್ರ ಅಂತಿಮ ರೂಪ

ಬಹು ನಿರೀಕ್ಷಿತ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಭಾರತ ಮತ್ತು ಅಮೆರಿಕ ಶೀಘ್ರವೇ ಅಂತಿಮ ರೂಪ ನೀಡಲಿವೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ವಿವರ ▶ 11

ಒಗ್ಗಟ್ಟಿದ್ದರಷ್ಟೇ ಗೆಲುವು: ರಾಜ್ಯ ಬಿಜೆಪಿ ನಾಯಕರ ಕಿವಿ ಹಿಂಡಿದ ನಿತಿನ್ ನವೀನ್

‘ಒಳಜಗಳ, ಭ್ರಮೆ ಬಿಟ್ಟು ಕೆಲಸ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಮ್ಮಲ್ಲಿ ಒಗ್ಗಟ್ಟು ಇಲ್ಲ. ಹೀಗಿದ್ದರೂ ಜನರು ನಮಗೆ ಅಧಿಕಾರ ಕೊಟ್ಟೇ ಕೊಡುತ್ತಾರೆ ಎಂಬ ಭ್ರಮೆಯಲ್ಲಿ ಇರಬೇಡಿ’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ರಾಜ್ಯ ಬಿಜೆಪಿ ನಾಯಕರ ಕಿವಿ ಹಿಂಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಇದೇ ಮೊದಲ ಬಾರಿಗೆ ರಾಜ್ಯಕ್ಕೆ ಬಂದಿರುವ ಅವರು ಪಕ್ಷದ ರಾಜ್ಯ ಘಟಕದ ನಾಯಕರ ಜತೆಗೆ ಪಕ್ಷದ ಕಚೇರಿಯಲ್ಲಿ ಭಾನುವಾರ ಸಭೆ ನಡೆಸಿದರು. ಪಕ್ಷದ ಪ್ರಮುಖರ ಸಮಿತಿ ಸದಸ್ಯರ ಜತೆಗೆ ಪ್ರತ್ಯೇಕ ಸಭೆ ನಡೆಸಿದರು.

‘ಪಕ್ಷದಲ್ಲಿ ನಾಯಕರ ನಡುವೆ ಒಗ್ಗಟ್ಟು ಇಲ್ಲ ಎಂಬುದು ಪದೇ–ಪದೇ ಜಗಜ್ಜಾಹೀರು ಆಗುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಮೂರು ವರ್ಷವಾಗಿದೆ. ಸರ್ಕಾರದ ವಿರುದ್ಧ ಹೋರಾಟಕ್ಕೆ ಹಲವು ಅವಕಾಶಗಳು ಇದ್ದರೂ, ಒಗ್ಗಟ್ಟು ಇಲ್ಲದ ಕಾರಣಕ್ಕೆ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ರಾಜ್ಯ ನಾಯಕರನ್ನು ನಿತಿನ್ ಅವರು ತರಾಟೆಗೆ ತೆಗೆದುಕೊಂಡರು’ ಎಂದು ಪಕ್ಷದ ಮೂಲಗಳು ತಿಳಿಸಿವೆ

▶ 7


ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಬಿ.ಎಸ್‌.ಯಡಿಯೂರಪ್ಪ ಅವರ ಜೊತೆ ಬೆಂಗಳೂರಿನಲ್ಲಿ ಸಮಾಲೋಚನೆ ನಡೆಸಿದರು

‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಕೃತ್ಯ: ಆರು ಮಂದಿ ಸೆರೆ

ನಿವೃತ್ತ ಶಿಕ್ಷಕಿಗೆ ₹24 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 74 ವರ್ಷದ ಮಹಿಳೆಯನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿದ ಸೈಬರ್ ವಂಚಕರು ₹24 ಕೋಟಿ ಸುಲಿಗೆ ಮಾಡಿದ್ದಾರೆ.

ಶಿವಾಜಿನಗರ ನಿವಾಸಿ ಲಕ್ಷ್ಮೀ ರಾಮಮೂರ್ತಿ ನೀಡಿದ ದೂರು ಆಧರಿಸಿ ‘ರಾಜ್ಯ ಸೈಬರ್ ಕಮಾಂಡ್ ಘಟಕ’ದ (ಸಿಸಿಯು) ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಈರೋಡ್‌ನ ಎನ್.ಶಿವಜ್ಞಾನಂ, ಮುಂಬೈನ ಅಕ್ಬಚ್ ಮಲ್ಲಿಕ್, ಅಹಮದಾಬಾದ್‌ನ ಪಲಕ್ ಭಾಯಿ ಪಟೇಲ್, ಅಮಿತ್ ನರೇಂದ್ರ ಪಟೇಲ್, ನವದೆಹಲಿಯ ಓಂ ಪ್ರಕಾಶ್ ರಜಪುತ್, ಬಿಹಾರದ ಗೌರವ್ ಕುಮಾರ್ ಎಂಬವರನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಆರು ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.

‘ಎನ್‌ಸಿಆರ್‌ಪಿ ಪೋರ್ಟಲ್ ಸಹಾಯದಿಂದ ಅನೇಕ ಮ್ಯೂಲ್ ಖಾತೆಗಳನ್ನು (ನಕಲಿ ಖಾತೆ) ಫ್ರೀಜ್ ಮಾಡಿ, ₹4 ಕೋಟಿ ಉಳಿಸಿದ್ದೇವೆ. ಈ ಪೈಕಿ ನ್ಯಾಯಾಲಯದ ಆದೇಶ ಪಡೆದು ₹1.46 ಕೋಟಿ ವಾಪಸ್ ಪಡೆಯಲಾಗಿದೆ’ ಎಂದು ಸೈಬರ್ ಕಮಾಂಡ್ ಘಟಕದ ಪೊಲೀಸ್ ಮಹಾನಿರ್ದೇಶಕ ಪ್ರಣಬ್ ಮೊಹಾಂತಿ ತಿಳಿಸಿದ್ದಾರೆ.

ಲಕ್ಷ್ಮೀ ರಾಮಮೂರ್ತಿ ಅವರು ದುಬೈನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದು ನಿವೃತ್ತಿ ಬಳಿಕ ಶಿವಾಜಿನಗರದಲ್ಲಿ ಅಪಾರ್ಟ್‌ಮೆಂಟ್ ಖರೀದಿಸಿ ವಾಸವಾಗಿದ್ದರು. ಬೆಂಗಳೂರು ಹಾಗೂ ಮುಂಬೈನಲ್ಲಿದ್ದ ಆಸ್ತಿಗಳನ್ನು ಮಾರಾಟ ಮಾಡಿ ಅಮೆರಿಕದಲ್ಲಿರುವ ಇಬ್ಬರು ಮಕ್ಕಳ ಜೊತೆ ನೆಲಸಲು ಸಿದ್ಧತೆ ನಡೆಸುತ್ತಿದ್ದರು. ಗ್ರೀನ್ ಕಾರ್ಡ್ ಹೊಂದಿರುವ ಮಕ್ಕಳು ಅಮೆರಿಕದಲ್ಲಿ ಸ್ಟಾಫ್ಟ್‌ವೇರ್ ಎಂಜಿನಿಯರ್‌ಗಳಾಗಿದ್ದಾರೆ.

ಸಂತ್ರಸ್ತೆ ಬಳಿ ಹಣವಿರುವ ಮಾಹಿತಿ ಸಂಗ್ರಹಿಸಿದ್ದ ಆರೋಪಿಗಳು, ಫೆಬ್ರುವರಿ 10ರಂದು ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳ ಸೋಗಿನಲ್ಲಿ ವಿಡಿಯೊ ಕರೆ ಮಾಡಿದ್ದಾರೆ. ‘ನೀವು ಹಣ ಅಕ್ರಮ ವರ್ಗಾವಣೆ ಹಾಗೂ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೀರಿ. ಹಾಗಾಗಿ ನಿಮ್ಮನ್ನು ತನಿಖೆಗೆ ಒಳಪಡಿಸಲಾಗುತ್ತಿದೆ. ಯಾರ ಜೊತೆಯೂ ಮಾತನಾಡಬಾರದು. ಖಾತೆಯಲ್ಲಿರುವ ಹಣವನ್ನು ಪರಿಶೀಲನೆಗಾಗಿ ಸರ್ಕಾರದ ಖಾತೆಗೆ ವರ್ಗಾವಣೆ ಮಾಡಬೇಕು’ ಎಂದು ಬೆದರಿಸಿದ್ದಾರೆ.

▶ 5

ಆರು ತಂಡ ರಚನೆ



ವಂಚಕರ ಪತ್ತೆಗಾಗಿ ಆರು ತಂಡಗಳನ್ನು ರಚಿಸಲಾಯಿತು. ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ ತಂಡವು, ಮೊಬೈಲ್ ಗೋಪುರಗಳ ಲೋಕೇಷನ್ ಆಧರಿಸಿ, ವಿವಿಧ ರಾಜ್ಯಗಳಲ್ಲಿ ಆರೋಪಿಗಳನ್ನು ಬಂಧಿಸಿ ಬೆಂಗಳೂರಿಗೆ ಕರೆದುಕೊಂಡು ಬಂದಿದೆ. ಕೃತ್ಯಕ್ಕೆ ಬಳಸಿದ್ದ ಮೊಬೈಲ್, ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ತನಿಖೆ ಮುಂದುವರಿದಿದೆ.

ಸಿಜೆಪಿ ಸಂಸ್ಥಾಪಕನ ಮನೆಗೆ ಭದ್ರತೆ

ಛತ್ರಪತಿ ಸಂಭಾಜಿನಗರ (ಪಿಟಿಐ): ಕಾಕ್ರೋಚ್ ಜನತಾ ಪಾರ್ಟಿಯ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರ ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿನ ನಿವಾಸಕ್ಕೆ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.


ಅಭಿಜೀತ್ ದೀಪ್ಕೆ

‘ಸಿಜೆಪಿ ಸಾಮಾಜಿಕ ಜಾಲತಾಣದಲ್ಲಿ ಪ್ರಚಲಿತದಲ್ಲಿರುವ ಕಾರಣ ಅವರ ನಿವಾಸದ ಸುತ್ತ–ಮುತ್ತ ಜನದಟ್ಟಣೆಯಾಗುವುದನ್ನು ತಡೆಯಲು ಭದ್ರತೆ ಒದಗಿಸಲಾಗಿದೆ’ ಎಂದು ಪೊಲೀಸ್ ಉಪಆಯುಕ್ತ ಪಂಕಜ್ ಅತುಲ್ಕರ್ ಅವರು ತಿಳಿಸಿದ್ದಾರೆ.

ದೀಪ್ಕೆ ಅವರಿಗೆ ಬೆದರಿಕೆ ಇರುವ ಕಾರಣಕ್ಕಾಗಿಯೇ ಭದ್ರತೆ ನೀಡಲಾಗಿದೆ ಎನ್ನುವ ವರದಿಗಳನ್ನು ತಳ್ಳಿ ಹಾಕಿದ ಅವರು, ‘ಈ ಬಗ್ಗೆ ನಮ್ಮ ವ್ಯಾಪ್ತಿಯ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸಿಜೆಪಿಯ ಎಲ್ಲ ಸಾಮಾಜಿಕ ಜಾಲತಾಣ ಖಾತೆಗಳನ್ನು ನಿರ್ಬಂಧಿಸಲಾಗಿದೆ’ ಎಂದು ದೀಪ್ಕೆ ಶನಿವಾರ ಆರೋಪಿಸಿದ್ದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಒತ್ತುವರಿ ಪ್ರದೇಶ | ಐದು ವರ್ಷದಲ್ಲಿ 877 ಎಕರೆ ತೆರವು

36,785 ಎಕರೆ ಅರಣ್ಯ ಅತಿಕ್ರಮಣ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಅಗಾಧ ಪ್ರಕೃತಿ ಸಂಪತ್ತನ್ನು ಹೊಂದಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 36,785 ಎಕರೆಯಷ್ಟು ಅರಣ್ಯ ಒತ್ತುವರಿ ಆಗಿದೆ ಎಂದು ಅರಣ್ಯ ಇಲಾಖೆ ಗುರುತಿಸಿದೆ.

ಜಿಲ್ಲೆಯಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದು, ಇದಕ್ಕೆ ಅರಣ್ಯ ಒತ್ತುವರಿಯೂ ಕಾರಣ ಎಂಬ ಅಭಿಪ್ರಾಯವಿದೆ.



ಜಿಲ್ಲೆಯಲ್ಲಿ ಮೀಸಲು ಅರಣ್ಯ, ರಕ್ಷಿತ ಅರಣ್ಯ, ಗ್ರಾಮ ಅರಣ್ಯ, ಸೆಕ್ಷನ್-4 ಘೋಷಿತ ಅರಣ್ಯ, ವರ್ಗೀಕರಿಸಿದ ಅರಣ್ಯ ಸೇರಿ ಒಟ್ಟು 2,12,942 ಹೆಕ್ಟೇರ್ ಅರಣ್ಯ ಪ್ರದೇಶವಿದೆ.

ಜಿಲ್ಲೆಯ ಮೂರು ಅರಣ್ಯ ವಿಭಾಗಗಳಲ್ಲಿ 9,807 ಅತಿಕ್ರಮಣ ಪ್ರಕರಣಗಳನ್ನು ಅರಣ್ಯ ಇಲಾಖೆ ದಾಖಲಿಸಿದೆ. ಕೊಪ್ಪ ವಿಭಾಗದ ವ್ಯಾಪ್ತಿಯಲ್ಲೇ ಅತೀ ಹೆಚ್ಚು 8,342 ಪ್ರಕರಣಗಳಲ್ಲಿ 28,630 ಎಕರೆ ಒತ್ತುವರಿಯಾಗಿದೆ ಎಂದು ಇಲಾಖೆ ಗುರುತಿಸಿದೆ. ಕೊಪ್ಪ ವಿಭಾಗ ವ್ಯಾಪ್ತಿಗೆ ಶೃಂಗೇರಿ, ಕಳಸ, ನರಸಿಂಹರಾಜಪುರ, ಕೊಪ್ಪ ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಸ್ವಲ್ಪ ಭಾಗ ಸೇರಿದೆ. ಇಲ್ಲಿ ಹೆಚ್ಚಿನ ಒತ್ತುವರಿಯಾಗಿದೆ ಎಂದು ಅಂಕಿ–ಅಂಶಗಳು ಹೇಳುತ್ತಿವೆ.

ಚಿಕ್ಕಮಗಳೂರು ವಿಭಾಗ ವ್ಯಾಪ್ತಿಯಲ್ಲಿ 1,410 ಪ್ರಕರಣಗಳಲ್ಲಿ 7,857 ಎಕರೆ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ 56 ಪ್ರಕರಣಗಳಲ್ಲಿ 296 ಎಕರೆ ಒತ್ತುವರಿ ಇದೆ ಎಂದು ಗುರುತಿಸಿದೆ.

ದೊಡ್ಡವರಿಂದ ಒತ್ತುವರಿಯೇ 26 ಸಾವಿರ ಎಕರೆ

ಭೂ ರಹಿತರು ಮೂರು ಎಕರೆಗೂ ಕಡಿಮೆ ಒತ್ತುವರಿ ಮಾಡಿದ್ದರೆ ತೆರವುಗೊಳಿಸದಿರಲು ಅರಣ್ಯ ಇಲಾಖೆ ನಿರ್ಧರಿಸಿದೆ. ಜಿಲ್ಲೆಯಲ್ಲಿ 26 ಸಾವಿರ ಎಕರೆಗೂ ಅಧಿಕ ಅರಣ್ಯ ದೊಡ್ಡ ಹಿಡುವಳಿದಾರರಿಂದಲೇ ಒತ್ತುವರಿಯಾಗಿದೆ.

3 ಎಕರೆಗಿಂತ ಕಡಿಮೆ ಅರಣ್ಯ ಭೂಮಿ ಒತ್ತುವರಿಯನ್ನು ಇಲಾಖೆ ಪ್ರತ್ಯೇಕವಾಗಿ ಪಟ್ಟಿ ಮಾಡಿದೆ. 6,744 ಸಣ್ಣ ರೈತರು ಜೀವನೋಪಾಯಕ್ಕೆ 10,176 ಎಕರೆ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿದ್ದಾರೆ.

30 ಎಕರೆಗೂ ಅಧಿಕ ಅರಣ್ಯ ಭೂಮಿ ಅತಿಕ್ರಮಣದ 93 ಪ್ರಕರಣಗಳಿವೆ. 93 ಜನರು ಒಟ್ಟು 6,159 ಎಕರೆ ಅತಿಕ್ರಮಣ ಮಾಡಿದ್ದಾರೆ. ಇದರಲ್ಲಿ ಕೆಲವರು 100ಕ್ಕೂ ಅಧಿಕ ಎಕರೆಯಷ್ಟು ಒತ್ತುವರಿ ಮಾಡಿ, ಬೇಲಿ ಹಾಕಿದ್ದಾರೆ. ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ 50 ಎಕರೆ ಜಾಗ ಅತಿಕ್ರಮಣವು ಈ ಪಟ್ಟಿಗೆ ಸೇರಿದೆ.

10 ಎಕರೆಯಿಂದ 30 ಎಕರೆ ಒಳಗಿನ ಒತ್ತುವರಿಯ 448 ಪ್ರಕರಣಗಳಿದ್ದು, 7,317 ಎಕರೆ ಒತ್ತುವರಿಯಾಗಿದೆ. 3 ಎಕರೆಯಿಂದ 10 ಎಕರೆ ಒಳಗಿನ ಒತ್ತುವರಿಯ 2,522 ಪ್ರಕರಣಗಳಿದ್ದು, 13,133 ಎಕರೆ ಒತ್ತುವರಿಯಾಗಿದೆ ಎಂದು ಅರಣ್ಯ ಇಲಾಖೆ ಅಂಕಿ– ಅಂಶಗಳು ಹೇಳುತ್ತವೆ.

61 ಪ್ರಕರಣಗಳಲ್ಲಿ ತೆರವು

ಅರಣ್ಯ ಇಲಾಖೆಯು ಕಳೆದ 5 ವರ್ಷದಲ್ಲಿ ಜಿಲ್ಲೆಯಲ್ಲಿ 877 ಎಕರೆ ಒತ್ತುವರಿ ಭೂಮಿಯನ್ನು ಮಾತ್ರ ತೆರವುಗೊಳಿಸಿದೆ. ಭದ್ರಾ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯ 6 ಪ್ರಕರಣಗಳ ಪೈಕಿ 73 ಎಕರೆ 32 ಗುಂಟೆ ತೆರವಾಗಿದೆ.

ಚಿಕ್ಕಮಗಳೂರು ವಿಭಾಗ ವ್ಯಾಪ್ತಿಯ 16 ಪ್ರಕರಣಗಳಲ್ಲಿ 104 ಎಕರೆ, ಕೊಪ್ಪ ವಿಭಾಗದ 39 ಪ್ರಕರಣಗಳಲ್ಲಿ 698 ಎಕರೆ ಒತ್ತುವರಿ ತೆರವಾಗಿದೆ.



TATA

TATA POWER

THE TATA POWER COMPANY LIMITED,

Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂನ ಮೂರು (3) ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಿಗೆ ವಿದ್ಯುತ್ ಕಾಯ್ದೆ, 2003ರ ಕಲಂ 14 ಮತ್ತು 15ರ ಅಡಿಯಲ್ಲಿ ವಿತರಣಾ ಪರವಾನಗಿ ಮಂಜೂರು ಮಾಡುವ ಕುರಿತು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸಾರ್ವಜನಿಕ ಸೂಚನೆ

(ಪ್ರಕರಣ ಸಂಖ್ಯೆ: MP/06/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯಿದೆ, 2003 ("ಕಾಯಿದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC) (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಹೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಪರಸ್ಪರ ಸಂಪರ್ಕ ಹೊಂದಿರುವ ಪ್ರದೇಶಗಳಿಗೆ** ಟಾಟಾ ಪವರ್ ಕಂಪನಿ ಲಿಮಿಟೆಡ್‌ಗೆ ವಿತರಣಾ ಪರವಾನಗಿ ಮಂಜೂರು ಮಾಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು **(ಪ್ರಕರಣ ಸಂಖ್ಯೆ: MP/06/2026)** ಸಲ್ಲಿಸಿದೆ. ಆಯೋಗವು ದಿನಾಂಕದಂದು ಕಾಯಿದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಟಾಟಾ ಪವರ್‌ಗೆ ನಿರ್ದೇಶಿಸಿದೆ.

2. ಅರ್ಜಿಯ ಪ್ರಮುಖ ಲಕ್ಷಣಗಳ ಸಂಕ್ಷಿಪ್ತ ವಿವರ ಕೆಳಗೆ ನೀಡಲಾಗಿದೆ:

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24, ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಹೆಸ್ಕಾಂನ ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. ಅರ್ಜಿಯ ಇತರ ಪ್ರಮುಖ ಲಕ್ಷಣಗಳು:

•ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.

•ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ – ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.

• ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಮತ್ತು ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.

• ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯ (synergies) ಲಾಭಗಳನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ ಅಂದರೆ ಹೆಸ್ಕಾಂನ **ಮೂರು (3) ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ** ಪ್ರದೇಶದಲ್ಲಿ ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.

• ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರಿ ಅರ್ಜಿ ಸಲ್ಲಿಸಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ)ನ ವಿತರಣಾ ವ್ಯಾಪ್ತಿಗೆ ಒಳಪಡುತ್ತದೆ.

4. ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ: ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]

5. ಷೇರುಹೊಂದಿಕೆ ಮಾದರಿ:

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಜೂನ್ 2024)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡಿಆರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	· ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ · ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	· ಟಾಟಾ ಸನ್ಸ್‌ನ ಅಧ್ಯಕ್ಷರು · ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	· ಪಿಎಚ್.ಡಿ., ಭಾರತೀಯ ತಂತ್ರಜ್ಞಾನ ಸಂಸ್ಥೆ, ದೆಹಲಿ · ಮಾಸ್ಟರ್ಸ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು · ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್	· ವಿದ್ಯುತ್ ಕ್ಷೇತ್ರದ ಪರಿಣತ · ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕಿ	· ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್ · ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	· ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ · ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	20 ವರ್ಷಗಳಿಗಿಂತ ಹೆಚ್ಚು
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	· ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ · ಎಂಬಿಎ, ಐಐಎಂ ಬೆಂಗಳೂರು	· ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ · ಬಿಪಿಸಿಎಲ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	38 ವರ್ಷಗಳಿಗಿಂತ ಹೆಚ್ಚು
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	· ಮಾಸ್ಟರ್ಸ್ ಇನ್ ಹಿಸ್ಟರಿ · ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	· ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ · ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕಿ	· ಚಾರ್ಟರ್ಡ್ ಅಕೌಂಟೆಂಟ್	· ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ · ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	30 ವರ್ಷಗಳಿಗಿಂತ ಹೆಚ್ಚು
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	· ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ · ಪಿಜಿಡಿಎಂ, ಐಐಎಂ ಕಲ್ಕತ್ತಾ	· ಟಾಟಾ ಸನ್ಸ್‌ನ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ · ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	· ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	· ರಾಥ್‌ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ · ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	· ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ · ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್ · ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್	· ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ · ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	· ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ · ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	· ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ · ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. ಸಮಾನ ಚಟುವಟಿಕೆಗಳಲ್ಲಿನ ಕಾರ್ಯಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:

ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.

i) **ಮುಂಬೈನಲ್ಲಿ ವಿತರಣಾ ಪರವಾನಗಿ:** ಮಾನ್ಯ ಎಂಇಆರ್‌ಸಿ ಮುಂಬೈ ನಗರ ಹಾಗೂ ಮುಂಬೈ ಉಪನಗರ ಪ್ರದೇಶದ ಭಾಗಗಳಿಗೆ (ಚೆನೆ ಮತ್ತು ವರ್ಸಾವೆ ಪ್ರದೇಶಗಳನ್ನು ಒಳಗೊಂಡ ಮೀರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ವ್ಯಾಪ್ತಿ) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂಖ್ಯೆ 1/2014) ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4,850 CKM ಜಾಲ ಉದ್ದ ಹಾಗೂ 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

ii) **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (PPP) ಮಾದರಿಯ ಜಂಟಿ ಉದ್ಯಮವಾಗಿ ಸ್ಥಾಪಿಸಲಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12500 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. AT&C ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಕ್ಕೆ ಇಳಿದಿವೆ.

iii) **ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲು ಹೊಂದಿದೆ. TPCODL 29,354 ಚದರ ಕಿ.ಮೀ. ವ್ಯಾಪ್ತಿಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನದ ಸಮಯದಲ್ಲಿ 30.49% ಇದ್ದ AT&C ನಷ್ಟಗಳು ಈಗ 19.6%ಕ್ಕೆ ಇಳಿದಿವೆ. TPCODL 1,14,119 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

iV) **ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯ ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪಿಸಲಾಯಿತು. TPNODL 27,920 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಹರಡಿರುವ 2.2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. FY25ರ ಅಂತ್ಯದಲ್ಲಿ ವಾರ್ಷಿಕ AT&C ನಷ್ಟಗಳು 12.6%ರಷ್ಟಿದ್ದು, ಇದು ಮಾನ್ಯ OERC ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. TPNODL 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ 1,64,629 CKM ಜಾಲವನ್ನು ನಿರ್ವಹಿಸುತ್ತಿದೆ.

V) **ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, TPSODL ಒಡಿಶಾದ ದಕ್ಷಿಣ ಭಾಗದ ಸುಮಾರು 48,751 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. TPSODL 112955 ಸಿಕೆಎಂ ನೆಟ್‌ವರ್ಕ್ ಅನ್ನು ನಿರ್ವಹಿಸುತ್ತದೆ ಮತ್ತು ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.

Vi) **ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಅಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.

Vii) **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:**
ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಅಜ್ಮೇರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆ ವಿತರಣಾ ಫ್ರಾಂಚೈಸಿ ಒಪ್ಪಂದ (DFA)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. TPADL ಅಜ್ಮೇರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವುದು ಮತ್ತು ಸಂರಕ್ಷಿಸುವುದರ ಜೊತೆಗೆ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ. TPADL AT&C ನಷ್ಟಗಳನ್ನು 17.2%ರಿಂದ 7.8%ಕ್ಕೆ ಇಳಿಸುವಲ್ಲಿ ಗಮನಾರ್ಹ ಕೊಡುಗೆ ನೀಡಿದೆ.

8. ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರ ಹಾಗೂ ಸೇವೆ ಸಲ್ಲಿಸಲು ಉದ್ದೇಶಿಸಿರುವ ಗ್ರಾಹಕರ ಸಂಖ್ಯೆ: ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಪರಸ್ಪರ ಸಂಪರ್ಕ ಹೊಂದಿರುವ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಉದ್ದೇಶಿಸಿದೆ. ಮೇಲ್ಕಂಡ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಕೆಳಕಂಡ ಪ್ರದೇಶಗಳನ್ನು ಒಳಗೊಂಡಿವೆ: **1) ಬೆಳಗಾವಿ ಮಹಾನಗರ ಪಾಲಿಕೆ 2) ಗೋಕಾಕ ಸಿಎಂಸಿ 3) ನಿಪ್ಪಾಣಿ ಸಿಎಂಸಿ 4) ದಾಂಡೇಲಿ ಸಿಎಂಸಿ 5) ಕಾರವಾರ ಸಿಎಂಸಿ 6) ಶಿರಸಿ ಸಿಎಂಸಿ 7) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ .**

TPC ಪರವಾನಗಿ ಮಂಜೂರಾದ ದಿನಾಂಕದಿಂದ ಐದು (5) ವರ್ಷಗಳ ಅವಧಿಯ ಅಂತ್ಯದೊಳಗೆ 38,500 (ಮೂವತ್ತೆಂಟು ಸಾವಿರದ ಐದುನೂರು)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.

9. ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. **ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ: ವೆಬ್‌ಸೈಟ್: www.tatapower.com**
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಸಾಮರ್ಥ್ಯ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲ್ಕಂಡಂತೆ TPC ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟಿತ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇ-ಮೇಲ್ ವಿಳಾಸ: asst.secykerc@gmail.com ಗೆ ಸಲ್ಲಿಸಬಹುದು. ಈ ಸೌಲಭ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದಲ್ಲಿ, ಸಂಬಂಧಿತ ಹಿತಾಸಕ್ತ ವ್ಯಕ್ತಿಗಳು ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:00 ಗಂಟೆಯವರೆಗೆ ಮೊಬೈಲ್ ಸಂಖ್ಯೆ: 8147 144 627 ಅಥವಾ ಇ-ಮೇಲ್ ವಿಳಾಸ: asst.secykerc@gmail.com ಮೂಲಕ KERC ಕಚೇರಿಯನ್ನು ಸಂಪರ್ಕಿಸಬಹುದು.
13. 'ಇ-ಪಬ್ಲಿಕ್ ಕನ್ಸಲ್ಟೇಶನ್' ಟ್ಯಾಬ್‌ನಲ್ಲಿ ಸಲಹೆ ಮತ್ತು ಆಕ್ಷೇಪಣೆಯನ್ನು ಅಪ್‌ಲೋಡ್ ಮಾಡಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ ಮತ್ತು ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ** ನಂತರ ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

ಸ್ಥಳ: ಮುಂಬೈ
ದಿನಾಂಕ: 25 ಮೇ 2026

TATA

TATA POWER

THE TATA POWER COMPANY LIMITED,

Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಸಿಇಎಸ್‌ಸಿಯ ಮೂರು (3) ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನಗಳಿಗೆ ವಿದ್ಯುತ್ ಕಾಯಿದೆ, 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಸಲ್ಲಿಸಿರುವ ಅರ್ಜಿಯ (ಪ್ರಕರಣ ಸಂಖ್ಯೆ MP/02/2026) ಮೇಲೆ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ.

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯಿದೆ, 2003 ("ಕಾಯಿದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, KERC (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನವನ್ನು** ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳಿಗೆ ಟಿಪಿಸಿಎಲ್‌ಗೆ ವಿತರಣಾ ಪರವಾನಗಿಯನ್ನು ಮಂಜೂರು ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ)ದ ಮುಂದೆ ಅರ್ಜಿಯನ್ನು (ಪ್ರಕರಣ ಸಂಖ್ಯೆ MP/02/2026) ಸಲ್ಲಿಸಿದೆ. ಕಾಯಿದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಆಯೋಗವು ಟಾಟಾ ಪವರ್‌ಗೆ ನಿರ್ದೇಶಿಸಿದೆ.
2. ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. **ಅರ್ಜಿಯ ಇತರ ಪ್ರಮುಖ ಲಕ್ಷಣಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ – ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಮತ್ತು ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.
- ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯ (synergies) ಲಾಭಗಳನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ – ಅಂದರೆ **ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನ** ಪ್ರದೇಶದಲ್ಲಿ – ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರುತ್ತಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ **ಚಾಮುಂಡೇಶ್ವರಿ ಎಲೆಕ್ಟ್ರಿಸಿಟಿ ಸಪ್ಲೈ ಕಾರ್ಪೊರೇಶನ್ ಲಿಮಿಟೆಡ್ (ಸಿಇಎಸ್‌ಸಿ)ನ** ವಿತರಣಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ.

4. **ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]
5. **ಷೇರು ಹೊಂದಿರುವ ಮಾದರಿ:**

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಮಾರ್ಚ್ 2025)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡಿಆರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. **ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ • ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಟಾಟಾ ಸನ್ಸ್‌ನ ಅಧ್ಯಕ್ಷರು • ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	• ಪಿಎಚ್.ಡಿ., ಭಾರತೀಯ ತಂತ್ರಜ್ಞಾನ ಸಂಸ್ಥೆ, ದೆಹಲಿ • ಮಾಸ್ಟರ್ಸ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು • ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್	• ವಿದ್ಯುತ್ ಕ್ಷೇತ್ರದ ಪರಿಣತ • ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್ • ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	20 ವರ್ಷಗಳಿಗಿಂತ ಹೆಚ್ಚು
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ • ಎಂಬಿಎ, ಐಐಎಂ ಬೆಂಗಳೂರು	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ • ಬಿಪಿಸಿಎಲ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	38 ವರ್ಷಗಳಿಗಿಂತ ಹೆಚ್ಚು
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ • ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ • ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	30 ವರ್ಷಗಳಿಗಿಂತ ಹೆಚ್ಚು
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ • ಪಿಜಿಡಿಎಂ, ಐಐಎಂ ಕಲ್ಕತ್ತಾ	• ಟಾಟಾ ಸನ್ಸ್‌ನ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರಾಥ್‌ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ • ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್ • ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ • ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. **ತತ್ಸಮಾನ ಚಟುವಟಿಕೆಗಳಲ್ಲಿನ ಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:**
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೇರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.
   i. **ಮುಂಬೈನಲ್ಲಿ ವಿತರಣಾ ಪರವಾನಗಿ:** ಮಾನ್ಯ ಎಂಇಆರ್‌ಸಿ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಭಾಗಕ್ಕೆ (ಚೆನೆ ಮತ್ತು ವರ್ಸಾವೆ ಪ್ರದೇಶವನ್ನು ಒಳಗೊಂಡ ಮೀರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ಪ್ರದೇಶಗಳು) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂ. 1, 2014)ಯನ್ನು ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್-ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.
   ii. **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (ಪಿಪಿಪಿ) ಮಾದರಿಯಲ್ಲಿ ಜಂಟಿ ಉದ್ಯಮವಾಗಿ ಸ್ಥಾಪನೆಯಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12,500 ಸಿಕೆಎಂ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. ಎಟಿಅಂಡ್‌ಸಿ ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಗೆ ಇಳಿಕೆಯಾಗಿದೆ.
   iii. **ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲನ್ನು ಹೊಂದಿದೆ. ಟಿಪಿಸಿಒಡಿಎಲ್ 29,354 ಚದರ ಕಿ.ಮೀ.ಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನ ಸಮಯದಲ್ಲಿ 30.49% ಇದ್ದ ಎಟಿಅಂಡ್‌ಸಿ ನಷ್ಟಗಳು ಈಗ 19.6%ರಷ್ಟಿವೆ. ಟಿಪಿಸಿಒಡಿಎಲ್ 1,14,119 ಸಿಕೆಟಿ. ಕಿ.ಮೀ. ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.
   iv. **ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯವನ್ನು ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪನೆಯಾಯಿತು. ಟಿಪಿಎನ್‌ಒಡಿಎಲ್ 27,920 ಚದರ ಕಿ.ಮೀ. ಪ್ರದೇಶದಾದ್ಯಂತ ಹರಡಿರುವ 2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಎಫ್‌ವೈ 25ರ ಅಂತ್ಯದಲ್ಲಿ ವಾರ್ಷಿಕ ಎಟಿಅಂಡ್‌ಸಿ ನಷ್ಟಗಳು 12.6%ರಷ್ಟಿದ್ದು – ಇದು ಮಾನ್ಯ ಒಇಆರ್‌ಸಿ ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. ಟಿಪಿಎನ್‌ಒಡಿಎಲ್ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,64,629 ಸಿಕೆಎಂ ಜಾಲವನ್ನು ನಿರ್ವಹಿಸುತ್ತಿದೆ.
   v. **ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, ಟಿಪಿಎಸ್‌ಒಡಿಎಲ್ ಒಡಿಶಾದ ದಕ್ಷಿಣ ಭಾಗದಲ್ಲಿ ಸುಮಾರು 48,751 ಚದರ ಕಿ.ಮೀ. ವ್ಯಾಪಿಸಿಕೊಂಡಿದೆ. ಟಿಪಿಎಸ್‌ಒಡಿಎಲ್ 1,12,955 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.
   vi. **ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಅಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.
   vii. **ಅಜ್ಮೇರ್‌ನಲ್ಲಿ ವಿತರಣಾ ಫ್ರಾಂಚೈಸಿ:** ಟಾಟಾ ಪವರ್ ಅಜ್ಮೇರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್) ಅಜ್ಮೇರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆಗೆ ವಿತರಣಾ ಫ್ರಾಂಚೈಸಿ ಒಪ್ಪಂದ (ಡಿಎಫ್‌ಎ)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. ಟಿಪಿಎಡಿಎಲ್ ಅಜ್ಮೇರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವ ಮತ್ತು ಸಂರಕ್ಷಿಸುವ ಹಾಗೂ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿದೆ. ಟಿಪಿಎಡಿಎಲ್ ಎಟಿಅಂಡ್‌ಸಿ ನಷ್ಟಗಳನ್ನು 17.2%ರಿಂದ 7.8%ಗೆ ಇಳಿಕೆ ಮಾಡುವಲ್ಲಿ ಕೊಡುಗೆ ನೀಡಿದೆ.
8. **ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರಣೆ ಮತ್ತು ಸೇವೆ ಸಲ್ಲಿಸಲು ಪ್ರಸ್ತಾವಿತ ಗ್ರಾಹಕರ ಸಂಖ್ಯೆ:** ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು **ಸಿಇಎಸ್‌ಸಿಯ ಮೂರು (3) ಕಂದಾಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ಮತ್ತು ಹಾಸನವನ್ನು** ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಬಯಸಿದೆ. ಮೇಲೆ ಉಲ್ಲೇಖಿಸಿದ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಈ ಕೆಳಗಿನ ಪ್ರದೇಶಗಳನ್ನು ಒಳಗೊಂಡಿವೆ: **1. ಮೈಸೂರು ನಗರ ಪಾಲಿಕೆ 2. ಚಾಮರಾಜನಗರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 3. ಕೊಳ್ಳೇಗಾಲ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 4. ಅರಸೀಕೆರೆ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 5. ಹಾಸನ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.**
ಟಿಪಿಸಿ ಪರವಾನಗಿ ಮಂಜೂರಾದ ದಿನಾಂಕದಿಂದ 3 ವರ್ಷಗಳ ಅಂತ್ಯದೊಳಗೆ 48,000 (ನಲವತ್ತೆಂಟು ಸಾವಿರ)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.
9. **ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:**

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ: ವೆಬ್‌ಸೈಟ್: www.tatapower.com
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಯೋಗ್ಯತೆ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲೆ ತಿಳಿಸಿದಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.
12. ಪ್ರಕಟವಾದ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆಗಳು/ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಇಮೇಲ್ ಐಡಿ: asst.secykerc@gmail.com ಗೆ ಸಲ್ಲಿಸಬಹುದು. ಈ ವೈಶಿಷ್ಟ್ಯವನ್ನು ಬಳಸುವಲ್ಲಿ ಯಾವುದೇ ತೊಂದರೆ ಎದುರಾದರೆ, ಸಂಬಂಧಪಟ್ಟ ಭಾಗಿದಾರರು ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10:00 ರಿಂದ ಸಂಜೆ 5:00ರವರೆಗೆ ಮೊಬೈಲ್ ಸಂಖ್ಯೆ: 8147 144 627 ಗೆ ಅಥವಾ ಇಮೇಲ್ ಐಡಿ: asst.secykerc@gmail.com ಗೆ ಕೆಇಆರ್‌ಸಿ ಕಚೇರಿಯನ್ನು ಸಂಪರ್ಕಿಸಬಹುದು.
13. ಮೇಲೆ ನಮೂದಿಸಿದ ಇಮೇಲ್ ಐಡಿ ಮೂಲಕ ತಮ್ಮ ಸಲಹೆ/ಆಕ್ಷೇಪಣೆ ಸಲ್ಲಿಸಿರುವ ವ್ಯಕ್ತಿಯು ತಮ್ಮ ಸಲ್ಲಿಕೆಯ ಯಾವುದೇ ಪ್ರತಿಯನ್ನು (ಹಾರ್ಡ್ ಕಾಪಿ) ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳ ಪ್ರವೇಶವಿಲ್ಲದ ವ್ಯಕ್ತಿಗಳು ತಮ್ಮ ಸಲಹೆ/ಆಕ್ಷೇಪಣೆಯನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ, ಶ್ರೀ. ವಿ. ಎಚ್. ವಾಗ್ಲೆ, ಟಾಟಾ ಪವರ್ ಕಂಪನಿ ಲಿಮಿಟೆಡ್ [ದೂರವಾಣಿ: (91-22)-67172953, ಇಮೇಲ್: vidyadhar.wagle@tatapower.com] ಅವರಿಗೆ ಸೇವೆಯ ಪುರಾವೆಯೊಂದಿಗೆ, ದಿ ಸೆಕ್ರೆಟರಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ವಿಳಾಸ: ನಂ. 16ಸಿ-1, ಮಿಲ್ಲರ್ಸ್ ರೋಡ್, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ 560052 ಇವರಿಗೆ ಉದ್ದೇಶಿಸಿ ಲಿಖಿತ ರೂಪದಲ್ಲಿ (ಹಾರ್ಡ್ ಕಾಪಿ) ಸಲ್ಲಿಸಬಹುದು; ಮತ್ತು ಅದರಲ್ಲಿ ಕಳುಹಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಇಮೇಲ್ ವಿಳಾಸ (ಇದ್ದರೆ) ನಮೂದಿಸಿರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ** ನಂತರ ಸ್ವೀಕರಿಸಿದ ಸಲಹೆಗಳು ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸಿದ ಸಲಹೆಗಳು/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸಹಿ/-
ವಿದ್ಯಾಧರ ಹರಿ ವಾಗ್ಲೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

ಸ್ಥಳ: ಮುಂಬೈ
ದಿನಾಂಕ: 25 ಮೇ, 2026



ಸ್ಯಾಂಕಿ ಕೆರೆಯನ್ನು ಉಳಿಸುವಂತೆ ಆಗ್ರಹಿಸಿ ಕೆರೆ ಆವರಣದಲ್ಲಿ ಭಾನುವಾರ ನಡೆದ ಪ್ರತಿಭಟನೆಯಲ್ಲಿ ಸದಾಶಿವನಗರದ ನಾಗರಿಕರು, ಪರಿಸರ ಹೋರಾಟಗಾರರು ಪಾಲ್ಗೊಂಡಿದ್ದರು

ಸ್ಯಾಂಕಿ ಕೆರೆ ಉಳಿಸುವಂತೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಕೆರೆಯ ನೀರಿನ ಮಟ್ಟ ನಿರಂತರವಾಗಿ ಕುಸಿಯುತ್ತಿದೆ. ಇದರ ವಿಸ್ತೀರ್ಣ ಕುಗ್ಗುತ್ತಿದ್ದು, ಒಳ ಚರಂಡಿ ನೀರು ಕೆರೆಗೆ ಸೇರ್ಪಡೆ ಆಗುತ್ತಿದೆ ಎಂದು ಆರೋಪಿಸಿ ಸದಾಶಿವನಗರದ ನಾಗರಿಕರು, ಪರಿಸರ ಹೋರಾಟಗಾರರು 'ಸೇವ್ ಸ್ಯಾಂಕಿ ಟ್ಯಾಂಕ್' ಅಭಿಯಾನದಡಿಯಲ್ಲಿ ಕೆರೆಯ ಆವರಣದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

'ಕೆರೆಯ ಸುತ್ತಮುತ್ತಲೂ ಇರುವ ಹಸಿರು ವಲಯದ ನಾಶ, ಕೆರೆಯ ಪರಿಸರ ಸಮತೋಲನ ಹದಗೆಡುತ್ತಿದೆ. ಕೆರೆಯ ಸುತ್ತಮುತ್ತ ದಶಕಗಳಷ್ಟು ಹಳೆಯ ಮರಗಳನ್ನು ಕಡಿಯಲಾಗುತ್ತಿದೆ. ಸಮರ್ಪಕ ಅಧ್ಯಯನವಿಲ್ಲದೆ ನಡೆಯುತ್ತಿರುವ ಕಾಮಗಾರಿಯಿಂದ ಕೆರೆಯ ಮೂಲ ಸ್ವರೂಪವನ್ನು ಹಾಳು ಮಾಡಲಾಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ವಾಯ್ಸ್ ಆಫ್ ಸದಾಶಿವನಗರ'ದ ಸಂಚಾಲಕಿ ಶಿಲ್ಪಾ ಜತ್ತಿ ಮಾತನಾಡಿ, 'ಸ್ಯಾಂಕಿ ಕೆರೆಯೊಳಗೆ ಹಾಗೂ ಇದರ ಸುತ್ತಮುತ್ತ ನಿರ್ಮಾಣ ತ್ಯಾಜ್ಯ ತಂದು ಸುರಿಯಲಾಗುತ್ತಿದೆ. ಬೆಂಗಳೂರು ನಗರದ ಭೂಗರ್ಭ ಜಲಮಟ್ಟ, ಪರಿಸರ ಸಮತೋಲನ ಹಾಗೂ ಸಾರ್ವಜನಿಕ ಆರೋಗ್ಯ ಭವಿಷ್ಯಕ್ಕೆ ದೊಡ್ಡ ಹಾನಿಯನ್ನು ಉಂಟುಮಾಡುತ್ತಿದೆ. ಕೆರೆಯ ಜಾಗವನ್ನು ಒತ್ತುವರಿ ಮಾಡಲಾಗುತ್ತಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸಬೇಕು. ಎಲ್ಲಿಂದ ಚರಂಡಿ ನೀರು ಹರಿಯುತ್ತಿದೆ ಎಂಬುದನ್ನು ಪತ್ತೆ ಮಾಡಿ ತಡೆಗಟ್ಟುವ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

ರಾಷ್ಟ್ರೀಯ ಮಾನವ ಹಕ್ಕುಗಳು ಹಾಗೂ ಸಾಮಾಜಿಕ ನ್ಯಾಯ ಸಂಸ್ಥೆಯ ಪ್ರತಿನಿಧಿಗಳು ಮಾತನಾಡಿ, 'ಪರಿಸರ ಮತ್ತು ನೀರಿನ ಗುಣಮಟ್ಟ ರಕ್ಷಿಸಬೇಕು. ಕೆರೆಯನ್ನು ಪುನರುಜ್ಜೀವನಗೊಳಿಸಬೇಕು' ಎಂದರು. ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ, ಮನು ಮತ್ತು ಸದಾಶಿವನಗರದ ಸ್ಥಳೀಯ ನಾಗರಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜೂನ್‌ನಲ್ಲಿ ಚಲನಚಿತ್ರ ಪ್ರಶಸ್ತಿ ಪ್ರದಾನ: ಕೆ.ವಿ.ಪ್ರಭಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರತ್ನ ಸೇರಿದಂತೆ ಬಾಕಿ ಉಳಿದ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಜೂನ್‌ನಲ್ಲಿ ಪ್ರದಾನ ಮಾಡಲಾಗುವುದು' ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹೇಳಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಭಾನುವಾರ ಚಾಮರಾಜಪೇಟೆಯ ಕಲಾವಿದರ ಸಂಘದಲ್ಲಿ ಆಯೋಜಿಸಿದ್ದ 'ಚಂದನವನ ಅಂದು, ಇಂದು, ಮುಂದು' ವಿಚಾರಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

'ಈ ಹಿಂದೆ ಸಿನಿಮಾಗಳು ಭಾಷೆ, ರೈತ, ಕಾರ್ಮಿಕ ಚಳವಳಿಗೆ ವೇದಿಕೆಯಾಗಿದ್ದವು. ಕೇವಲ ಮನರಂಜನೆಗೆ ಸರಕಾಗದೆ ಬದುಕಿನ ಪ್ರತಿಬಿಂಬವಾಗಿದ್ದವು. ಇಂದು ಸಿನಿಮಾದಿಂದ ಎಷ್ಟು ಗಳಿಕೆ ಮಾಡಿದ್ದೇವೆ ಎನ್ನುವುದಕ್ಕಿಂತ, ಎಷ್ಟು ಪ್ರೇಕ್ಷಕರನ್ನು ತಲುಪಿದ್ದೇವೆ ಎಂಬುದನ್ನು ಆತ್ಮವಿಮರ್ಶೆ ಮಾಡಿಕೊಳ್ಳಬೇಕು' ಎಂದು ಕರೆನೀಡಿದರು.

'ಚಿತ್ರರಂಗ ಪ್ರೇಕ್ಷಕರನ್ನು ಗೌರವಿಸಬೇಕು. ಅವರ ಅಭಿರುಚಿಗೆ ತಕ್ಕಂತೆ ಸಿನಿಮಾಗಳನ್ನು ಮಾಡಬೇಕು. ಕನ್ನಡ ಚಿತ್ರರಂಗ ಸಾಧ್ಯತೆಯನ್ನು ವಿಸ್ತರಿಸಿದೆ. 'ಕೆಜಿಎಫ್' 'ಕಾಂತಾರ'ದಂತಹ ಸಿನಿಮಾಗಳು ಕನ್ನಡವನ್ನು ವಿಶ್ವಮಟ್ಟಕ್ಕೆ ತಲುಪಿಸಿವೆ. ಅದು ಇಂದಿನ ಗೆಲುವು. ಈ ಗೆಲುವಿನ ಜತೆಗೆ ಕೆಲವು ಸಮಸ್ಯೆಗಳು ಶುರುವಾಗಿವೆ. ಅವುಗಳಿಗೆ ನಾವೇ ಪರಿಹಾರ ಕಂಡುಕೊಳ್ಳಬೇಕು' ಎಂದು ನುಡಿದರು.

ಇದೇ ಸಂದರ್ಭದಲ್ಲಿ ಸಬ್ಸಿಡಿ ಹೆಚ್ಚಳ, ಸಿನಿಮಾ ಕಲಾವಿದರಿಗೆ ವಸತಿ ಯೋಜನೆ, ಕನ್ನಡಕ್ಕೆ ಪ್ರತ್ಯೇಕ ಒಟಿಟಿ ಸೇರಿ ಒಟ್ಟು ಏಳು ಅಂಶಗಳುಳ್ಳ ಮನವಿಯನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಜಯಮಾಲಾ ನೇತೃತ್ವದ ಸಮಿತಿ ಕೆ.ವಿ. ಪ್ರಭಾಕರ್ ಅವರಿಗೆ ಸಲ್ಲಿಸಿತು. ಬಳಿಕ ನಿರ್ದೇಶಕ ಪಿ.ಶೇಷಾದ್ರಿ ನೇತೃತ್ವದಲ್ಲಿ ಚಲನಚಿತ್ರರಂಗದ ಪ್ರಸ್ತುತ ಸ್ಥಿತಿಗತಿ ಕುರಿತು ವಿಚಾರಗೋಷ್ಠಿ ನಡೆಯಿತು.

'ಹೋಮ ಹವನಕ್ಕಿಂತ ಪ್ರತಿಭೆ ಗುರುತಿಸುವುದು ಮೇಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಸ್ರ ಚಂದ್ರದರ್ಶನದ ಹೆಸರಿನಲ್ಲಿ ಹೋಮ ಹವನಗಳನ್ನು ನಡೆಸುವುದರ ಬದಲಿಗೆ, ಕಲಾವಿದರ ಪ್ರತಿಭೆಯನ್ನು ಅನಾವರಣಗೊಳಿಸಿ ಜೀವನದ ಯಶಸ್ಸಿಗೆ ಕಾರಣರಾದವರಿಗೆ ಗೌರವ ಸಲ್ಲಿಸುವುದು ವಚನ ಅಭಿನಂದನೀಯ ಉದ್ದೇಶ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ವಚನಜ್ಯೋತಿ ಬಳಗ ಆಯೋಜಿಸಿದ್ದ ವಚನ ಅಭಿನಂದನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವ ಸಮಿತಿಯ ಹಿರಿಯ ಉಪಾಧ್ಯಕ್ಷ ಪ್ರಭುದೇವ ಚಿಗಟೇರಿ ಮಾತನಾಡಿ, 'ನಮ್ಮ ನಡುವೆ ಇರುವ ಸಾಧಕರನ್ನು ಗೌರವಿಸಬೇಕು. ಸಂತೋಷವನ್ನು ಹಂಚಿಕೊಳ್ಳಬೇಕು' ಎಂದು ಸಲಹೆನೀಡಿದರು.

ಬಿಬಿಎಂಪಿ ಮಾಜಿ ಸದಸ್ಯ ಎಸ್. ರಾಜು ಮಾತನಾಡಿ, 'ಪಾರ್ಟಿ ಮಾಡುವುದರ ಬದಲಿಗೆ ಗಾಯಕರ ಬರದಾಗಿಸಿಕೊಂಡು ಮನಮುಟ್ಟುವ ಗೀತೆಗಳನ್ನು ಅಲ್ಲಿ ಅಭಿನಂದಿಸುವುದು ಗುಣಾತ್ಮಕ ನಡವಳಿಕೆ' ಎಂದರು.

ಟ್ರಾನ್ಸ್‌ಫಾರ್ಮ್ ಯೂತ್ ಫೋರಂ ಟ್ರಸ್ಟ್ ಸತೀಶ್ ಮೂರ್ತಿ, ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಣ ಪರಿಷತ್ತಿನ ಮಾಜಿ ಅಧ್ಯಕ್ಷ ಮುನಿರಾಜಪ್ಪ, ಹ್ಯಾಬಿಟೇಟ್ ವೆಲ್ಸ್‌ನ ಗುರುಪ್ರಸಾದ್ ಕುಣಿಗಲ್, ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಸಿಡಬ್ಲ್ಯು ರಾಜಾ ಗುರುಪ್ರಸಾದ್, ಉಪಾಧ್ಯಕ್ಷ ಕೆ.ಆರ್. ಸೌಮ್ಯ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಸುರೇಶ್ ಕುಮಾರ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರ, ಬಸವೇಶ್ವರ ನಗರ, ಬೆಳಿಗ್ಗೆ 11

ಕರ್ನಾಟಕ ಸಂಘಟಕರ ಸಮಾವೇಶ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಮೋದ ಮಾತು: ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಮನಸ, ಪ.ಸ. ಕುಮಾರ್, ಎಲ್.ಎನ್. ಮುಕುಂದರಾಜ್, ಕೆ.ಆರ್. ದುರ್ಗಾದಾಸ್, ತುಳುಗು ಶಿವರಾಮ ಶೆಟ್ಟಿ, ಶುಭ ಧನಂಜಯ, ಗೊಲ್ಲಹಳ್ಳಿ ಶಿವಪ್ರಸಾದ್, ಜಯಪ್ರಕಾಶ್‌ಗೌಡ, ಆಯೋಜನೆ: ಕರ್ನಾಟಕ ರಂಗ ಪರಿಷತ್ತು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

'ಅಭ್ಯುದಯ' ಪ್ರಥಮ ಪಿಯುಸಿ ಆರಂಭೋತ್ಸವ: ಅತಿಥಿ: ಜಗದೀಶ ಶರ್ಮಾ, ಉಪಸ್ಥಿತಿ: ದೇವರಾಜ್ ಬಿ.ಕೆ., ಸುಜಾತಾ ದೇವರಾಜ್, ಲಕ್ಷ್ಮೀಶ ಹೆಗಡೆ ಸೋಂದಾ, ಆಯೋಜನೆ ಮತ್ತು ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 11

'ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ, ಗೊ.ರು. ಚನ್ನಬಸಪ್ಪ ಅವರ ಜನ್ಮದಿನಾಚರಣೆ': ಸಾನ್ನಿಧ್ಯ: ಬಲ್ಲಯ ಶಾಂತಮುನಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಸಿ. ಸೋಮಶೇಖರ್, ಗೌರವ ಸಮರ್ಪಣೆ: ಎಸ್.ಜಿ. ಸಿದ್ದರಾಮಯ್ಯ, ಅಧ್ಯಕ್ಷತೆ: ಕೆ.ಪಿ. ನಾಗರಾಜಮೂರ್ತಿ, ಪ್ರಾಸ್ತಾವಿಕ ನುಡಿ: ಸಂಗಮೇಶ ಎಂ. ಗೊಡ್ಡನವರ, ಉಪಸ್ಥಿತಿ: ಸಿಂ.ರಾ. ಹೊನ್ನಲಿಂಗಯ್ಯ, ಎಲ್. ಚನ್ನಕೇಶವ ಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಶರಣ ಮಹಿಳಾ ವೇದಿಕೆ ರಾಜರಾಜೇಶ್ವರಿನಗರ ಘಟಕ, ಸ್ಥಳ: ಬಸವ ಸದನ, ಚಿತ್ತ ರಂಗನಾಥ, ಡಿ. ಗ್ರೂಪ್ ಅಕ್ಕಪ್ಪರ್ಕರ್‌ನಗರ, ವರದಪ್ಪ ವಿನಾಯಕ ದೇವಸ್ಥಾನ ಆವರಣ, ಸಂಜೆ 6

ಉದಯಭಾನು ಸಾಂಸ್ಕೃತಿಕ ಸಂಭ್ರಮ-2026: ನೃತ್ಯ ವೈಭವ: ನೃತ್ಯ ಕುಟೀರ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಸೌಲಭ್ಯ ವಂಚಿತ ರಾಜು ಬಡಾವಣೆ

• ಚಿಕ್ಕರಾಮು



ಒಳಚರಂಡಿಗೆ ಹಾಕಿರುವ ಮುಚ್ಚಳ ಒಡೆದಿದೆ

ರಾಜರಾಜೇಶ್ವರಿನಗರ: ಗುಂಡಿ ಬಿದ್ದ ರಸ್ತೆಗಳು, ಚರಂಡಿ ತುಂಬಿ ಕಟ್ಟಿದ ತ್ಯಾಜ್ಯ, ಒಡೆದ ಮ್ಯಾನ್‌ಹೋಲ್ ಮುಚ್ಚಳ, ರಸ್ತೆ ಮೇಲೆ ಹರಿಯುವ ಗಲೀಜು ನೀರು, ಮೂಗು ಮುಚ್ಚಿಕೊಂಡು ಓಡಾಡಬೇಕಾದ ಸ್ಥಿತಿ...

ಇದು ನಾಗದೇವನಹಳ್ಳಿಯ ರಾಜು ಬಡಾವಣೆಯ ನಿವಾಸಿಗಳು ಅನುಭವಿಸುತ್ತಿರುವ ಸಮಸ್ಯೆ.

ನೇತಾಜಿ ರಸ್ತೆಯ ಚರಂಡಿಗೆ ಕಟ್ಟಡದ ತ್ಯಾಜ್ಯ ತಂದು ಸುರಿಯಲಾಗಿದೆ. ಇದರ ಪರಿಣಾಮ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದೆ. ಗಲೀಜು ನೀರಿನಲ್ಲಿ ಜನರು ಓಡಾಡುವಂತಾಗಿದೆ. ಮತ್ತೊಂದೆಡೆ ಮ್ಯಾನ್‌ಹೋಲ್‌ಗೆ ಹಾಕಿರುವ ಮುಚ್ಚಳ ಸಹ ಒಡೆದು ಹೋಗಿದ್ದು, ವಾಹನ ಸಂಚಾರ ಕಷ್ಟವಾಗಿದೆ.

'ರಾತ್ರಿ ವೇಳೆ ವಿಚಿತ್ರ ವಾಹನ ಸವಾರರು ಬಿದ್ದು ಗಾಯಗೊಂಡಿರುವ ಉದಾಹರಣೆಯೂ ಇದೆ. ಚರಂಡಿ ತುಂಬ ತ್ಯಾಜ್ಯ ತುಂಬಿರುವುದರಿಂದ ಸೊಳ್ಳೆ, ನೊಣಗಳ ಹಾವಳಿ ವಿಪರೀತವಾಗಿದೆ. ಮ್ಯಾನ್‌ಹೋಲ್ ಮುಚ್ಚಳ ದುರಸ್ತಿ ಮಾಡಬೇಕು. ಒಳಚರಂಡಿ ತುಂಬಿ ರಸ್ತೆಯಲ್ಲಿ ನೀರು ಹರಿದರೆ ದುರ್ವಾಸನೆ ಮೂಗಿಗೆ ಬಡಿಯುತ್ತದೆ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

'ಬಡಾವಣೆಯ ಕೆಲ ರಸ್ತೆಗಳ ಡಾಂಬರು ಕಿತ್ತುಹೋಗಿ ಹಲವು ವರ್ಷಗಳು ಕಳೆದಿದ್ದರೂ ಜಿಬಿಎ ಪಶ್ಚಿಮ ನಗರ ಪಾಲಿಕೆ ಅಧಿಕಾರಿಗಳು, ಬೆಂಗಳೂರು ನೀರು ಸರಬರಾಜು ಮಂಡಳಿ ಅಧಿಕಾರಿಗಳು ಚರಂಡಿ ಮತ್ತು ರಸ್ತೆ ಅಭಿವೃದ್ಧಿಪಡಿಸಲು ಮುಂದಾಗುತ್ತಿಲ್ಲ. ಮತ್ತೊಂದೆಡೆ ಮನೆ ಕಟ್ಟುವ ಸಲುವಾಗಿ ವಿದ್ಯುತ್, ನೀರು, ಒಳಚರಂಡಿ ಸಂಪರ್ಕ ಪಡೆಯಲು ರಸ್ತೆ ಅಗೆದು ಸರಿಯಾಗಿ ಮುಚ್ಚದ ಕಾರಣ ಗುಂಡಿಗಳು ಬೀಳುತ್ತಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಬಿಎ ಮತ್ತು ಜಲಮಂಡಳಿ ಹಿರಿಯ ಅಧಿಕಾರಿಗಳು ವಾರದಲ್ಲಿ ಎರಡು ದಿನವಾದರೂ ಒಂದೊಂದು ವಾರ್ಡ್‌ಗೆ ಭೇಟಿ ನೀಡಿದರೆ ಸಮಸ್ಯೆಗಳಿಗೆ ಪರಿಹಾರ ನೀಡಲು ಸಾಧ್ಯ ಎನ್ನುತ್ತಾರೆ ನಿವಾಸಿಗಳು.



ಶೃಂಗೇರಿಯ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಹಮ್ಮಿಕೊಂಡಿದ್ದ 'ಸಂಸ್ಕಾರ ಸುಧಾ' ಶಿಬಿರದಲ್ಲಿ ಪ್ರೊ. ಕೃಷ್ಣ ಜೋಶಿ ಅವರನ್ನು ಗೌರವಿಸಲಾಯಿತು. ಅರ್ಚನಾ ಹೆಗಡೆ, ಪ್ರಶಾಂತ ಉಡುಪ, ಸುಂದರಮೂರ್ತಿ ಉಪಸ್ಥಿತರಿದ್ದರು

ಕಾಮಗಾರಿ: ಸಂಚಾರ ಮಾರ್ಪಾಡು

ಬೆಂಗಳೂರು: ಶಿವಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಾಮರಾಜ ರಸ್ತೆಯ ನಾಲಾ ಕ್ರಾಸ್ ಹತ್ತಿರ ಜಿಬಿಎ ವತಿಯಿಂದ ಆರ್‌ಸಿಸಿ ಕಲ್ವರ್ಟ್ ನಿರ್ಮಿಸುವ ಕಾಮಗಾರಿ ಕೈಗೊಳ್ಳುತ್ತಿದ್ದು, ಮೇ 24ರಿಂದ 60 ದಿನ ಸಂಚಾರ ಮಾರ್ಪಾಡು ಮಾಡಲಾಗಿದೆ.

ಕಾಮರಾಜ ರಸ್ತೆಯ ವಿಠೋಬಾ ದೇವಸ್ಥಾನದಿಂದ ನಾಲಾ ರಸ್ತೆಯವರೆಗೆ ಹಾಗೂ ಕೆ.ಆರ್.ರಸ್ತೆ-ಕಬ್ಬನ್ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಕಮರ್ಷಿಯಲ್ ಸ್ಟ್ರೀಟ್ ಕಡೆಯಿಂದ ಕಾಮರಾಜ ರಸ್ತೆಯ ಮೂಲಕ ಪುಲಕೇಶಿ ನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸುವ ಎಲ್ಲಾ ರೀತಿಯ ವಾಹನಗಳು ಕಾಮರಾಜ ರಸ್ತೆಯ ವಿಠೋಬಾ ದೇವಸ್ಥಾನ ಹತ್ತಿರ ಬಲ ತಿರುವು ಪಡೆದು ವಿಠಲಮಲ್ಯ ಸ್ಟ್ರೀಟ್ ಮೂಲಕ ದೇವಸ್ಥಾನ ಹತ್ತಿರ ಎಡ ತಿರುವು ಪಡೆದು ಸೇಂಟ್ ಜಾನ್ ರಸ್ತೆಯ ಮೂಲಕ ಹೋಗಬಹುದು.

ಕಬ್ಬನ್ ರಸ್ತೆ ಕಡೆಯಿಂದ ಕಾಮರಾಜ ರಸ್ತೆಯ ಮೂಲಕ ಪುಲಕೇಶಿ ನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸುವ ವಾಹನಗಳು ಕೆ.ಆರ್.ರಸ್ತೆ-ಕಬ್ಬನ್ ರಸ್ತೆ ಜಂಕ್ಷನ್ ಹತ್ತಿರ ಬಲ ತಿರುವು ಪಡೆದು ಮಣಿಪಾಲ್ ಜಂಕ್ಷನ್ ಹತ್ತಿರ ಎಡ ತಿರುವು ಪಡೆದು ಡಿಕನ್ಸನ್ ರಸ್ತೆ ಮೂಲಕ ನೇರವಾಗಿ ತೆರಳಿ ಬ್ಲೂ-ಸ್ಟೋನ್ ಹತ್ತಿರ ಬಲ ತಿರುವು ಪಡೆದು ಸೇಂಟ್ ಜಾನ್ ರಸ್ತೆಯ ಮೂಲಕ ಸಾಗಬೇಕು.

ಡಿಸ್ಪೆನ್ಸರಿ ರಸ್ತೆ (ಆಲೀಸ್ ಜಂಕ್ಷನ್) ಕಡೆಯಿಂದ ಕಾಮರಾಜ ರಸ್ತೆಯ ಮೂಲಕ ಪುಲಕೇಶಿ ನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸುವ ವಾಹನಗಳು ಡಿಕನ್ಸನ್ ರಸ್ತೆ ಮೂಲಕ ನೇರವಾಗಿ ಸಾಗಿ ಬ್ಲೂ ಸ್ಟೋನ್ ಹತ್ತಿರ ಎಡ ತಿರುವು ಪಡೆದು ಸೇಂಟ್ ಜಾನ್ ರಸ್ತೆ ಮೂಲಕ ಸಂಚರಿಸಬಹುದು.

ಡಬ್ಲ್ಯು.ಐ.ಎಂ ಗೌರವಕ್ಕೆ ಪಾತ್ರರಾದ ಸ್ವರಲಕ್ಷ್ಮಿ

ಪ್ರಜಾವಾಣಿ ವಾರ್ತೆ



ಸ್ವರಲಕ್ಷ್ಮಿ ಎಸ್ ನಾಯರ್

ಬೆಂಗಳೂರು: ನಗರದ ಪ್ರತಿಭಾನ್ವಿತ ಚೆಸ್ ಆಟಗಾರ್ತಿ ಸ್ವರಲಕ್ಷ್ಮಿ ಎಸ್.ನಾಯರ್ ಅವರು ರಾಜ್ಯದ ಎರಡನೇ ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್ (ಡಬ್ಲ್ಯು.ಐ.ಎಂ) ಗೌರವಕ್ಕೆ ಪಾತ್ರರಾಗಿದ್ದಾರೆ. ಅವರು ಈ ಗೌರವ ಪಡೆದ ರಾಜ್ಯದ ಎರಡನೇ ಆಟಗಾರ್ತಿ.

2025ರಲ್ಲಿ ಎರಡು ಡಬ್ಲ್ಯು.ಐ.ಎಂ ನಾರ್ಮ್ ಪಡೆದಿದ್ದ ಅವರು ಏಪ್ರಿಲ್-ಮೇ ತಿಂಗಳಲ್ಲಿ ನಡೆದ ಸ್ಪೇನಿನಲ್ಲಿ ನಡೆದ ಐಎಂ ಟೂರ್ನಿಯಲ್ಲಿ ಮತ್ತು ಈ ತಿಂಗಳು ಇಟಲಿಯ ಸಾರ್ಡಿನಿಯಾ ವಿಶ್ವ ಚೆಸ್ ಫೆಸ್ಟಿವಲ್‌ನಲ್ಲಿ ಒಟ್ಟು ಎರಡು ನಾರ್ಮ್‌ಗಳನ್ನು ಪಡೆದಿದ್ದಾರೆ. ಅವರ ಲೈವ್ ರೇಟಿಂಗ್ 2219.

ಬೆಳ್ಳಂದೂರಿನ ಇಶಾ ಶರ್ಮಾ ಅವರು ರಾಜ್ಯದ ಮೊದಲ ಡಬ್ಲ್ಯು.ಐ.ಎಂ ಎನಿಸಿದ್ದಾರೆ.

'ನಾನು ಈ ಹಂತಕ್ಕೆ ಬರಬೇಕಾದರೆ ತರಬೇತುದಾರರಾದ ಗಹನ್ ಎಂ.ಜಿ, ಸುಮುಖ್ ಗಾಯಕವಾಡ್ ಮತ್ತು ಗ್ರ್ಯಾಂಡ್‌ಮಾಸ್ಟರ್ ಜಿ.ಎ.ಸ್ಟಾನಿ ಅವರ ಪಾತ್ರ ಪ್ರಮುಖವಾದುದು' ಎಂದು 19 ವರ್ಷ ವಯಸ್ಸಿನ ಆಟಗಾರ್ತಿ ಭಾನುವಾರ ಪ್ರತಿಕ್ರಿಯಿಸಿದರು.

ಪ್ರಮುಖ ಸಾಧನೆ: ನಗರದ ವಿಜಯ್ ಕಾಂಪೋಸಿಟ್ ಕ್ರಿಶ್ಚಿಯನ್ ಕಾಲೇಜಿನ ಬಿ.ಎ. ವಿದ್ಯಾರ್ಥಿನಿಯಾಗಿರುವ ಅವರು ವಿವಿಧ ವಯೋವರ್ಗಗಳಲ್ಲಿ ಐದು ಬಾರಿ ರಾಜ್ಯ ಚಾಂಪಿಯನ್ ಆಗಿದ್ದಾರೆ. 2022ರಲ್ಲಿ ಕಾಮನ್‌ವೆಲ್ತ್ 20 ವರ್ಷದೊಳಗಿನ ಬಾಲಕಿಯರ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.

ಯುಎಇಯ ಅಲ್ ಐನ್‌ನಲ್ಲಿ ನಡೆದ ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಭಾರತ ಬ್ಲಿಟ್ಜ್ ತಂಡದಲ್ಲಿ ಇದ್ದರು. ಬೆಳ್ಳಿ ಗೆದ್ದ ರ‍್ಯಾಪಿಡ್ ತಂಡದಲ್ಲೂ ಆಡಿದ್ದರು.

ಸತತ ಐದನೇ ಬಾರಿ ಪ್ರಶಸ್ತಿ ಗೆದ್ದ ಸೃಷ್ಟಿ

ಪ್ರಜಾವಾಣಿ ವಾರ್ತೆ



ಸೃಷ್ಟಿ ಕಿರಣ್


ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಆಟಗಾರ್ತಿ ಸೃಷ್ಟಿ ಕಿರಣ್ ಅವರು ಎಲ್ ಸಾಲ್ವಡಾರ್‌ನ ಸ್ಯಾಂಟಾ ಟೆಕ್ಲಾದಲ್ಲಿ ಶನಿವಾರ ಮುಕ್ತಾಯಗೊಂಡ ಐಟಿಎಫ್ ವಿಶ್ವ ಟೆನಿಸ್ ಟೂರ್ ಜೂನಿಯರ್ ಜೆ60 ಟೂರ್ನಿಯ ಬಾಲಕಿಯರ ಸಿಂಗಲ್ಸ್ ಕಿರೀಟ ಗೆದ್ದುಕೊಂಡರು. ಅದರೊಂದಿಗೆ, ಐಟಿಎಫ್ ಜೂನಿಯರ್ ಸರಣಿಯಲ್ಲಿ ಬೆಂಗಳೂರಿನ ಆಟಗಾರ್ತಿ ಸತತ ಐದನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

13 ವರ್ಷ ವಯಸ್ಸಿನ ಸೃಷ್ಟಿ ಅವರು ಫೈನಲ್‌ನಲ್ಲಿ 7-5, 6-1ರಿಂದ ನೇರ ಸೆಟ್‌ಗಳಲ್ಲಿ ಕೆನಡಾದ ಐಡಾ ತಿಬೆಲ್ಟ್ ವಿರುದ್ಧ ಗೆಲುವು ಸಾಧಿಸಿದರು.

'ಐಟಿಎಫ್ ಜೂನಿಯರ್ ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರುತ್ತಿರುವ ಬಗ್ಗೆ ಖುಷಿ ಇದೆ. ರ‍್ಯಾಂಕಿಂಗ್ ಅನ್ನು ಉತ್ತಮ ಪಡಿಸಿಕೊಂಡು 2027ರ ಜೂನಿಯರ್ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆಡುವುದು ನನ್ನ ಮೊದಲ ಗುರಿ. ಮುಂಬರುವ ವರ್ಷಗಳಲ್ಲಿ ಜೂನಿಯರ್ ಗ್ರ್ಯಾನ್‌ಸ್ಲಾಮ್ ಹಾಗೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಭಾರತಕ್ಕೆ ಕೀರ್ತಿ ತರಬೇಕೆಂಬ ಬಯಕೆ ಇದೆ' ಎಂದು ಸೃಷ್ಟಿ ಅವರು ಪ್ರತಿಕ್ರಿಯಿಸಿದರು.

ನಿಧನ ವಾರ್ತೆ

ಎಲ್. ಸಿದ್ದೇಗೌಡ



ಬೆಂಗಳೂರು: ಮಾಗಡಿ ತಾಲ್ಲೂಕಿನ ಹೊಸದೊಡ್ಡಿ ಗ್ರಾಮದ ನಿವೃತ್ತ ಪೊಲೀಸ್ ಅಧಿಕಾರಿ ಎಲ್. ಸಿದ್ದೇಗೌಡ (89) ಅವರು ವಯೋಸಹಜ ಕಾರಣದಿಂದ ಭಾನುವಾರ ರಾತ್ರಿ 7 ಗಂಟೆಗೆ ಗಿರಿನಗರದ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ. ಸೋಮವಾರ ಸಂಜೆ 4 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ. ಕುಟುಂಬದವರ ಸಂಪರ್ಕಕ್ಕೆ: 98451-40128

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ದತ್ತು ಸರಳ, ಆದಾಯ ಹೆಚ್ಚಳ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿ ದತ್ತು ಯೋಜನೆ: ಸೆಲೆಬ್ರಿಟಿಗಳೆಡೆಗೆ ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ(ಬಿಬಿಪಿ) ಪ್ರಾಣಿ, ಪಕ್ಷಿಗಳ ದತ್ತು ಪಡೆಯುವುದನ್ನು ಉತ್ತೇಜಿಸಲು ಕೈಗೊಂಡ ಸುಧಾರಣಾ ಕ್ರಮಗಳು ಫಲ ನೀಡುತ್ತಿವೆ. ದತ್ತು ಯೋಜನೆಯಡಿ ಒಂದೇ ವರ್ಷದಲ್ಲಿ ₹30 ಲಕ್ಷಕ್ಕೂ ಹೆಚ್ಚು ಆದಾಯ ಲಭಿಸಿದೆ.

ಜನರಲ್ಲಿ ಪ್ರಾಣಿ, ಪಕ್ಷಿಗಳ ಮೇಲಿನ ಪ್ರೀತಿ ಹೆಚ್ಚಿಸುವ ನಿಟ್ಟಿನಲ್ಲಿ ಉದ್ಯಾನವು ಕೆಲವು ವರ್ಷಗಳ ಹಿಂದೆ ಪ್ರಾಣಿ ದತ್ತು ಯೋಜನೆ ಆರಂಭಿಸಿದೆ. ಹುಲಿ, ಸಿಂಹ, ಚಿರತೆ, ಆನೆ, ಜಿರಾಫ್ ಸಹಿತ ಪ್ರಮುಖ ಪ್ರಾಣಿಗಳು ಮಾತ್ರವಲ್ಲದೇ ಪುಟ್ಟ ಪ್ರಾಣಿ, ಪಕ್ಷಿಗಳನ್ನು ವರ್ಷದ ಮಟ್ಟಿಗೆ ದತ್ತು ಪಡೆಯಲು ಅವಕಾಶ ನೀಡಲಾಗಿತ್ತು.

ಕೋವಿಡ್ ಕಾಲದಲ್ಲಿ ಪ್ರಾಣಿ, ಪಕ್ಷಿಗಳಿಗೆ ಆಹಾರ ಒದಗಿಸಲು ದೇಣಿಗೆಯೂ ಸೇರಿದಂತೆ ದತ್ತು ಯೋಜನೆಯಡಿ ಸುಮಾರು ₹2 ಕೋಟಿ ಆದಾಯ ಲಭಿಸಿತ್ತು. ಆ ನಂತರ ಕಡಿಮೆಯಾಗಿತ್ತು.

ಜೈವಿಕ ಉದ್ಯಾನಕ್ಕೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು, ಬೆಂಗಳೂರಿನಂತಹ ನಗರದಲ್ಲಿ ಪ್ರಮುಖ ಸೆಲೆಬ್ರಿಟಿಗಳು, ವಿವಿಧ ಕ್ಷೇತ್ರದ ಗಣ್ಯರು ಇದ್ದರೂ ಯೋಜನೆಗೆ ನಿರೀಕ್ಷಿತ ಪ್ರತಿಕ್ರಿಯೆ ಬಂದಿರಲಿಲ್ಲ. ಈ ಕಾರಣದಿಂದ ಕಳೆದ ವರ್ಷ ಕೆಲ ನಿಯಮಗಳನ್ನು ಬದಲಿಸಿ, ಹೊಸ ಮಾರ್ಗಸೂಚಿಗಳನ್ನು ಬಿಬಿಪಿ ರೂಪಿಸಿದೆ.

ನಟ ಸಂಯುಕ್ತ ಹೊರನಾಡು ಅವರು ಸಿಂಚನಾ ಹೆಸರಿನ ಹುಲಿಯನ್ನು ವರ್ಷದ ಅವಧಿಗೆ ₹2 ಲಕ್ಷ ಪಾವತಿಸಿ ದತ್ತು ಪಡೆದಿದ್ದಾರೆ. ಉಳಿದಂತೆ ಉದ್ಯಮ ವಲಯ, ವಿವಿಧ ಸಂಸ್ಥೆಯವರು ದತ್ತು ಪಡೆದುಕೊಂಡಿದ್ದಾರೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಮಾದರಿಯಲ್ಲಿಯೇ ದತ್ತು ಯೋಜನೆ ಮತ್ತಷ್ಟು ಜನಪ್ರಿಯಗೊಳಿಸಲು ಸೆಲೆಬ್ರೆಟಿಗಳತ್ತ ಗಮನ ಹರಿಸುತ್ತಿದೆ. ಸಾಮಾಜಿಕ ಮಾಧ್ಯಮ ಬಳಸಿಕೊಂಡು ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಮೊದಲು ಒಂದು ವರ್ಷಕ್ಕೆ ದತ್ತು ಪಡೆಯಲು ಇದ್ದ ಅವಕಾಶವನ್ನು ಈಗ ಐದು ವರ್ಷಕ್ಕೆ ವಿಸ್ತರಣೆ ಮಾಡಿದೆ. ಹೊಸ ನೀತಿಯಡಿ 5 ವರ್ಷಗಳ ವರೆಗೆ ದತ್ತು ಪಡೆಯಲು ಅವಕಾಶವಿದೆ. ಇದಲ್ಲದೇ ನಿಮಗೆ ಇಷ್ಟವಾದ ಪ್ರಾಣಿಗಳಿಗೆ ಹೆಸರಿಡುವ ಅವಕಾಶವನ್ನೂ ಮಾಡಿಕೊಡಲಾಗಿದೆ.

ದತ್ತು ಪಡೆದವರಿಗೆ ಪ್ರಮಾಣಪತ್ರ, ಪ್ರಾಣಿ, ಪಕ್ಷಿ ಮನೆ ಆವರಣದಲ್ಲಿ ದತ್ತು ಪಡೆದವರ ಹೆಸರಿನ ಫಲಕ, 5 ವರ್ಷಗಳವರೆಗೆ ವಾರ್ಷಿಕ 5 ಉಚಿತ ಪ್ರವೇಶ ಪಾಸ್ ಕೂಡ ನೀಡಲಾಗುತ್ತದೆ.

ನಾಲ್ಕು ವರ್ಷ ಬಳಿಕ ಚೇತರಿಕೆ: ಕೋವಿಡ್ ಕಾಲದಲ್ಲಿ ಉದ್ಯಾನ ಮೂರ್ನಾಲ್ಕು ತಿಂಗಳು ಬಂದ್ ಆಗಿದ್ದರಿಂದ ಆದಾಯ ಕುಸಿತಗೊಂಡು ಪ್ರಾಣಿ, ಪಕ್ಷಿಗಳಿಗೆ ಆಹಾರ ಒದಗಿಸುವುದು ಕಷ್ಟವಾಗಿತ್ತು. ಆಗ ಹಲವಾರು ಮಂದಿ ದತ್ತು ನೀಡಲು, ಒಂದು ದಿನದ ಆಹಾರ ಒದಗಿಸುವ ಜತೆಗೆ ದೇಣಿಗೆ ನೀಡಲು ಮುಂದೆ ಬಂದರು.

2021–22ರಲ್ಲಿ ಪ್ರತಿ ವರ್ಷ ದತ್ತು ಯೋಜನೆಯಡಿ ಸಂಗ್ರಹವಾಗುವ ಆರ್ಥಿಕ ಸಂಪನ್ಮೂಲ ಮೂರು ಪಟ್ಟು ಸಂಗ್ರಹವಾಗಿತ್ತು. ಇದರಲ್ಲಿ 770 ಮಂದಿ ಪ್ರಾಣಿ, ಪಕ್ಷಿ ದತ್ತು ಪಡೆದಿದ್ದರಿಂದ ₹1.24 ಕೋಟಿ, ಒಂದು ದಿನದ ಆಹಾರ ಒದಗಿಸುವ ಚಟುವಟಿಕೆಯಡಿ 200 ಮಂದಿ ನೆರವಾಗಿದ್ದರಿಂದ ₹10.52 ಲಕ್ಷ, ದೇಣಿಗೆ ರೂಪದಲ್ಲಿ ₹57.47 ಲಕ್ಷ ಸೇರಿ ಒಟ್ಟು ₹1.92 ಕೋಟಿ ಸಂಗ್ರಹವಾಗಿತ್ತು. ಇದು ಬಿಬಿಪಿ ಇತಿಹಾಸದಲ್ಲಿ ದಾಖಲೆಯಾಗಿದೆ.

'ಮೂರ್ನಾಲ್ಕು ವರ್ಷದಿಂದ ವಿವಿಧ ಕ್ಷೇತ್ರದವರನ್ನು ಸಂಪರ್ಕಿಸುತ್ತಲೇ ಇದ್ದೇವೆ. ಕೆಲವರು ಆಸಕ್ತಿ ತೋರಿಸುತ್ತಾರೆ. ಹೆಚ್ಚಿನ ಮಂದಿ ದತ್ತು ಪಡೆಯಲು ಮುಂದೆ ಬರುತ್ತಿಲ್ಲ. ಆದರೂ, ಉದ್ಯಾನಕ್ಕೆ ಬರುವ ಪ್ರತಿಯೊಬ್ಬ ವೀಕ್ಷಕರಿಗೂ ಮಾಹಿತಿ ನೀಡಿದರ ಫಲವಾಗಿ ಈ ವರ್ಷ ಆದಾಯ ಹೆಚ್ಚಿದ್ದು, ಮುಂದಿನ ವರ್ಷದಲ್ಲಿ ಏರಿಕೆಯಾಗಿ ಪ್ರಾಣಿ, ಪಕ್ಷಿ ನಿರ್ವಹಣೆಗೆ ಸಹಕಾರಿಯಾಗಲಿದೆ' ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ತಿಳಿಸಿದರು.

ವರ್ಷ	ದತ್ತು ಮೊತ್ತ	ದತ್ತು ಪಡೆದವರು
2021-22	₹1.92 ಕೋಟಿ	970
2022-23	₹66.07 ಲಕ್ಷ	448
2023-24	₹72.51 ಲಕ್ಷ	398
2024-25	₹53.84 ಲಕ್ಷ	413
2025-26	₹80.75 ಲಕ್ಷ	395

ಈ ವರ್ಷ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ (ಎನ್‌ಟಿಪಿಸಿ) ₹40 ಲಕ್ಷ ದತ್ತು ಮೊತ್ತ ನೀಡಿದೆ. ಇನ್ನೂ ಕೆಲವರನ್ನು ಸಂಪರ್ಕಿಸುತ್ತಿದ್ದೇವೆ

ಎ.ವಿ.ಸೂರ್ಯಸೇನ್, ಇಡಿ, ಬನ್ನೇರುಘಟ್ಟ ಜೈವಿಕ ಉದ್ಯಾನ



ಬನ್ನೇರುಘಟ್ಟ ಜೈವಿಕ ಉದ್ಯಾನದ ಚಿರತೆ

ದತ್ತು ಪಡೆಯೋದು ಹೇಗೆ?

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿ ದತ್ತು ಕಾರ್ಯಕ್ರಮದಡಿ ಆನೆ, ಹುಲಿ, ಸಿಂಹ, ಚಿರತೆ ಸಹಿತ ವಿವಿಧ ಪ್ರಾಣಿ/ಪಕ್ಷಿಗಳನ್ನು ದತ್ತು ಪಡೆಯಲು ಅವಕಾಶವಿದೆ.

ಉದ್ಯಾನದಲ್ಲಿ 26 ಆನೆ, 20 ಹುಲಿ, 56 ಕರಡಿ, 27 ಸಿಂಹ, 85 ಚಿರತೆಗಳು ಇವೆ. 357 ಹಕ್ಕಿ, 1,619 ಸಸ್ತನಿಗಳು, 206 ಸರೀಸೃಪಗಳು ಇವೆ. ಒಂದು ಆನೆಗೆ ವರ್ಷಕ್ಕೆ ₹3 ಲಕ್ಷ ದರ ವಿಧಿಸಿದ್ದರೆ, ಹುಲಿ, ಸಿಂಹ, ಜಿರಾಫೆಗೆ ₹2 ಲಕ್ಷ ನಿಗದಿ ಪಡಿಸಲಾಗಿದೆ. ನೀರಾನೆಗೆ ₹1.50 ಲಕ್ಷ, ಹಸಿರಾಕ್ಷೆಗೆ ₹75 ಸಾವಿರ ದತ್ತು ದರವಿದೆ. ಇವೆಲ್ಲವೂ ಡೈಮಂಡ್ ಗ್ರೂಪ್‌ನಲ್ಲಿವೆ.

ಚಿನ್ನದ ಗ್ರೂಪ್‌ನಲ್ಲಿ ಚಿರತೆ, ಕರಡಿ, ಕಾಡುಕೋಣ ಸೇರಿದ್ದು, ಇವುಗಳ ದತ್ತು ದರ ವಾರ್ಷಿಕ ₹50 ಸಾವಿರದಷ್ಟಿದೆ. ಬೆಳ್ಳಿ ಹಾಗೂ ಕಂಚಿನ ಅಡಿ ವಿವಿಧ ಪ್ರಾಣಿ ಪಕ್ಷಿಗಳಿದ್ದು, ₹1 ಸಾವಿರದಿಂದ ₹15 ಸಾವಿರ ದತ್ತು ದರವಿದೆ.

ಬಿಬಿಪಿ ವೆಬ್‌ಸೈಟ್ https://bannerughattabiopark.org/adopt.html ಮೂಲಕ ಸಂರಕ್ಷಿಸಿ ದತ್ತು ಪಡೆಯಬಹುದು. ಇಲ್ಲವೇ ಉದ್ಯಾನಕ್ಕೆ ಭೇಟಿ ನೀಡಿ ದತ್ತು ಸ್ವೀಕರಿಸಲು ಅವಕಾಶವಿದೆ. 80ಜಿ ಅಡಿ ಇದಕ್ಕೆ ತೆರಿಗೆ ವಿನಾಯಿತಿ ಪಡೆಯಬಹುದು ಎಂದು ಅಧಿಕಾರಿಗಳು ತಿಳಿಸಿದರು.

ಚಿಟಿಕೆ ಸುದ್ದಿ

'ತಮ್ಮ ಅರ್ಹತೆ ಅರಿತು ನಿಖಿಲ್ ಮಾತನಾಡಲಿ'

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಕುರಿತಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಟೀಕಿಸುವ ಮೊದಲು ತಮ್ಮ ಅರ್ಹತೆ ಏನು ಎನ್ನುವುದನ್ನು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿದುಕೊಳ್ಳಲಿ' ಎಂದು ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ಹೇಳಿದರು.

ಭಾನುವಾರ ಮಾತನಾಡಿದ ಅವರು, 'ಈ ಯೋಜನೆ ಕುರಿತಂತೆ ಚರ್ಚಿಸಲು ತಮ್ಮ ತಂದೆಯನ್ನು (ಎಚ್.ಡಿ. ಕುಮಾರಸ್ವಾಮಿ) ನಿಖಿಲ್ ಒಪ್ಪಿಸಲಿ' ಎಂದರು.

'ಬಿಡದಿ ಟೌನ್‌ಶಿಪ್ ಭೂಸ್ವಾಧೀನದ ಕಥೆ, ಚಿತ್ರಕತೆ ಎಲ್ಲವೂ ಕುಮಾರಸ್ವಾಮಿ ಅವರದ್ದು. ಡಿಎಲ್‌ಎಫ್ ಸಂಸ್ಥೆಯನ್ನು ಹೀರೊ ಮಾಡಲು ಹೊರಟಿದ್ದರು. ಆದರೆ, ಈಗ ನಾವು ಅದನ್ನು ಚಿತ್ರ ರೂಪದಲ್ಲಿ ತರುತ್ತಿದ್ದೇವೆ' ಎಂದರು.

ಗಿಗ್ ಕಾರ್ಮಿಕರಿಗೆ ಮಾಹಿತಿ ನೀಡಲು ಗಿಗ್ ಕಾರ್ಮಿಕರ ಸಮಾವೇಶ ನಡೆಸಲು ಚಿಂತನೆ ನಡೆದಿದೆ' ಎಂದರು.

'ಬಕ್ರೀದ್: ಸೌಹಾರ್ದದಿಂದ ಆಚರಿಸಿ'

ಬೆಂಗಳೂರು: ಬಕ್ರೀದ್ ಅಂಗವಾಗಿ ಈಶಾನ್ಯ ವಿಭಾಗದ ಪೊಲೀಸ್ ಠಾಣೆಗಳಲ್ಲಿ ಶಾಂತಿ ಸಭೆ ನಡೆಸಲಾಯಿತು.

ಯಲಹಂಕ ನ್ಯೂಟೌನ್, ಕೊತ್ತನೂರು, ಅಮೃತಹಳ್ಳಿ ಹಾಗೂ ಯಲಹಂಕ ಠಾಣೆಗಳಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಧಾರ್ಮಿಕ ಮುಖಂಡರು, ಸಮುದಾಯದ ಗಣ್ಯರು ಹಾಗೂ ಸ್ಥಳೀಯ ನಿವಾಸಿಗಳಿಗೆ ಶಾಂತಿ, ಸೌಹಾರ್ದ ಮತ್ತು ಪರಸ್ಪರ ಸಹಕಾರದೊಂದಿಗೆ ಹಬ್ಬ ಆಚರಿಸುವಂತೆ ಪೊಲೀಸರು ಕರೆ ನೀಡಿದರು. 'ಹಬ್ಬದ ವೇಳೆ ವದಂತಿಗಳಿಗೆ ಕಿವಿ ಗೊಡಬಾರದು, ಸುಳ್ಳು ಅಥವಾ ಪ್ರಚೋದನಕಾರಿ ಸಂದೇಶಗಳನ್ನು ಹಂಚಿಕೊಳ್ಳಬಾರದು' ಎಂದು ತಿಳಿಸಿದರು.

ವಿದ್ಯಾರಣ್ಯಪುರ, ಕೊತ್ತನೂರು, ಕೊಡಿಗೇಹಳ್ಳಿ ಹಾಗೂ ಚಿಕ್ಕಜಾಲ ಠಾಣೆಗಳಲ್ಲೂ ಶಾಂತಿ ಸಭೆ ನಡೆಸಲಾಯಿತು. ಹಬ್ಬದ ಸಂದರ್ಭದಲ್ಲಿ ಶಾಂತಿ, ಸುವ್ಯವಸ್ಥೆ ಮತ್ತು ಪರಸ್ಪರ ಸಾಮರಸ್ಯ ಕಾಪಾಡುವಂತೆ ಮನವಿ ಮಾಡಿದರು.



ಚಿತ್ರಾವಳಿ



ಹೆಸರಘಟ್ಟ ರಸ್ತೆಯಲ್ಲಿರುವ ಕಾವೇರಿ ವನಿತಾ ಸೇವಾ ಆಶ್ರಮದಲ್ಲಿ ಶಾರದಾಂಬಾ ಸುಗಮ ಸಂಗೀತ ಸಂಸ್ಥೆಯಿಂದ ಆಯೋಜಿಸಿದ್ದ ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಪ್ರಮಾಣಪತ್ರ ನೀಡಲಾಯಿತು. ಸಂಸ್ಥೆಯ ಸ್ಥಾಪಕಿ ವಿನೋದ ಉಪಸ್ಥಿತರಿದ್ದರು



ಅರಿಹಂತ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಚಂದ್ರಶೇಖರ್ ಎಸ್‌. ಕರಿಗಾರ್ ಅವರು ವಿದ್ಯಾರ್ಥಿನಿಯೊಬ್ಬರಿಗೆ ಪದವಿ ಪ್ರದಾನ ಮಾಡಿದರು. ಸಂಸ್ಥೆಯ ಅಧ್ಯಕ್ಷ ಆಶೋಕ್ ಎಸ್‌. ನಗೋರಿ, ಸಹಾಯಕ ನಿರ್ದೇಶಕರಾದ ಅಶ್ವಿನಿ, ಪ್ರಾಂಶುಪಾಲರಾದ ಗುರುದತ್, ಎಸ್‌. ಅನಿಲ್ ಕುಮಾರ್ ಉಪಸ್ಥಿತರಿದ್ದರು

'7 ಕಾಫಿ 100 ಮೈಲಿ' ಅಭಿಯಾನ ಮುಕ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಕ್ಲಿಂಗ್ ಸಮುದಾಯವನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಉದ್ದೇಶದಿಂದ ವೆಲೋಕೋಫಿ ಆಯೋಜಿಸಿದ್ದ '7 ಕಾಫಿ 100 ಮೈಲಿ' ಅಭಿಯಾನ ಶನಿವಾರ ಮುಕ್ತಾಯಗೊಂಡಿತು.

ಮೇ 17ರಿಂದ 23ರವರೆಗೆ ಬೆಂಗಳೂರಿನ ವಿವಿಧ ಭಾಗಗಳಲ್ಲಿ ನಡೆದ ಅಭಿಯಾನದಲ್ಲಿ ಪ್ರತಿ ದಿನ ಸರಾಸರಿ 23 ಕಿ.ಮೀ. ಸೈಕ್ಲಿಂಗ್ ಮಾಡಲಾಯಿತು.

ಈ ವರ್ಷದ ಕಾರ್ಯಕ್ರಮದಲ್ಲಿ 1,400ಕ್ಕೂ ಹೆಚ್ಚು ಸೈಕ್ಲಿಸ್ಟ್‌ಗಳು ಭಾಗವಹಿಸಿದ್ದು, ಸುಮಾರು 1,500 ಕಪ್ ಕಾಫಿ ವಿತರಿಸಲಾಯಿತು. ಸುಮಾರು 25,000 ಮೈಲಿ ಸೈಕ್ಲಿಂಗ್ ದಾಖಲೆಯಾಗಿದೆ. ಆರೋಗ್ಯಕರ ಜೀವನಶೈಲಿ, ನಿಯಮಿತ ವ್ಯಾಯಾಮ, ಶಿಸ್ತು ಹಾಗೂ ನಿರಂತರತೆಯ ಮಹತ್ವವನ್ನು ಸಾರಿದ ಈ ಅಭಿಯಾನವು ಹೊಸದಾಗಿ ಫಿಟ್ನೆಸ್ ಪ್ರಯಾಣ ಆರಂಭಿಸಲು ಬಯಸುವವರಿಗೆ ಪ್ರೇರಣೆಯಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.



ವೆಲೋಕೋಫಿ ಆಯೋಜಿಸಿದ್ದ '7 ಕಾಫಿ 100 ಮೈಲಿ' ಅಭಿಯಾನದಲ್ಲಿ ಭಾಗವಹಿಸಿದ್ದ ಸೈಕ್ಲಿಸ್ಟ್‌ಗಳು

'7 ಕಾಫಿ 100 ಮೈಲಿ' ಕೇವಲ ಸೈಕ್ಲಿಂಗ್ ಕಾರ್ಯಕ್ರಮವಲ್ಲ, ಇದು ಕಾಫಿ, ಆರೋಗ್ಯ ಮತ್ತು ಸಮುದಾಯವನ್ನು ಒಟ್ಟುಗೂಡಿಸಿದ ಬೆಂಗಳೂರಿನ ಸೈಕ್ಲಿಂಗ್ ಹಬ್ಬವಾಗಿ ರೂಪುಗೊಂಡಿದೆ ಎಂದು ಹೇಳಿದ್ದಾರೆ.

75 ಲಕ್ಷ ಮತದಾರರ ಕೈಬಿಟ್ಟ ಚುನಾವಣಾ ಆಯೋಗ: ಲಕ್ಷ್ಮಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎಸ್‌ಐಆರ್‌ಗೆ ಪೂರ್ವತಯಾರಿಯಾಗಿ ಮ್ಯಾಪಿಂಗ್ ಕಾರ್ಯ ಮುಗಿದಿದ್ದು, 75 ಲಕ್ಷ ಮತದಾರರನ್ನು ಈಗಾಗಲೇ ಕೈಬಿಡಲಾಗಿದೆ. ಕೈಬಿಟ್ಟಿರುವ ಮತದಾರರ ವಿವರ ನೀಡಿ ಎಂದು ಕೇಳಿದರೆ ಚುನಾವಣಾ ಆಯೋಗದ ಅಧಿಕಾರಿಗಳು ವಿವರ ನೀಡುತ್ತಿಲ್ಲ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಆರೋಪಿಸಿದರು.



ಎಂ. ಲಕ್ಷ್ಮಣ

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮ್ಯಾಪಿಂಗ್ ಕಾರ್ಯವನ್ನು ಯಾರಿಗೂ ಮಾಹಿತಿ ನೀಡದೇ ಸದ್ದಿಲ್ಲದೇ ಮುಗಿಸಿದ್ದಾರೆ. 2025ರಲ್ಲಿ ರಾಜ್ಯದಲ್ಲಿ 5.55 ಕೋಟಿ ಮತದಾರರಿದ್ದರು. ಮ್ಯಾಪಿಂಗ್, ಅಂದರೆ ಮ್ಯಾಚಿಂಗ್ ಆದವರ ಸಂಖ್ಯೆ 4.80 ಕೋಟಿ. ಪಶ್ಚಿಮ ಬಂಗಾಳದಲ್ಲಿ ಮ್ಯಾಪಿಂಗ್ ಸಮಯದಲ್ಲಿಯೇ ಎಚ್ಚೆತ್ತುಕೊಳ್ಳದೇ, ಎಸ್‌ಐಆರ್ ನಂತರ ಎಚ್ಚೆತ್ತುಕೊಂಡಿದ್ದರಿಂದ ಸಮಸ್ಯೆ ಆಗಿರುವುದನ್ನು ಮಮತಾ ಬ್ಯಾನರ್ಜಿಯವರೇ ಒಪ್ಪಿಕೊಂಡಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಇನ್ನೂ ಎಚ್ಚೆತ್ತುಕೊಂಡಿಲ್ಲ' ಎಂದು ತಮ್ಮ ಪಕ್ಷವನ್ನೇ ದೂರಿದರು.

ಮ್ಯಾಪಿಂಗ್ ಆಗದವರ ಮನೆಗೆ ಹೋಗುವಾಗ ಬಿಎಲ್‌ಒಗಳೊಂದಿಗೆ ರಾಜಕೀಯ ಪಕ್ಷಗಳ ಏಜೆಂಟರೂ (ಬಿಎಲ್‌ಎ) ಹೋಗಲು ಅವಕಾಶವಿದೆ. ರಾಜ್ಯದಲ್ಲಿ 60 ಸಾವಿರ ಬೂತ್‌ಗಳಿದ್ದು, 60 ಸಾವಿರ ಬಿಎಲ್‌ಎಗಳ ಹೆಸರನ್ನು ಕಳುಹಿಸಿದರೆ ಚುನಾವಣಾ ಆಯೋಗವು ಕೇವಲ 28 ಸಾವಿರ ಹೆಸರನ್ನು ಅನುಮೋದನೆ ಮಾಡಿ 32 ಸಾವಿರ ಹೆಸರನ್ನು ಕೈಬಿಟ್ಟಿದೆ. ಇದು ಕೂಡ ಅನುಮಾನಕ್ಕೆ ಕಾರಣವಾಗಿದೆ ಎಂದರು.

ವಿರೋಧ ಏಕೆ?: ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಬಿಡದಿ ಟೌನ್‌ಶಿಪ್‌ಗೆ ಅಧಿಸೂಚನೆ ಹೊರಡಿಸಲಾಗಿತ್ತು. ಈಗ ಕುಮಾರಸ್ವಾಮಿ, ಅವರ ಮಗ ನಿಖಿಲ್ ಕುಮಾರಸ್ವಾಮಿ ಯಾಕೆ ವಿರೋಧಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನೋಹರ್ ಉಪಸ್ಥಿತರಿದ್ದರು.

ವಾಯುಪಡೆ: ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ವಾಯುಪಡೆಯ ಪರೀಕ್ಷಾ ಪೈಲಟ್‌ಗಳ ಶಾಲೆಯಲ್ಲಿ (ಎಎಫ್‌ಟಿಪಿಎಸ್) 48 ವಾರಗಳ ಕಠಿಣ ಬಹು-ಶಿಸ್ತೀಯ ತರಬೇತಿ ಪೂರೈಸಿದ 48ನೇ ಫ್ಲೈಟ್ ಟೆಸ್ಟ್ ಕೋರ್ಸ್‌ನ 11 ಟೆಸ್ಟ್ ಪೈಲಟ್‌ಗಳು ಮತ್ತು 6 ಫ್ಲೈಟ್ ಟೆಸ್ಟ್ ಎಂಜಿನಿಯರ್‌ಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಈ ಪದವೀಧರರು ಭಾರತೀಯ ವಾಯುಪಡೆಯ ಪ್ರಮುಖ ಘಟಕಗಳಲ್ಲಿ ಒಂದಾದ ವಿಮಾನ ಮತ್ತು ವ್ಯವಸ್ಥೆಗಳ ಪರೀಕ್ಷಾ ಸ್ಥಾಪನೆಯ ವಾಯುಯಾನ ವಿಭಾಗವನ್ನು ಸೇರಲಿದ್ದಾರೆ.

ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಪ್ರಮಾಣಪತ್ರ ವಿತರಿಸಿದರು. ಉತ್ತಮ ಪ್ರದರ್ಶನ ನೀಡಿದವರಿಗೆ ಟ್ರೋಫಿ ಪ್ರದಾನ ಮಾಡಿದರು.

'ಸುರಂಜನ್ ದಾಸ್ ಟ್ರೋಫಿ'ಯನ್ನು ಸ್ಕ್ವಾಡ್ರನ್ ಲೀಡರ್ ಕೆ.ಕೆ. ಸಿಂಗ್, 'ಚೀಫ್ ಆಫ್ ದಿ ಏರ್ ಸ್ಟಾಫ್ ಟ್ರೋಫಿ'ಯನ್ನು ಸ್ಕ್ವಾಡ್ರನ್ ಲೀಡರ್ ಆದಿತ್ಯ ಜಮದಗ್ನಿ, 'ಮಹಾರಾಜ ಹನುಮಂತ್ ಸಿಂಗ್ ಸ್ವೋರ್ಡ್' ಟ್ರೋಫಿಯನ್ನು ಸಿಡಿಆರ್ ಅಭಿನವ್ ಕುಮಾರ್, 'ಡನ್‌ಲಪ್ ಟ್ರೋಫಿ'ಯನ್ನು ಸಿಡಿಆರ್ ಪ್ರಣವ್ ಶರ್ಮಾ ಅವರಿಗೆ, 'ಕಪಿಲ್ ಭಾರ್ಗವ ಟ್ರೋಫಿ'ಯನ್ನು ಸ್ಕ್ವಾಡ್ರನ್ ಲೀಡರ್ ಪರಾಸ್ ಶರ್ಮಾ ಅವರಿಗೆ ಪ್ರದಾನ ಮಾಡಲಾಯಿತು.

ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಮಾತನಾಡಿ, 'ಪದವಿ ಪಡೆದ ಅಧಿಕಾರಿಗಳು ಗಮನವಿಟ್ಟು ಶ್ರಮ ಹಾಕುವುದನ್ನು ಮುಂದುವರಿಸಬೇಕು' ಎಂದು ಸಲಹೆ ನೀಡಿದರು.


ಭಾರತೀಯ ಸಶಸ್ತ್ರ ಪಡೆಗಳ ಸಾಮರ್ಥ್ಯ ನಿರ್ಮಾಣ ಮತ್ತು ಆಧುನೀಕರಣದ ಕಡೆಗೆ ಗಮನ ಹರಿಸಬೇಕು. ಸ್ಥಿತಿ ಸ್ಥಾಪಕ ಸ್ಥಳೀಯ ರಕ್ಷಣಾ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು 'ಆತ್ಮನಿರ್ಭರ' ಕಾರ್ಯತಂತ್ರ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.



ವಾಯುಪಡೆಯ ಪರೀಕ್ಷಾ ಪೈಲಟ್‌ಗಳ ಶಾಲೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಟೆಸ್ಟ್ ಪೈಲಟ್‌ಗಳು ಮತ್ತು ಫ್ಲೈಟ್ ಟೆಸ್ಟ್ ಎಂಜಿನಿಯರ್‌ಗಳಿಗೆ ಟ್ರೋಫಿ ನೀಡಲಾಯಿತು

'ಪ್ರಧಾನ್ ರಾಜೀನಾಮೆ ನೀಡುವವರೆಗೂ ಕಾಂಗ್ರೆಸ್ ವಿಶ್ರಮಿಸದು'

ನವದೆಹಲಿ (ಪಿಟಿಐ): 'ನೀಟ್–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡುವವರೆಗೂ ಕಾಂಗ್ರೆಸ್ ವಿಶ್ರಮಿಸುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ತಿಳಿಸಿದ್ದಾರೆ.



ರಾಹುಲ್ ಗಾಂಧಿ

ಜತೆಗೆ ಪ್ರಶ್ನೆಪತ್ರಿಕೆ ಸೋರಿಕೆಯಂಥ ಘಟನೆಗಳು ಮರುಕಳಿಸದಂತೆ ತಡೆಗಟ್ಟಲು ಕಟ್ಟುನಿಟ್ಟಾದ ವ್ಯವಸ್ಥೆಯನ್ನು ರೂಪಿಸಬೇಕೆಂದೂ ಅವರು ಆಗ್ರಹಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ, ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ 'ಎನ್‌ಎಸ್‌ಯುಐ' ನೇತೃತ್ವದಲ್ಲಿ ಹೈದರಾಬಾದ್‌ನಲ್ಲಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

10 ನಾಯಿಮರಿ, 1 ಬೆಕ್ಕಿನ ಮರಿ ದತ್ತು

ಬೆಂಗಳೂರು: ದಕ್ಷಿಣ ನಗರ ಪಾಲಿಕೆ, ಜಯನಗರ ಕ್ಯಾನೈನ್ ಸ್ಕ್ವಾಡ್ ಮತ್ತು ಶಿವಶಕ್ತಿ ಅಭಿವೃದ್ಧಿ ಟ್ರಸ್ಟ್ ಆಯೋಜಿಸಿದ್ದ 'ಉಚಿತ ಶ್ವಾನ ದತ್ತು ಸ್ವೀಕಾರ ಮತ್ತು ಲಸಿಕಾ ಶಿಬಿರ'ದಲ್ಲಿ 10 ನಾಯಿಮರಿಗಳು ಮತ್ತು ಒಂದು ಬೆಕ್ಕಿನ ಮರಿ ಹೊಸ ಮನೆ ಕಂಡುಕೊಂಡವು.

ದತ್ತು ಪ್ರಕ್ರಿಯೆಯ ಜೊತೆಗೆ ಶ್ವಾನಗಳ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಹಮ್ಮಿಕೊಳ್ಳಲಾಗಿದ್ದ ಉಚಿತ ಲಸಿಕಾ ಕಾರ್ಯಕ್ರಮದಲ್ಲಿ 20 ಶ್ವಾನಗಳಿಗೆ ಕಂಬೈನ್ಡ್ ವ್ಯಾಕ್ಸಿನ್ ನೀಡಲಾಯಿತು. ರೇಬೀಸ್ ರೋಗ ನಿಯಂತ್ರಣಕ್ಕಾಗಿ 30 ಶ್ವಾನಗಳಿಗೆ ಆಂಟಿ-ರೇಬಿಸ್ ಲಸಿಕೆ ಹಾಕಲಾಯಿತು.

'ಬೀದಿ ಬದಿಯ ಮತ್ತು ಆಶ್ರಯ ರಹಿತ ಪ್ರಾಣಿಗಳಿಗೆ ಸುರಕ್ಷಿತ ಆಸರೆ ಕಲ್ಪಿಸುವುದು ಹಾಗೂ ಶ್ವಾನಗಳ ಆರೋಗ್ಯ ಕಾಪಾಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಮುಂದಿನ ದಿನಗಳಲ್ಲೂ ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದು ಪಾಲಿಕೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಶ್ರೀನಾಥ್ ತಿಳಿಸಿದರು.


ಅಂಕಿತ ಪುಸ್ತಕ ಹಮ್ಮಿಕೊಂಡಿದ್ದ ಸಂವಾದದಲ್ಲಿ ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಅಭಿಮತ

'ವನ್ಯಜೀವಿ ಸಂರಕ್ಷಣೆ ಫ್ಯಾಷನ್ ಆಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಫ್ಯಾಷನ್ ಆಗಿದೆ. ಸಂರಕ್ಷಣಾ ಕಾರ್ಯದಲ್ಲಿ ತೊಡಗುವವರು ಮೊದಲು ನಮ್ಮ ರಾಜ್ಯದ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕು' ಎಂದು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಅಭಿಪ್ರಾಯಪಟ್ಟರು.

ಅಂಕಿತ ಪುಸ್ತಕ ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ 'ಕಾಡಿನ ಗೆಳೆಯರ ಕಾಡುವ ಕಥೆಗಳು' ಹಾಗೂ 'ಕಾಡಿನೊಳಗೊಂದು ಮನೆಯ ಮಾಡಿ' ಪುಸ್ತಕ ಜನಾರ್ಪಣೆಯಾಯಿತು. ಬಳಿಕ ನಡೆದ ಸಂವಾದದಲ್ಲಿ ಮಾತನಾಡಿದ ಅವರು, 'ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿಕೊಳ್ಳುವವರು ಇಲ್ಲಿನ ಜನ, ಭಾಷೆ, ಸಂಸ್ಕೃತಿ ಎಲ್ಲವನ್ನೂ ಅರಿತುಕೊಳ್ಳಬೇಕು. ಗೂಳಿಯಂತೆ ಧೈರ್ಯದಿಂದ ಮುನ್ನುಗ್ಗಬೇಕು' ಎಂದರು.



ಸಂವಾದದಲ್ಲಿ ಸಂಜಯ್ ಗುಬ್ಬಿ ಮಾತನಾಡಿದರು. ನಾಗೇಶ ಹೆಗಡೆ ಮತ್ತು ಕಟ್ಟೆ ಗುರುರಾಜ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮೇಕೆದಾಟು ಯೋಜನೆ ಬಗ್ಗೆ ಪ್ರೇಕ್ಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, 'ಮೇಕೆದಾಟು ಯೋಜನೆ ಪರಿಸರದ ಜತೆಗೆ ಬೆಂಗಳೂರಿಗೂ ಮಾರಕ. ಈ ಯೋಜನೆ ಜಾರಿ ಮಾಡಿದರೆ ಐದು ಸಾವಿರ ಎಕರೆ ಕಾಡು ಮುಳುಗುತ್ತದೆ. 15 ಲಕ್ಷದಷ್ಟು ಮರಗಳು ನಾಶವಾಗುತ್ತವೆ. ಆದ್ದರಿಂದ ಮೇಕೆದಾಟು ಅಣೆಕಟ್ಟೆ ನಿರ್ಮಿಸಲು ಜಾಗ ಬದಲಾಯಿಸಬೇಕು. ಇದಕ್ಕೆ ಶಿವನಸಮುದ್ರ ಉತ್ತಮ ಜಾಗ' ಎಂದರು.

'ಬೆಂಗಳೂರಿನಲ್ಲಿ ನಾಲ್ಕು ವಿದೇಶಿ ಜಾತಿಯ ಮರಗಳನ್ನು ಕಡಿದರೆ ಹತ್ತಾರು ಜನ ಬೀದಿಗಿಳಿದು ಮಾನವ ಸರಪಳಿ ನಿರ್ಮಿಸುತ್ತಾರೆ. ಆದರೆ, ಮೇಕೆದಾಟು ಯೋಜನೆಯಡಿ 15 ಲಕ್ಷದಷ್ಟು ಮರಗಳು ನಾಶವಾಗುವುದನ್ನು ಖಂಡಿಸಿ ಯಾರೂ ಮಾನವ ಸರಪಳಿ ನಿರ್ಮಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ಪುಸ್ತಕ ಜನಾರ್ಪಣೆ ಮಾಡಿ ಮಾತನಾಡಿದ ವಿಜ್ಞಾನ ಬರಹಗಾರ ನಾಗೇಶ ಹೆಗಡೆ, 'ಕಾಡಿಗೆ ಮನುಷ್ಯರು ಹೋದರೆ ಅಲ್ಲಿನ ಪ್ರಾಣಿ–ಪಕ್ಷಿಗಳಿಗೆ ಯಾವೆಲ್ಲ ಸಂಕಟಗಳು ಎದುರಾಗುತ್ತವೆ ಎನ್ನುವುದನ್ನು ಪುಸ್ತಕದಲ್ಲಿ ಬರೆಯಲಾಗಿದೆ' ಎಂದು ಹೇಳಿದರು.

ಪತ್ರಕರ್ತ ಕಟ್ಟೆ ಗುರುರಾಜ್ ಸಂವಹನ ನಡೆಸಿದರು. ಇದಕ್ಕೂ ಮೊದಲು ಸುಮನ ಚಂದ್ರಶೇಖರ್ ಮತ್ತು ಹಂಸನಾದ ತಂಡದಿಂದ ಲಘು ಸಂಗೀತ ಕಾರ್ಯಕ್ರಮ ನಡೆಯಿತು.

'ಅನುಮತಿ ಪಡೆಯದೆ ಕ್ರೀಡಾಂಗಣ'

'ಕಾನೂನಿನ ಪ್ರಕಾರ ಅನುಮತಿ ಪಡೆಯದೆ ಕಾಡಿನ ಸಮೀಪ ಅಂತರ-ರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗಿದೆ. ಸರ್ಕಾರದಿಂದಲೇ ಕಾನೂನು ಉಲ್ಲಂಘನೆ ಸರಿಯಲ್ಲ' ಎಂದು ಸಂಜಯ್ ಗುಬ್ಬಿ ಆಕ್ಷೇಪ ವ್ಯಕ್ತಪಡಿಸಿದರು.

'ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಿಂದ ಒಂದು ಕಿ.ಮೀ. ದೂರದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲಾಗುತ್ತಿದೆ. ಈ ಕ್ರೀಡಾಂಗಣ ನಿರ್ಮಾಣಕ್ಕೆ ಪರಿಸರ ಇಲಾಖೆ ಅನುಮತಿಯನ್ನು ಸರ್ಕಾರ ಪಡೆದಿಲ್ಲ. ಈ ರೀತಿ ಕ್ರೀಡಾಂಗಣವನ್ನು ಕಾಡಿನ ಸಮೀಪ ಮಾಡದೆ, ದೂರದ ಪ್ರದೇಶದಲ್ಲಿ ನಿರ್ಮಿಸಬೇಕು' ಎಂದು ಅಭಿಪ್ರಾಯಪಟ್ಟರು.

ಪತ್ನಿ ಆತ್ಮಹತ್ಯೆ: ಕಾನ್‌ಸ್ಟೆಬಲ್ ವಶಕ್ಕೆ

ಸಾವಿಗೆ ವರದಕ್ಷಿಣೆ ಕಿರುಕುಳವೇ ಕಾರಣ ಎಂದು ಆರೋಪಿಸಿದ ಪೋಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ಪತ್ನಿ ಆತ್ಮಹತ್ಯೆ ಪ್ರಕರಣ ಸಂಬಂಧ ಪತಿ, ಕಾನ್‌ಸ್ಟೆಬಲ್ ರಾಜೇಶ್ ಆರಾಧ್ಯ ಅವರನ್ನು ಕೆ.ಆರ್.ಪುರ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪುತ್ರಿಯ ಆತ್ಮಹತ್ಯೆಗೆ ಅಳಿಯ ರಾಜೇಶ್ ಆರಾಧ್ಯ ಹಾಗೂ ಅವರ ಕುಟುಂಬಸ್ಥರ ದೈಹಿಕ, ಮಾನಸಿಕ ಹಾಗೂ ವರದಕ್ಷಿಣೆ ಕಿರುಕುಳವೇ ಕಾರಣ ಎಂದು ಲಕ್ಷ್ಮೀಪ್ರಿಯಾ ಪೋಷಕರು ಆರೋಪಿಸಿ ಕೆ.ಆರ್.ಪುರ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಎಚ್‌ಎಎಲ್ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ರಾಜೇಶ್ ಹಾಗೂ ಅವರ ಪೋಷಕರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಅಪರಾಧ ಸುದ್ದಿ

ಮಳವಳ್ಳಿಯ ಲಕ್ಷ್ಮೀಪ್ರಿಯಾ ಹಾಗೂ ಮೈಸೂರಿನ ರಾಜೇಶ್ 2023ರಲ್ಲಿ ವಿವಾಹವಾಗಿದ್ದರು. ದಂಪತಿಗೆ 8 ತಿಂಗಳ ಮಗುವಿದೆ. ಕೆ.ಆರ್.ಪುರ ಪೊಲೀಸ್ ವಸತಿ ಸಮುಚ್ಚಯದಲ್ಲಿ ದಂಪತಿ ನೆಲಸಿದ್ದರು. ಲಕ್ಷ್ಮೀಪ್ರಿಯಾ ಶುಕ್ರವಾರ ಮಧ್ಯಾಹ್ನ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೂ ಮುನ್ನ ತನ್ನ ಸಹೋದರನಿಗೆ ಮೊಬೈಲ್‌ನ ಪಾಸ್‌ವರ್ಡ್ ಅನ್ನು ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿದ್ದರು.

‘ದಂಪತಿ ನಡುವೆ ಸಣ್ಣ ವಿಚಾರಗಳಿಗೆ ಆಗಾಗ್ಗೆ ಜಗಳ ನಡೆಯುತ್ತಿತ್ತು ಎಂಬುದು ಗೊತ್ತಾಗಿದೆ. ಮೊಬೈಲ್ ಜಪ್ತಿ ಮಾಡಲಾಗಿದ್ದು, ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಉಬರ್ ಚಾಲಕನ ಮೇಲೆ ಹಲ್ಲೆ

ನಗರದ ಡಬಲ್ ರಸ್ತೆಯಲ್ಲಿ ಮಧ್ಯರಾತ್ರಿ ಕಾರಿನಲ್ಲಿ ಬಂದ ಗುಂಪೊಂದು ಉಬರ್ ಕ್ಯಾಬ್ ಚಾಲಕರೊಬ್ಬರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದೆ.

ಕೃತ್ಯವೆಸಗಿದ ದೃಶ್ಯವು ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಉಬರ್ ಚಾಲಕ ರಸ್ತೆ ಬದಿ ಕಾರು ನಿಲ್ಲಿಸಿಕೊಂಡಿದ್ದ ವೇಳೆ, ಮತ್ತೊಂದು ಕಾರು ಮತ್ತು ಸ್ಕೂಟರ್‌ನಲ್ಲಿ ಬಂದ ಏಳೆಂಟು ಜನರು, ಚಾಲಕನನ್ನು ಕಾರಿನಿಂದ ಹೊರಗೆ ಎಳೆದು ಹಲ್ಲೆ ನಡೆಸಿದ್ದಾರೆ.

ಮತ್ತೊಂದು ಬದಿ ಮಹಿಳೆಯೊಬ್ಬರು ಕುಳಿತಿದ್ದರು. ವ್ಯಕ್ತಿಯೊಬ್ಬರು ಕಾರಿನ ಬಾಗಿಲು ತೆರೆದು ಹಲ್ಲೆ ನಡೆಸಿದ್ದಾರೆ. ಚಾಲಕ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಬಿಡದೆ ಹಲ್ಲೆ ನಡೆಸಿದ್ದಾರೆ. ಈ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಘಟನೆ ಸಂಬಂಧ ದೂರು ದಾಖಲಾಗಿಲ್ಲ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಕೆ.ಎಚ್.ರಸ್ತೆ ಮತ್ತು ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸುತ್ತಿದ್ದಾರೆ. ಆರೋಪಿಗಳ ವಾಹನ ಮತ್ತು ಸಂತ್ರಸ್ತರ ವಾಹನದ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ನಡೆಸುತ್ತಿದ್ದಾರೆ.

ಲೈಂಗಿಕ ದೌರ್ಜನ್ಯ: ಮುಖ್ಯ ಶಿಕ್ಷಕ ಬಂಧನ

ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರನ್ನು ಶ್ರೀರಾಂಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಲಕಿ ಒಂದೂವರೆ ತಿಂಗಳು ಗರ್ಭಿಣಿ ಆಗಿರುವುದು ಪತ್ತೆಯಾದ ನಂತರ ಈ ವಿಚಾರ ಗೊತ್ತಾಗಿದೆ. ಆರೋಪಿಯು ವರ್ಷದಿಂದ ಬಾಲಕಿಗೆ ಕಿರುಕುಳ ನೀಡುತ್ತಿದ್ದ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ದೂರು ಆಧರಿಸಿ ಪೊಲೀಸರು, ಮುಖ್ಯ ಶಿಕ್ಷಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ ಬಾಲಕಿಗೆ ಆಶ್ರಯ ಕಲ್ಪಿಸಲಾಗಿದೆ.


ಪಿಯುಸಿ ಫೇಲಾಗಿದ್ದ ಮೃತ ವಿದ್ಯಾರ್ಥಿನಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದಲ್ಲಿ ಶನಿವಾರ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ ಭಾಗ್ಯಶ್ರೀ ಪಾಟೀಲ ದ್ವಿತೀಯ ಪಿಯುಸಿ ಪರೀಕ್ಷೆ-2ರಲ್ಲೂ ಫೇಲಾಗಿದ್ದ ಸಂಗತಿ ಬಹಿರಂಗವಾಗಿದೆ.

ಭಾಗ್ಯಶ್ರೀ ಮೇ 23ರಂದು ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರು ಇತ್ತೀಚೆಗೆ ನಡೆದ ನೀಟ್ ಪರೀಕ್ಷೆ ಬರೆದಿದ್ದರು. ಆ ಪರೀಕ್ಷೆ ರದ್ದಾಗಿದ್ದರಿಂದ ಮನನೊಂದಿದ್ದರು ಎಂಬ ವದಂತಿ ಹರಿದಾಡಿತ್ತು. ಆತ್ಮಹತ್ಯೆಯ ಕಾರಣ ಬೆನ್ನತ್ತಿದ ಪೊಲೀಸರಿಗೆ ಅಚ್ಚರಿ ಕಾದಿತ್ತು.


‘ಅಸಲಿಗೆ ಭಾಗ್ಯಶ್ರೀ ಪಿಯುಸಿ ಪಾಸೇ ಆಗಿರಲಿಲ್ಲ. ಆದರೆ, ತಾನು ಶೇ 92 ಅಂಕ ಪಡೆದಿರುವುದಾಗಿ ಹೇಳಿ ಬಡಾವಣೆ ಜನರಿಗೆ ಸಿಹಿ ಕೂಡ ಹಂಚಿದ್ದರು. ಪಿಯುಸಿ ಪರೀಕ್ಷೆ-2ರಲ್ಲಿ ಪಾಸ್ ಆಗುವ ಅಚಲ ವಿಶ್ವಾಸದಲ್ಲಿದ್ದರು. ಆದರೆ, ಅದರಲ್ಲೂ ಅನುತ್ತೀರ್ಣರಾಗಿದ್ದರು’ ಎಂದು ಮೂಲಗಳು ಹೇಳಿವೆ.


ಭಾಗ್ಯಶ್ರೀ ಪಾಟೀಲ

ಮೊದಲ ಪ್ರಯತ್ನದಲ್ಲಿ 369 ಅಂಕ ಪಡೆದಿದ್ದ ಭಾಗ್ಯಶ್ರೀ ಅವರಿಗೆ ಪರೀಕ್ಷೆ-2ರಲ್ಲಿ ಬರೀ 365 ಅಂಕ ಬಂದಿದ್ದವು. ಗಣಿತ ಪರೀಕ್ಷೆಯಲ್ಲಿ 20 ಆಂತರಿಕ ಅಂಕ ಸೇರಿದಂತೆ ಒಟ್ಟು 24 ಮಾತ್ರ ಅಂಕಗಳಿಸಿದ್ದರು ಎಂಬುದು ತಿಳಿದುಬಂದಿದೆ.

ಈಜುವಾಗಲೇ ಕೊನೆಯುಸಿರೆಳೆದ ಶಿಕ್ಷಕ

ಹುಕ್ಕೇರಿ: ಯರನಾಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ದಿಲೀಪ ಅಪ್ಪಾಸಾಹೇಬ ಬಿರಾದಾರ (55) ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರು.


ದಿಲೀಪ ಬಿರಾದಾರ

ಭಾನುವಾರ ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆದ ಸರ್ಕಾರಿ ನೌಕರರ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ವೇಳೆ ಹೃದಯಾಘಾತವಾಗಿದೆ. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ವಿಮಾನ ನಿಲ್ದಾಣದಲ್ಲಿ ಕಳೆದುಹೋದ ಮೊಬೈಲ್ 15 ನಿಮಿಷದಲ್ಲೇ ಪತ್ತೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಕಳೆದು ಹೋದ ಮೊಬೈಲ್ ಫೋನ್ ಒಂದನ್ನು ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿ ಕೇವಲ 15 ನಿಮಿಷದಲ್ಲೇ ಪತ್ತೆಹಚ್ಚಿ ಹಿಂತಿರುಗಿಸಿದ್ದಾರೆ.

ಮೊಬೈಲ್ ಕಳೆದುಕೊಂಡ ಭಾವನಾ ಅರೋರಾ ಎಂಬ ಲೇಖಕಿ ‘ಎಕ್ಸ್’ನಲ್ಲಿ ತಮ್ಮ ಅನುಭವ ಹಂಚಿಕೊಂಡಿದ್ದರು. ಬಳಿಕ ಕರ್ತವ್ಯದಲ್ಲಿದ್ದ ಸಿಐಎಸ್‌ಎಫ್ ಸಿಬ್ಬಂದಿಯನ್ನು ಸಂಪರ್ಕಿಸಿದಾಗ, ಅವರು ತಕ್ಷಣ ಕ್ರಮಕೈಗೊಂಡು ಕೇವಲ 15 ನಿಮಿಷದಲ್ಲೇ ಮೊಬೈಲ್ ಪತ್ತೆಹಚ್ಚಿದ್ದಾರೆ.

‘ನಾನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಫೋನ್ ಕಳೆದುಕೊಂಡು ಗಾಬರಿಯಾಗಿದ್ದೆ. ಬಳಿಕ ಸಿಐಎಸ್‌ಎಫ್ ಸಿಬ್ಬಂದಿಯನ್ನು ಸಂಪರ್ಕಿಸಿದೆ. ಅವರ ಕಾರ್ಯಕ್ಷಮತೆ ಅದ್ಭುತ. 15 ನಿಮಿಷಗಳಲ್ಲೇ ನನ್ನ ಫೋನ್ ಮತ್ತೆನನ್ನ ಕೈ ಸೇರಿತು’ ಎಂದು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

‘ಪರ್ವತಗಳ ಸಂರಕ್ಷಣೆಗೆ ಕಾನೂನು ಅಗತ್ಯ’

ಬೆಂಗಳೂರು: ‘ಅಪಾರ ನೈಸರ್ಗಿಕ ಸಂಪತ್ತು ಹೊಂದಿರುವ ಪರ್ವತಗಳ ಸಂರಕ್ಷಣೆಗೆ ಪ್ರತ್ಯೇಕ ಕಾನೂನು ಅಗತ್ಯ’ ಎಂದು ತರುಣ್ ಭಾರತ್ ಸಂಘದ ಅಧ್ಯಕ್ಷ ರಾಜೇಂದ್ರ ಸಿಂಗ್ ಆಗ್ರಹಿಸಿದರು.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅರಾವಳಿ ಪರ್ವತ ಶ್ರೇಣಿಯಲ್ಲಿನ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸಲಾಗುತ್ತಿದೆ. ಪಶ್ಚಿಮಘಟ್ಟದ ವಿಚಾರದಲ್ಲಿಯೂ ಮುಂದೆ ಕಾನೂನುಬಾಹಿರ ಚಟುವಟಿಕೆಗಳು ನಡೆಯುವ ಸಾಧ್ಯತೆ ಇರುವುದರಿಂದ ಈ ಹೋರಾಟ ಮುಖ್ಯ’ ಎಂದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ, ‘ಪರ್ವತಗಳು ನಾಶವಾದರೆ ನದಿಗಳ ಉಗಮ ಮತ್ತು ಅಸ್ತಿತ್ವವೇ ಕಣ್ಮರೆಯಾಗುತ್ತದೆ. ಯುವಜನರು ಈ ಬಗ್ಗೆ ಜಾಗೃತರಾಗಿ, ಸಮಾಜಕ್ಕೆ ಜಾಗೃತಿ ಮೂಡಿಸಬೇಕು’ ಎಂದರು.


ಜಲ ಬಿರಾದರಿ ಸಂಸ್ಥೆಯ ರಾಷ್ಟ್ರೀಯ ಸಂಯೋಜಕ ಬೋಲಿಸೆಟ್ಟಿ ಸತ್ಯನಾರಾಯಣ ಮಾತನಾಡಿದರು.

ನಿವೃತ್ತ ಶಿಕ್ಷಕಿಗೆ ₹24 ಕೋಟಿ ವಂಚನೆ

ಒಂದನೇ ಪುಟದಿಂದ...

ತಿಂಗಳುಗಟ್ಟಲೆ ಮಾನಸಿಕ ಒತ್ತಡ ಹಾಕಿರುವ ಸೈಬರ್ ವಂಚಕರು ದೇಶದ ಹತ್ತು ಬ್ಯಾಂಕ್‌ಗಳಲ್ಲಿರುವ 23 ನಕಲಿ ಖಾತೆಗಳಿಗೆ ಫೆಬ್ರುವರಿ 10ರಿಂದ ಏಪ್ರಿಲ್ 24ರವರೆಗಿನ ಅವಧಿಯಲ್ಲಿ, ಸಂತ್ರಸ್ತೆಯ ಐಸಿಐಸಿಐ ಬ್ಯಾಂಕ್ ಖಾತೆಯಿಂದ ₹24 ಕೋಟಿ ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾರೆ.


ನಂತರ ಮತ್ತಷ್ಟು ಹಣಕ್ಕಾಗಿ ಒತ್ತಡ ಹೇರಿದ ವಂಚಕರು, ಚಿನ್ನಾಭರಣ ಅಡಮಾನ ಇಡುವಂತೆ ಸೂಚನೆ ನೀಡಿದ್ದಾರೆ. ವಂಚಕರ ಸೂಚನೆಯಂತೆ ಮನೆಯಲ್ಲಿದ್ದ 1 ಕೆ.ಜಿ. 300 ಗ್ರಾಂ


ಎನ್.ಶಿವಜ್ಞಾನಂ


ಅಕ್ಬಟ್ ಮಲ್ಲಿಕ್


ಪಲಕ್ ಭಾಯಿ ಪಟೇಲ್


ಅಮಿತ್ ನರೇಂದ್ರ ಪಟೇಲ್


ಓಂ ಪ್ರಕಾಶ್ ರಜಪುತ್


ಗೌರವ್ ಕುಮಾರ್

ಚಿನ್ನವನ್ನು ಅಡಮಾನ ಇಡಲು ನಗರದ ಐಸಿಐಸಿಐ ಬ್ಯಾಂಕ್ ಶಾಖೆಗೆ ವೃದ್ಧೆ ತೆರಳಿದ್ದಾರೆ. ಆದರೆ, ಬ್ಯಾಂಕ್ ಸಿಬ್ಬಂದಿ ಅಷ್ಟೊಂದು ಪ್ರಮಾಣದ ಚಿನ್ನಾಭರಣ ಗಮನಿಸಿ, ತಕ್ಷಣ ಸಿಸಿಬಿ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ಬ್ಯಾಂಕ್‌ಗೆ ಧಾವಿಸಿದ ಪೊಲೀಸರು, ಲಕ್ಷ್ಮೀ ಅವರನ್ನು ಪ್ರಶ್ನಿಸಿದಾಗ ‘ಡಿಜಿಟಲ್ ಅರೆಸ್ಟ್’ ವಿಚಾರ ಗೊತ್ತಾಗಿದೆ. ದೂರು ದಾಖಲಿಸಿಕೊಂಡ ಪೊಲೀಸರು, ವಿದೇಶದಲ್ಲಿರುವ ಅವರ ಮಕ್ಕಳಿಗೆ ವಿಷಯ ಮುಟ್ಟಿಸಿದರು. ಈ ಮೂಲಕ ₹3 ಕೋಟಿ ವಂಚಕರ ಖಾತೆಗೆ ವರ್ಗಾವಣೆ ಆಗುವುದನ್ನು ತಡೆದಿದ್ದಾರೆ.

ತಕ್ಷಣ ಪೊಲೀಸರು ಆರ್‌ಟಿಜಿಎಸ್ ಮೂಲಕ ಹಣ ವರ್ಗಾವಣೆ ಮಾಡಿರುವ ಖಾತೆಗಳನ್ನು ಫ್ರೀಜ್ ಮಾಡಿದ್ದಾರೆ. ಬ್ಯಾಂಕ್ ಸಿಬ್ಬಂದಿ ಸಮಯಪ್ರಜ್ಞೆಯಿಂದಾಗಿ ವೃದ್ಧೆ ಮತ್ತಷ್ಟು ಹಣ ಕಳೆದುಕೊಳ್ಳುವುದು ತಪ್ಪಿದೆ.

ನೀಟ್: ಆರೋಪಿ ಶುಭಂ ಜೂನ್ 6ರವರೆಗೆ ನ್ಯಾಯಾಂಗ ವಶಕ್ಕೆ

ನವದೆಹಲಿ: ‘ನೀಟ್–ಯುಜಿ’ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ ಆರೋಪಿ ಶುಭಂ ಖೈರ್‌ನಾರ್‌ನನ್ನು ದೆಹಲಿ ನ್ಯಾಯಾಲಯ ಭಾನುವಾರ ಜೂನ್ 6ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದೆ.

ಸಂಘಟಿತ ತಂಡವೊಂದು ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡಿದ್ದು, ಅದರಲ್ಲಿ ಆರೋಪಿ ಶುಭಂ ಕೈವಾಡವೂ ಇದೆ ಎನ್ನುವ ಆರೋಪಕ್ಕಾಗಿ ಬಂಧಿಸಲಾಗಿತ್ತು. ಸಿಬಿಐ ವಶದಲ್ಲಿರುವ ಅವಧಿ ಪೂರ್ಣಗೊಂಡಿರುವ ಕಾರಣ ಆರೋಪಿಯನ್ನು ನ್ಯಾಯಾಂಗ ವಶಕ್ಕೆ ನೀಡಬೇಕೆಂದು ಕೋರಿ ಸಿಬಿಐ ಮನವಿ ಮಾಡಿತ್ತು.

ವಿಶೇಷ ನ್ಯಾಯಾಧೀಶರಾದ ರುಚಿ ಅಗರ್ವಾಲ್ ಅವರು ಸಿಬಿಐ ಮನವಿ ಪುರಸ್ಕರಿಸಿ, ಆರೋಪಿಯನ್ನು ಜೂನ್6ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿರುವ ಇತರೆ ಐವರು ಆರೋಪಿಗಳ ಸಿಬಿಐ ವಶದ ಅವಧಿಯೂ ಸೋಮವಾರ ಮುಕ್ತಾಯಗೊಳ್ಳಲಿದ್ದು, ಅವರನ್ನೂ ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸುವ ನಿರೀಕ್ಷೆ ಇದೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



‘ಸುರಂಗ ಮಾರ್ಗವನ್ನು ಸ್ವಚ್ಛಗೊಳಿಸಿ’

ಹೊಸಕೆರೆಹಳ್ಳಿ ಮತ್ತು ರಾಜರಾಜೇಶ್ವರಿನಗರಕ್ಕೆ ಸಂಪರ್ಕ ಕಲ್ಪಿಸುವ ಮೂರು ದ್ವಾರಗಳ ಮೇಲ್ಸೇತುವೆಯನ್ನು ನಿರ್ಮಿಸಲಾಗಿದೆ. ಇದರ ಅಡಿಯಲ್ಲಿ ವಾಹನಗಳ ಸಂಚಾರಕ್ಕೆ ಮೂರು ಮಾರ್ಗಗಳಿವೆ. ಆದರೆ ಮಧ್ಯದ ಮಾರ್ಗದಲ್ಲಿ ಮಾತ್ರ ವಾಹನಗಳು ಸಂಚರಿಸುತ್ತಿವೆ. ಉಳಿದ ಎರಡು ಮಾರ್ಗಗಳಲ್ಲಿ ಕಸದ ರಾಶಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಮಾರ್ಗಗಳಲ್ಲಿ ಬಿದ್ದಿರುವ ಕಸದ ರಾಶಿಯನ್ನು ವಿಲೇವಾರಿ ಮಾಡಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ


ವಿಮಾನ ನಿಲ್ದಾಣದ ಆವರಣದಲ್ಲಿ ನಿಯಂತ್ರಣ ತಪ್ಪಿ ಪಲ್ಟಿಯಾದ ಕಾರು

ವಿಮಾನ ನಿಲ್ದಾಣ ಆವರಣದಲ್ಲಿ ಕಾರು ಪಲ್ಟಿ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಶನಿವಾರ ಮುಂಜಾನೆ ಕಾರೊಂದು ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಘಟನೆಯಲ್ಲಿ ಕಾರಿನಲ್ಲಿದ್ದ ಚಾಲಕ ಹಾಗೂ ಒಬ್ಬ ಪ್ರಯಾಣಿಕ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪ್ರಯಾಣಿಕನನ್ನು ವಿಮಾನ ನಿಲ್ದಾಣಕ್ಕೆ ಬಿಡಲು ತೆರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಭದ್ರತಾ ತಪಾಸಣೆ ಕೇಂದ್ರದ ಮುಂಭಾಗ ಕಾರು ಅತಿವೇಗದಿಂದ ಹೋಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಿಂದ ಪಲ್ಟಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತದ ಪರಿಣಾಮ ಕೆಲಕಾಲ ವಾಹನ ಸಂಚಾರದಲ್ಲಿ ಅಸ್ತವ್ಯಸ್ತ ಉಂಟಾಯಿತು. ಬಳಿಕ ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ಕಾರನ್ನು ತೆರವುಗೊಳಿಸಿ ವಾಹನ ದಟ್ಟಣೆ ನಿವಾರಿಸಿದರು.



‘ರಸ್ತೆ ಗುಂಡಿ ಮುಚ್ಚಿ’

ಬಸವನಗುಡಿಯ ಪುಟ್ಟಣ್ಣ ಅಡ್ಡ ರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಆಗುತ್ತಿವೆ. ಮಳೆ ಬಂದ ಸಂದರ್ಭದಲ್ಲಿ ರಸ್ತೆ ಯಾವುದು, ಗುಂಡಿ ಯಾವುದು ಎಂಬುದೇ ಗೊತ್ತಾಗುವುದಿಲ್ಲ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಈ ರಸ್ತೆಯನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಮೋಹನ್ ಕೆ., ಬಸವನಗುಡಿ

‘ರಸ್ತೆ ಡಾಂಬರೀಕರಣ ಮಾಡಿ’

ಸದಾನಂದನಗರದ ವಾರ್ಡ್ ಸಂಖ್ಯೆ 50ರ ಎಂಟನೇ ಮುಖ್ಯರಸ್ತೆಯ ಮೂರನೇ ಅಡ್ಡರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿದೆ. ಈ ರಸ್ತೆಗೆ ಡಾಂಬರೀಕರಣ ಮಾಡಲು ಜಲ್ಲಿಕಲ್ಲುಗಳನ್ನು ಹಾಕಿ ನಾಲ್ಕು ತಿಂಗಳಿಂದ ಹಾಗೆಯೇ ಬಿಡಲಾಗಿದೆ. ಇದರಿಂದ ಸ್ಥಳೀಯ ನಿವಾಸಿಗಳ ಓಡಾಟ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ಈ ಬಗ್ಗೆ ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ಕೂಡಲೇ ಈ ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಸಿದ್ದುವಾಲಿ, ಸದಾನಂದ ನಗರ



‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’

ಹಂಪಿನಗರದ ಸರ್ವಿಸ್ ರಸ್ತೆಯ ಡೆಕ್ಕನ್ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಮುಂಭಾಗದ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕುಸಿದಿವೆ. ಇದರಿಂದ ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಮುಖ್ಯ ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಪಾದಚಾರಿ ಮಾರ್ಗದ ದುರಸ್ತಿ ಮಾಡಲು ಕ್ರಮ ಕೈಗೊಳ್ಳಬೇಕು.

ಹಂಪಿನಗರದ ನಿವಾಸಿಗಳು





‘ಕಸದ ರಾಶಿ ತೆರವುಗೊಳಿಸಿ’

ಪಣತ್ತೂರಿನ ಟ್ರೆಂಡ್ಸ್ ಸ್ಕ್ವೇರ್‌ನ ಮುಂಭಾಗದ ವರ್ತೂರು ಗುಂಜೂರು 100 ಅಡಿ ರಸ್ತೆಯ ಬದಿಯಲ್ಲಿ ಕಸದ ರಾಶಿ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಹಾಕಿರುವ ಕಸವನ್ನು ಪಾಲಿಕೆ ಸಿಬ್ಬಂದಿ ವಿಲೇವಾರಿ ಮಾಡದ ಕಾರಣ ಕಸ ಕೊಳೆತು ನಾರುತ್ತಿದೆ. ಇಲ್ಲಿರುವ ಕಸದ ರಾಶಿಯನ್ನು ಕೂಡಲೇ ವಿಲೇವಾರಿ ಮಾಡಬೇಕು.

ಪಣತ್ತೂರಿನ ನಿವಾಸಿಗಳು

ಓದಿ ಓದಿ ಸುಸ್ತಾಗಿದೆಯಂತೆ!



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

- **ನಮ್ಮ ಮಗ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ 85ರಷ್ಟು ಅಂಕ ಗಳಿಸಿದ್ದಾನೆ. ಅವನಿಗೆ ಓದಿ ಓದಿ ಸುಸ್ತಾಗಿದೆಯಂತೆ. ಮುಂದೆ ಒಂದು ವರ್ಷ ವಿರಾಮ ತೆಗೆದುಕೊಳ್ಳುತ್ತಾನಂತೆ ಅಥವಾ ಮುಂದೆ ಓದುವುದೇ ಇಲ್ಲವಂತೆ. ಈ ವರ್ಷವಿಡೀ ಅಲ್ಲಿಲ್ಲಿ ಸುತ್ತಾಡಿಕೊಂಡು ಇರುತ್ತಾನಂತೆ. ಮುಂದಿನ ವರ್ಷ ಯಾವುದಾದರೂ ವ್ಯಾಪಾರ ಮಾಡಲು ಸಹಾಯ ಮಾಡಬೇಕಂತೆ. ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಅವನು ಇಷ್ಟೊಂದು ಬೇಜವಾಬ್ದಾರಿಯಿಂದ ಇರಬಹುದೇ? ಅವನನ್ನು ಹೇಗೆ ಸರಿದಾರಿಗೆ ತರುವುದು?**

ನೇತ್ರಾ ಅರವಿಂದ ಜಾಧವ್, ಹಳಿಯಾಳ

ನಿಮ್ಮ ಮಗ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ 85ರಷ್ಟು ಅಂಕ ಪಡೆದಿರುವುದು ದೊಡ್ಡ ಸಾಧನೆ. ಆದರೆ ಈಗ ಅವನು 'ಓದಿ ಸುಸ್ತಾಗಿದೆ' ಎಂದು ಹೇಳುವುದು, ತಕ್ಷಣ ಮುಂದಿನ ದಾರಿಯ ಬಗ್ಗೆ ಗೊಂದಲದಲ್ಲಿರುವುದು– ಇವು ಇಂದಿನ ಅನೇಕ ಹದಿಹರೆಯದವರಲ್ಲಿ ಕಾಣುವ ಸಾಮಾನ್ಯ ಮನಃಸ್ಥಿತಿ. ಇದನ್ನು ಸ್ವಲ್ಪ ಆಳವಾಗಿ ಅರ್ಥಮಾಡಿಕೊಳ್ಳುವುದು ಮುಖ್ಯ.

ಮುಂದೆ ಯಾವ ಕೋರ್ಸನ್ನು ಆಯ್ಕೆ ಮಾಡಿಕೊಳ್ಳಬೇಕು, ತಾನು ಮುಂದೇನಾಗಬೇಕು ಎನ್ನುವ ಬಗ್ಗೆ ಅವನಲ್ಲಿ ಗೊಂದಲವಿರಬಹುದು. ಅದಕ್ಕೆಲ್ಲ ಒಂದಿಷ್ಟು ಸ್ಪಷ್ಟತೆ ಸಿಗುವತನಕ ತನ್ನ ಪಾಡಿಗೆ ತಾನಿದ್ದುಬಿಡೋಣ ಎಂದು ಅನ್ನಿಸಿರಬಹುದು. ಇದು ತಪ್ಪು ಎಂದು ನಾವು ನಿರ್ಧರಿಸಬೇಕಾಗಿಲ್ಲ. ಆದರೆ, ಇಂದಿನ ಸೋಷಿಯಲ್ ಮೀಡಿಯಾಗಳಿಂದ ಸಿಗುವ ಮಾಹಿತಿಗಳಿಂದ ಆತ ನಕಾರಾತ್ಮಕ ದಾರಿಯಲ್ಲಿ ಹೋಗುತ್ತಿದ್ದಾನೆಯೇ ಎನ್ನುವುದನ್ನು ಗಮನಿಸಬೇಕು. ಅದಕ್ಕಾಗಿ ಅವನ ಗೆಳೆಯರ ಸಹಾಯ ಪಡೆದುಕೊಳ್ಳಬೇಕು.

ವರ್ಷವಿಡೀ ಅವನು ಮಾಡುವ ಕಾರ್ಯ ಚಟುವಟಿಕೆಗಳು ಬಹಳ ಮುಖ್ಯವಾಗುತ್ತವೆ. ನಿರಂತರತೆ ತಪ್ಪಿದಾಗ, ಅವನಿಗೆ ಓದುವುದರಲ್ಲಿ ಆಸಕ್ತಿ ಕಡಿಮೆಯಾಗಬಹುದು. 'ಕೆಲಸದ ಬದಲಾವಣೆಯೇ ವಿಶ್ರಾಂತಿ' ಎಂದು ಮಹಾತ್ಮ ಗಾಂಧಿ ಹೇಳಿದ್ದಾರೆ. ವಿದ್ಯಾರ್ಥಿಜೀವನದಲ್ಲಿ ಕಷ್ಟಪಟ್ಟರೆ ಮುಂದಿನ ಬದುಕನ್ನು ನಿರಾತಂಕವಾಗಿ ಕಳೆಯಬಹುದು ಎನ್ನುವುದನ್ನು ಅವನಿಗೆ ಅರ್ಥ ಮಾಡಿಸಬೇಕು.

ಮಗನ ಸ್ನೇಹಿತರಲ್ಲಿ ಯಾರಾದರೂ ನಪಾಸಾಗಿರಬಹುದು. ಅವರನ್ನು ಬಿಟ್ಟು ಮುಂದಿನ ಕಲಿಕೆಗೆ ಹೋಗಲು ಇವನಿಗೆ ಮನಸ್ಸಾಗದೇ ಇರಬಹುದು ಅಥವಾ ಆ ಸ್ನೇಹಿತ(ತೆ)ರಿಂದ ಇವನಿಗೆ ಮೋಸವಾಗಿರಬಹುದು. ಇವನ್ನೆಲ್ಲ ಪತ್ತೆ ಮಾಡಿ, ಅವನ ದಿನಚರಿಯಲ್ಲಾದ ವ್ಯತ್ಯಾಸವನ್ನು ಗಮನಿಸಬೇಕು. ಪಿಯುಸಿಯನ್ನು ಚೆನ್ನಾಗಿಯೇ ಓದಿದ ಅವನಿಗೆ ವಿರಾಮ ಬೇಕಾಗಿದ್ದರೆ, ಆರೆಂಟು ತಿಂಗಳಲ್ಲಿ ಕಲಿತು ಮುಗಿಸುವ ಯಾವುದಾದರೂ ಕೋರ್ಸ್ ಕಲಿಯಲು ಒತ್ತಾಯ ಮಾಡಿ. ಸಂಗೀತ, ವಾದ್ಯ, ಚಿತ್ರಕಲೆ ಇತ್ಯಾದಿಯಾದರೂ ಆಗಬಹುದು. ಅವನು ಮುಂದೆ ಮಾಡಬೇಕೆಂದುಕೊಂಡಿರುವ ಬಿಸಿನೆಸ್ ಮಾಡುತ್ತಿರುವವರ ಹತ್ತಿರ ಕೆಲಸಕ್ಕೆ ಸೇರಿಸಿ. ಇಷ್ಟಕ್ಕೆಲ್ಲಾ ಅವನ ಇಷ್ಟದ ಶಿಕ್ಷಕರ ಸಹಾಯವನ್ನು ಪಡೆದುಕೊಂಡು, ಅವನಿಗೆ ಸರಿಯಾದ ದಾರಿಯಲ್ಲಿ ಮುಂದುವರಿಯುವಂತೆ ಪ್ರೇರೇಪಿಸಿ.

ಅಷ್ಟಕ್ಕೂ ಇವು ನಿಮ್ಮಿಂದ ಸಾಧ್ಯವಾಗದಿದ್ದರೆ ಅವನಿಗೆ ಕೆರಿಯರ್ ಕೌನ್ಸೆಲಿಂಗ್ ಮಾಡಿಸಿ. ಅವರ ಮಾರ್ಗದರ್ಶನದಿಂದ ಅವನಿಗೆ ಅನುಕೂಲ ಆಗಬಹುದು.



ಖಭೌತ ವಿಜ್ಞಾನ

ಆಕಾಶವೇ ನಿಮ್ಮ ಉದ್ಯೋಗಕ್ಷೇತ್ರ

• ಪ್ರದೀಪ್ ಎಸ್.ವೆಂಕಟರಾಮ್

ಮಾನವ ಕುಲವು ಸಾವಿರಾರು ವರ್ಷಗಳಿಂದ ಆಕಾಶವನ್ನು ನೋಡಿ ಕುತೂಹಲದಿಂದ ಪ್ರಶ್ನೆಗಳನ್ನು ಕೇಳುತ್ತಿದೆ: 'ನಕ್ಷತ್ರಗಳು ಹೇಗೆ ಹುಟ್ಟುತ್ತವೆ?', 'ಚಂದ್ರನ ಮೇಲೆ ಏನಿದೆ?', 'ಮಂಗಳ ಗ್ರಹದಲ್ಲಿ ಜೀವಿಗಳಿವೆಯೇ?'

1969ರಲ್ಲಿ ಚಂದ್ರನ ಮೇಲೆ ಮೊದಲು ಮಾನವ ಕಾಲಿಟ್ಟಿದ್ದು ವೈಜ್ಞಾನಿಕ ಇತಿಹಾಸದ ಮಹತ್ವದ ಘಟ್ಟವಾಗಿದೆ. ಇತ್ತೀಚಿನ ಮಂಗಳ ಗ್ರಹದ ಮಿಷನ್‌ಗಳು ಮತ್ತು ಸ್ಪೇಸ್‌ಎಕ್ಸ್‌ನಂತಹ ಖಾಸಗಿ ಸಂಸ್ಥೆಗಳ ಪ್ರಯತ್ನಗಳು ಬಾಹ್ಯಾಕಾಶ ಸಂಶೋಧನೆಯನ್ನು ಹೊಸ ಹಾದಿಯಲ್ಲಿ ಸಾಗಿಸುತ್ತಿವೆ.

ಖಭೌತ ವಿಜ್ಞಾನದ ಮಹತ್ವ: ಖಭೌತ ವಿಜ್ಞಾನವು (ಆ್ಯಸ್ಟ್ರೋಫಿಸಿಕ್ಸ್) ಬ್ರಹ್ಮಾಂಡದ ಮೂಲ, ರಚನೆ ಮತ್ತು ವಿಕಾಸವನ್ನು ತಿಳಿಯಲು ಸಹಾಯ ಮಾಡುತ್ತದೆ. ಜೊತೆಗೆ, ಬ್ಲ್ಯಾಕ್‌ಹೋಲ್‌ಗಳು, ನೆಬ್ಯುಲಾ, ಗ್ಯಾಲಕ್ಸಿಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ವಿವರಿಸುತ್ತದೆ. ಉಪಗ್ರಹ ತಂತ್ರಜ್ಞಾನ, ಜಿಪಿಎಸ್, ಹವಾಮಾನ ಮುನ್ಸೂಚನೆ, ಸಂವಹನ ವ್ಯವಸ್ಥೆ– ಇವೆಲ್ಲವೂ ಆ್ಯಸ್ಟ್ರೋಫಿಸಿಕ್ಸ್‌ಗೆ ಸಂಬಂಧಪಟ್ಟ ವಿಷಯಗಳಾಗಿವೆ.

ತಾತ್ವಿಕ ಅಂಶ ಮತ್ತು ಪ್ರಾಯೋಗಿಕ ಅನ್ವಯ: ಕ್ವಾಂಟಮ್ ಮೆಕ್ಯಾನಿಕ್ಸ್, ಸಾಪೇಕ್ಷತಾವಾದ (ರಿಲೇಟಿವಿಟಿ), ಕಾಸ್ಮಾಲಜಿ, ಬ್ರಹ್ಮಾಂಡದ ವಿಸ್ತರಣೆ, ಡಾರ್ಕ್ ಮ್ಯಾಟರ್ ಮತ್ತು ಡಾರ್ಕ್ ಎನರ್ಜಿ ಅಂತಹವುಗಳು ತಾತ್ವಿಕ ಅಂಶಗಳಾದರೆ, ಉಪಗ್ರಹ ಸಂವಹನ (ಮೊಬೈಲ್, ಇಂಟರ್ನೆಟ್, ಜಿಪಿಎಸ್), ಹವಾಮಾನ ಅಧ್ಯಯನ (ಚಂಡಮಾರುತ, ಮಳೆ, ಹವಾಮಾನ ಬದಲಾವಣೆ), ರಕ್ಷಣಾ ಕ್ಷೇತ್ರ (ಉಪಗ್ರಹಗಳ ಮೇಲೆ ನಿಗಾ, ಕ್ಷಿಪಣಿ ತಂತ್ರಜ್ಞಾನ), ಆರೋಗ್ಯ ಕ್ಷೇತ್ರ (ಎಂಆರ್‌ಐ, ಸಿ.ಟಿ ಸ್ಕ್ಯಾನ್ ಇತ್ಯಾದಿ) ಖಭೌತ ವಿಜ್ಞಾನದ ಪ್ರಮುಖ ಪ್ರಾಯೋಗಿಕ ಅನ್ವಯಗಳು. ಹೀಗಾಗಿ, ಆ್ಯಸ್ಟ್ರೋಫಿಸಿಕ್ಸ್ ಕ್ಷೇತ್ರವು ಬಾಹ್ಯಾಕಾಶದ ಅಧ್ಯಯನ ವಷ್ಟೇ ಅಲ್ಲ, ಅದು ಮಾನವನ ಜೀವನದ ಗುಣಮಟ್ಟವನ್ನು ಸುಧಾರಿಸುವ ಶಕ್ತಿಯನ್ನೂ ಹೊಂದಿದೆ.

ಬೋಧಿಸುವ ವಿಷಯಗಳು ಹೀಗಿವೆ: ಕ್ಲಾಸಿಕಲ್ ಮೆಕ್ಯಾನಿಕ್ಸ್, ಎಲೆಕ್ಟ್ರೊಮ್ಯಾಗ್ನೆಟಿಸಂ, ಕ್ವಾಂಟಮ್ ಮೆಕ್ಯಾನಿಕ್ಸ್ ಆ್ಯಂಡ್ ರಿಲೇಟಿವಿಟಿ, ಸ್ಟೆಲಾರ್ ಸ್ಟ್ರಕ್ಚರ್ ಆ್ಯಂಡ್ ಎವಲ್ಯೂಷನ್, ಕಾಸ್ಮಾಲಜಿ ಆ್ಯಂಡ್ ಸ್ಪೇಸ್ ಟೈಮ್ ಫಿಸಿಕ್ಸ್, ಅಬ್ಸರ್ವೇಷನಲ್ ಟೆಕ್ನಿಕ್ಸ್ (ಟೆಲಿಸ್ಕೋಪ್, ಸ್ಪೆಕ್ಟ್ರೋಸ್ಕೋಪಿ), ಕಾಂಪ್ಯುಟೇಷನಲ್ ಆ್ಯಸ್ಟ್ರೋಫಿಸಿಕ್ಸ್ ಆ್ಯಂಡ್ ಡೇಟಾ ಅನಾಲಿಸಿಸ್.

ಇತ್ತೀಚಿನ ಭಾರತೀಯ ಮಿಷನ್‌ಗಳಾದ ಚಂದ್ರಯಾನ- 3 (ಚಂದ್ರನ ಮೇಲಿನ ಯಶಸ್ವಿ ಲ್ಯಾಂಡಿಂಗ್) ಮತ್ತು ಆದಿತ್ಯ- ಎಲ್1 ಸೌರ ಮಿಷನ್ ಭಾರತವನ್ನು ಜಾಗತಿಕ ಬಾಹ್ಯಾಕಾಶ ಸಂಶೋಧನೆಯಲ್ಲಿ ಪ್ರಮುಖ ಸ್ಥಾನಕ್ಕೆ ತಂದು ನಿಲ್ಲಿಸಿವೆ.

ಇಂದಿನ ಆ್ಯಸ್ಟ್ರೋಫಿಸಿಕ್ಸ್ ಬರೀ ಭೌತವಿಜ್ಞಾನ ಮತ್ತು ಗಣಿತಕ್ಕೆ ಸೀಮಿತವಾಗಿಲ್ಲ. ಕೃತಕ ಬುದ್ಧಿಮತ್ತೆ (ಎಐ), ಮಷೀನ್ ಲರ್ನಿಂಗ್ ಮತ್ತು ಬಿಗ್ ಡೇಟಾ ವಿಶ್ಲೇಷಣೆಗಳೊಂದಿಗೆ ಸಂಶೋಧನೆಗೆ ಹೊಸ ದಾರಿಗಳನ್ನು ತೆರೆಯುತ್ತಿದೆ.

ಸುಮಾರು ಶೇ 95ರಷ್ಟು ಕಾರ್ಬನ್ ಡೈಆಕ್ಸೈಡ್ ಇರುವ ಮಂಗಳ ಗ್ರಹದ ವಾಯುವು ಮಾನವನಿಗೆ ವಿಷಕಾರಿಯಾಗಿದೆ. ಆದರೂ ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯುತ್ತಿದೆ.

ಬಾಹ್ಯಾಕಾಶ ಪ್ರವಾಸದಲ್ಲಿ ಸ್ಪೇಸ್‌ಎಕ್ಸ್, ಬ್ಲೂ ಆರಿಜಿನ್‌ನಂತಹ ಸಂಸ್ಥೆಗಳು ಮುಂದಾಳತ್ವ ವಹಿಸುತ್ತಿವೆ. ಹೊಸ ಶಕ್ತಿ ಮೂಲಗಳ ಅನ್ವೇಷಣೆ, ಬ್ರಹ್ಮಾಂಡದಲ್ಲಿ ಜೀವನದ ಮೂಲವನ್ನು ಅರಿಯುವ ಪ್ರಯತ್ನಗಳ ಮೂಲಕ ಈ ಕ್ಷೇತ್ರವು ಗಮನಸೆಳೆಯುತ್ತಿದೆ.

ಕೇವಲ ಕನಸುಗಳನ್ನು ಕಾಣುತ್ತಾ, ನಕ್ಷತ್ರಗಳನ್ನು ನೋಡುತ್ತಾ ನಿಲ್ಲಬೇಡಿ. ಏಕೆಂದರೆ, ಆ್ಯಸ್ಟ್ರೋಫಿಸಿಕ್ಸ್ ವಿಜ್ಞಾನಿಗಳಿಗಷ್ಟೇ ಸೀಮಿತವಾಗಿಲ್ಲ; ಅದು ಮಾನವಕುಲದ ಭವಿಷ್ಯವನ್ನು ರೂಪಿಸುವ ಪ್ರಮುಖ ಕ್ಷೇತ್ರವಾಗಿದೆ.

ಭಾರತದಲ್ಲಿ ಉತ್ತಮ ಶಿಕ್ಷಣ ಸಂಸ್ಥೆಗಳು ಹಾಗೂ ಸಂಶೋಧನಾ ಕೇಂದ್ರಗಳು ಇವೆ. ಇಷ್ಟೇ ಅಲ್ಲದೆ ಉತ್ತಮ ಉದ್ಯೋಗಾವಕಾಶಗಳು ಸಹ ಲಭ್ಯವಿದ್ದು, ವಿಜ್ಞಾನ, ಗಣಿತ ಹಾಗೂ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಇದು ಅತ್ಯುತ್ತಮ ವೃತ್ತಿ ಆಯ್ಕೆಯಾಗಬಹುದು.

ಲೇಖಕ: ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ

ಕೋರ್ಸ್‌ಗಳು

- ಬಿಟೆಕ್, ಎಂಟೆಕ್ (ಏರೋಸ್ಪೇಸ್, ಸ್ಪೇಸ್ ಟೆಕ್ನಾಲಜಿ, ಎಂಜಿನಿಯರಿಂಗ್ ಫಿಸಿಕ್ಸ್)
- ಬಿ.ಎಸ್ಸಿ (ಆ್ಯಸ್ಟ್ರೋಫಿಸಿಕ್ಸ್)
- ಬಿ.ಎಸ್ಸಿ (ಆ್ಯಸ್ಟ್ರೋಫಿಸಿಕ್ಸ್-ಆನರ್ಸ್)
- ಎಂ.ಎಸ್ಸಿ (ಆ್ಯಸ್ಟ್ರೋಫಿಸಿಕ್ಸ್)
- ಪಿಎಚ್.ಡಿ (ಆ್ಯಸ್ಟ್ರೋಫಿಸಿಕ್ಸ್)

ಪ್ರವೇಶ ಪರೀಕ್ಷೆಗಳು: ಐಐಟಿ-ಜೆಇಇ, ಕೆಸಿಇಟಿ, ಐಐಟಿ-ಜೆಎಎಮ್, ಬಿಟ್ಸಾಟ್ ...

ಕ್ಷೇತ್ರದ ವ್ಯಾಪ್ತಿ

- ಇಸ್ರೊ, ನಾಸಾ, ಯುರೋಪಿಯನ್ ಸ್ಪೇಸ್ ಏಜೆನ್ಸಿಯಂತಹ (ಇಎಸ್‌ಎ) ಸಂಸ್ಥೆಗಳಲ್ಲಿ ಅಂತರಿಕ್ಷ ಸಂಶೋಧನೆ
- ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಬೋಧನೆ ಹಾಗೂ ಸಂಶೋಧನೆ
- ಡೇಟಾ ಸೈನ್ಸ್ ಮತ್ತು ಹೈ-ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್– ಬಾಹ್ಯಾಕಾಶ ಡೇಟಾ ವಿಶ್ಲೇಷಣೆ
- ಜನರಿಗೆ ಬ್ರಹ್ಮಾಂಡದ ಬಗ್ಗೆ ಅರಿವು ಮೂಡಿಸುವುದು

ಉದ್ಯೋಗಾವಕಾಶ

- ಸಂಶೋಧನಾ ಸಂಸ್ಥೆಗಳಲ್ಲಿ ಆ್ಯಸ್ಟ್ರೋಫಿಸಿಸ್ಟ್/ಸ್ಪೇಸ್ ಸೈಂಟಿಸ್ಟ್
- ನಕ್ಷತ್ರಾಲಯಗಳಲ್ಲಿ ಅಬ್ಸರ್‌ವೇಟರಿ ಸೈಂಟಿಸ್ಟ್, ಬಾಹ್ಯಾಕಾಶ ಡೇಟಾ ವಿಶ್ಲೇಷಣೆ
- ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು
- ಉಪಗ್ರಹ, ರಾಕೆಟ್ ತಂತ್ರಜ್ಞಾನ, ಎಐ ಆಧಾರಿತ ಅಂತರಿಕ್ಷ ಸಂಶೋಧನೆ
- ಕಾರ್ಪೊರೇಟ್ ಕ್ಷೇತ್ರದ ಅವಕಾಶಗಳು
- ಆ್ಯಸ್ಟ್ರೋಫೋಟೊಗ್ರಾಫರ್
- ಇನ್ನಿತರ ಸಂಶೋಧನೆಗಳು

ಇತ್ತೀಚಿನ ವರದಿಗಳ ಪ್ರಕಾರ, ಆ್ಯಸ್ಟ್ರೋಫಿಸಿಕ್ಸ್ ಸಂಬಂಧಿತ ಉದ್ಯೋಗಗಳು ಸಾಮಾನ್ಯ ಉದ್ಯೋಗಗಳಿಗಿಂತ ವೇಗವಾಗಿ ಬೆಳೆಯುತ್ತಿವೆ.

ಪ್ರಮುಖ ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆ್ಯಸ್ಟ್ರೋಫಿಸಿಕ್ಸ್, ಬೆಂಗಳೂರು
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ತಿರುವನಂತಪುರ
- ಇಂಟರ್ ಯೂನಿವರ್ಸಿಟಿ ಸೆಂಟರ್ ಫಾರ್ ಅಸ್ಟ್ರಾನಮಿ ಆ್ಯಂಡ್ ಆ್ಯಸ್ಟ್ರೋಫಿಸಿಕ್ಸ್, ಪುಣೆ
- ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಮುಂಬೈ
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಜಿನಿಯರಿಂಗ್ ಫಿಸಿಕ್ಸ್)

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಸ್ಕಿಲ್‌ಲೆವೆಲ್: ಡಿಜಿಟಲ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಡಿಜಿಟಲ್ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಇರುವ, ತಂಡ ನಿರ್ವಹಣೆ ಸಾಮರ್ಥ್ಯ ಹಾಗೂ ನಾಯಕತ್ವ ಗುಣ ಇರುವ ವಿದ್ಯಾರ್ಥಿಗಳು ಜೂನ್ 14ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 6,000–8,000.
ಸಂಪರ್ಕ: internshala.com/i/72f57c.

ಗ್ಲೋಬಿಕ್ ಎಐ ಪ್ರೈವೇಟ್ ಲಿಮಿಟೆಡ್: ಲೀಡ್ ಜನರೇಷನ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಕೋಲ್ಡ್ ಕಾಲಿಂಗ್ ಬಗ್ಗೆ ಜ್ಞಾನ ಇರುವ, ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಜೂನ್ 14ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 8,500–15,000.
ಸಂಪರ್ಕ: internshala.com/i/b33941.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಅಯು ಡಿವೈಸಸ್: ಪ್ರೋಗ್ರ್ಯಾಂ ಕೇರ್ ಕೋಆರ್ಡಿನೇಟರ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳಿಗೆ ಸಂವಹನ ಸಾಮರ್ಥ್ಯ ಇರಬೇಕು. ಕ್ಲಿನಿಕಲ್ ಡೇಟಾ ಮ್ಯಾನೇಜ್‌ಮೆಂಟ್, ಮೆಡಿಕಲ್ ಟರ್ಮಿನಾಲಜಿ, ರೋಗಿಗಳ ಕಾಳಜಿ ಮತ್ತು ಆಪ್ತ ಸಮಾಲೋಚನೆಯ ಬಗ್ಗೆ ಜ್ಞಾನ ಇರಬೇಕು. ಜೂನ್ 12ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 12,000–15,000.
ಸಂಪರ್ಕ: internshala.com/i/fcc992

ವೀವಿಂಗ್ ವೈಬ್ಸ್: ಎಐ & ಪ್ರೋಸೆಸ್ ಆಟೊಮೇಷನ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಡೇಟಾ ಅನಲಿಟಿಕ್ಸ್, ಜನರೇಟಿವ್ ಎಐ ಟೂಲ್ಸ್, ಮಷೀನ್ ಲರ್ನಿಂಗ್ ಆಪರೇಷನ್ಸ್ (ಎಂಎಲ್‌ಒ), ಎಂಎಸ್ ಎಕ್ಸೆಲ್ ಮತ್ತು ಪೈಥಾನ್ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಅನುಭವ ಇರಬೇಕು. ಪರಿಣಾಮಕಾರಿ ಸಂವಹನ ಸಾಮರ್ಥ್ಯ ಇರಬೇಕು. ಅಂತಹವರು ಜೂನ್ 12ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 10,000–12,000.
ಸಂಪರ್ಕ: internshala.com/i/1d0d58.

ವಿದ್ಯಾರ್ಥಿ ವೇತನ ಕೈಪಿಡಿ

ಪದವಿ ಸ್ಕಾಲರ್‌ಷಿಪ್‌ಗೆ ಪ್ರವೇಶ ಪರೀಕ್ಷೆ

ಆಲ್ ಇಂಡಿಯಾ ಅಂಡರ್ ಗ್ರ್ಯಾಜುಯೇಟ್ ಸ್ಕಾಲರ್‌ಷಿಪ್ ಎಂಟ್ರೆನ್ಸ್ ಎಕ್ಸಾಮ್ (ಎಐಯುಜಿಎಸ್‌ಇಇ) ರಾಷ್ಟ್ರ ಮಟ್ಟದ ಪ್ರವೇಶ ಪರೀಕ್ಷೆಯಾಗಿದೆ. ಪದವಿ ವಿದ್ಯಾರ್ಥಿಗಳಿಗೆ ಸರ್ಕಾರಿ ವಿದ್ಯಾರ್ಥಿವೇತನ ನೀಡಲು ಈ ಪರೀಕ್ಷೆ ನಡೆಸಲಾಗುತ್ತದೆ.
ಅರ್ಹತೆ: 12ನೇ ತರಗತಿಯಲ್ಲಿ ಕನಿಷ್ಠ ಶೇಕಡಾವಾರು ಅಂಕ ಪಡೆದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಎಂಜಿನಿಯರಿಂಗ್ (ಬಿ.ಟೆಕ್, ಬಿ.ಇ.) ಮತ್ತು ವೈದ್ಯಕೀಯ ಕೋರ್ಸ್‌ಗಳಾದ ಎಂಬಿಬಿಎಸ್, ಬಿಡಿಎಸ್, ಬಿಎಎಂಎಸ್, ಬಿಎಚ್‌ಎಂಎಸ್, ಬಿಎಸ್ಸಿ (ನರ್ಸಿಂಗ್) ಸೇರಿದಂತೆ ಕಲಾ ಮತ್ತು ವಾಣಿಜ್ಯ ಕೋರ್ಸ್‌ಗಳ ಮೊದಲನೇ ವರ್ಷಕ್ಕೆ ದಾಖಲಾದ ವಿದ್ಯಾರ್ಥಿಗಳಿಗೆ ಇದು ಅನ್ವಯವಾಗುತ್ತದೆ.
ಆರ್ಥಿಕ ನೆರವು: ವಾರ್ಷಿಕವಾಗಿ ₹ 2 ಲಕ್ಷದವರೆಗೆ ವಿದ್ಯಾರ್ಥಿವೇತನ.
ಅರ್ಜಿ ಸಲ್ಲಿಸಲು ಕೊನೇ ದಿನ: 31-05-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/AIUG1

ಸಿಬಿಪಿಎಸ್ ಸಂಶೋಧನಾ ಫೆಲೋಷಿಪ್

ಸೆಂಟರ್ ಫಾರ್ ಬಜೆಟ್ ಆ್ಯಂಡ್ ಪಾಲಿಸಿ ಸ್ಟಡೀಸ್ (ಸಿಬಿಪಿಎಸ್) ವತಿಯಿಂದ ಈ ಸಂಶೋಧನಾ ಫೆಲೋಷಿಪ್ ನೀಡಲಾಗುತ್ತದೆ.
ಅರ್ಹತೆ: ಶಿಕ್ಷಣ, ಲಿಂಗತ್ವ, ಆಡಳಿತ, ಆರೋಗ್ಯ ಮತ್ತು ಪೌಷ್ಟಿಕತೆ, ಸಾರ್ವಜನಿಕ ಹಣಕಾಸು, ಜೀವನೋಪಾಯ ಮತ್ತು ಸಾಮಾಜಿಕ ಭದ್ರತೆ ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಳ್ಳುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ಪದವಿ ಪೂರ್ಣಗೊಳಿಸಿರುವ ಅಥವಾ ಪದವಿ ಕೋರ್ಸ್‌ನ ಅಂತಿಮ ವರ್ಷದಲ್ಲಿ ಓದುತ್ತಿರುವವರು ಅರ್ಜಿ ಸಲ್ಲಿಸಬಹುದು.
ಆರ್ಥಿಕ ನೆರವು: ತಿಂಗಳಿಗೆ ₹ 25,000 ಸ್ಟೈಪೆಂಡ್ ಮತ್ತು ಇತರ ಸೌಲಭ್ಯ.
ಅರ್ಜಿ ಸಲ್ಲಿಸಲು ಕೊನೇ ದಿನ: 31-05-2026
ಅರ್ಜಿ ಸಲ್ಲಿಸುವ ವಿಧಾನ: ಆಫ್‌ಲೈನ್ ಮೂಲಕ: fellows@cbps.in
ಹೆಚ್ಚಿನ ಮಾಹಿತಿಗೆ: Short Url: www.b4s.in/praja/CBPS1

ಸಾಮರ್ಥ್ಯ ಪರೀಕ್ಷೆ

ಮಾಸ್ಟರ್ಸ್ ಯೂನಿಯನ್ ವಿದ್ಯಾರ್ಥಿವೇತನ ಸಾಮರ್ಥ್ಯ ಪರೀಕ್ಷೆಯನ್ನು ಉನ್ನತ ಸಾಧನೆ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ವಿಶೇಷವಾಗಿ ರೂಪಿಸಲಾಗಿದೆ.
ಅರ್ಹತೆ: ಅರ್ಜಿದಾರರು ಪ್ರಸ್ತುತ 12ನೇ ತರಗತಿಯಲ್ಲಿ ಓದುತ್ತಿರಬೇಕು ಅಥವಾ 2025ರಲ್ಲಿ ಅದನ್ನು ಪೂರ್ಣಗೊಳಿಸಿರಬೇಕು. ಬಿಸಿನೆಸ್ ಮ್ಯಾನೇಜ್‌ಮೆಂಟ್, ಟೆಕ್ನಾಲಜಿ, ಲೀಡರ್‌ಶಿಪ್, ಡೇಟಾ ಸೈನ್ಸ್ ಮತ್ತು ಕೃತಕ ಬುದ್ಧಿಮತ್ತೆ (ಎಐ), ಡಿಸೈನ್, ಸಸ್ಟೇನಬಿಲಿಟಿ, ಫೈನಾನ್ಸ್ ಆ್ಯಂಡ್ ಎಕನಾಮಿಕ್ಸ್, ಮಾರ್ಕೆಟಿಂಗ್ ಅಥವಾ ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಪದವಿ ಪಡೆಯುವ ಗುರಿ ಹೊಂದಿರಬೇಕು.

ಅರ್ಜಿದಾರರು ಮಾಸ್ಟರ್ಸ್ ಯೂನಿಯನ್ ಸ್ಕಾಲರ್‌ಷಿಪ್ ಆ್ಯಪ್ಟಿಟ್ಯೂಡ್ ಪರೀಕ್ಷೆಗೆ (ಎಂಯುಎಸ್‌ಎಟಿ) ಹಾಜರಾಗಬೇಕು ಅಥವಾ ಅನುಮೋದಿತ ಪರ್ಯಾಯ ಪರೀಕ್ಷೆಯಲ್ಲಿ ಅರ್ಹತೆ ಹೊಂದಿರಬೇಕು.
ಆರ್ಥಿಕ ನೆರವು: ಬೋಧನಾ ಶುಲ್ಕದಲ್ಲಿ ಶೇ 10ರಿಂದ 80ರವರೆಗೆ ವಿನಾಯಿತಿ
ಅರ್ಜಿ ಸಲ್ಲಿಸಲು ಕೊನೇ ದಿನ: 30-05-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/MUSCASP1

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

27) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?
ಉತ್ತರ:– ಪ್ಲಾಸಿ ಮತ್ತು ಬಕ್ಸಾರ್ ಕದನಗಳು

28) ಪ್ಲಾಸಿ ಕದನಕ್ಕೆ ಕಾರಣಗಳೇನು?
ಉತ್ತರ:– ಪ್ಲಾಸಿ ಕದನಕ್ಕೆ ಕಾರಣಗಳು

1) **ದಸ್ತಕ್‌ಗಳ ದುರುಪಯೋಗ** : ಕಂಪನಿಯ ವ್ಯಾಪಾರಕ್ಕಾಗಿ ನೀಡಿದ 'ದಸ್ತಕ್'ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಳ್ಳುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿದ್ದದ್ದು ಸಿರಾಜನನ್ನು ಕೆರಳಿಸಿತು.

2. **ಅನುಮತಿ ಇಲ್ಲದೇ ಕೋಟೆಯ ದುರಸ್ಥಿ** : ಬ್ರಿಟಿಷರು ಫ್ರೆಂಚರ ಭಯದಿಂದ ಕಲ್ಕತ್ತಾದ ಕೋಟೆಯನ್ನು ಬಲಪಡಿಸಿ, ಫಿರಂಗಿಗಳನ್ನು ಇಟ್ಟರು. ಅನುಮತಿ ಪಡೆಯದೇ ಕೋಟೆಯನ್ನು ದುರಸ್ಥಿ ಮಾಡಿಸಿದ್ದರಿಂದ ಫಿರಂಗಿಗಳನ್ನು ತೆಗೆದು ಹಾಕಲು ಸಿರಾಜ್ ಸೂಚಿಸಿದನಾದರೂ ಅವರು ಪಾಲಿಸಲಿಲ್ಲ. ಇದರಿಂದ ಸಿರಾಜನು ಆಕ್ರೋಶಗೊಂಡನು.

3. **ಕಪ್ಪುಕೋಣೆ ದುರಂತ** : ಆಗ ಸಿರಾಜನು ಫೋರ್ಟ್ ವಿಲಿಯಂ ಕೋಟೆಯನ್ನು ಸುಲಭವಾಗಿ ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು ಎಂಬುದಾಗಿತ್ತು. ಇದನ್ನು ಕಪ್ಪುಕೋಣೆಯ ದುರಂತ ಎಂದು ಕರೆಯಲಾಗಿದೆ. ಈ ಸುದ್ದಿ ಕೇಳಿ ರಾಬರ್ಟ್ ಕ್ಲೈವ್ ಉಗ್ರ ಕೋಪದಲ್ಲಿ ಬಲಿಷ್ಠ ಸೇನೆಯೊಂದಿಗೆ ಬಂಗಾಳಕ್ಕೆ ಬಂದನು

29) ಪ್ಲಾಸಿ ಕದನದ ಪರಿಣಾಮಗಳೇನು?
ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

30) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ
ಉತ್ತರ:– ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್–ಉದ್–ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು. ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು, ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್–ಉದ್–ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್–ಉದ್–ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.

31) ಬಕ್ಸಾರ್ ಯುದ್ದದ ಪರಿಣಾಮಗಳು ಯಾವುವು?
ಉತ್ತರ:– ಬಕ್ಸಾರ್ ಯುದ್ಧದ ಪರಿಣಾಮಗಳು:–

1. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು
3. ಔದ್‌ನ ನವಾಬನಾದ ಷುಜಾ–ಉದ್–ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

32) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?
ಉತ್ತರ:– ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು.

33) ಬಕ್ಸಾರ್ ಕದನದ ಕುರಿತು ವಿವರವಾಗಿ ಬರೆಯಿರಿ
ಉತ್ತರ: ಮೀರ್ ಖಾಸಿಂ ಒಬ್ಬ ಸಮರ್ಥ ಆಡಳಿತಗಾರ. ಈತನು ಸಹ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು. ಎರಡು ಲಕ್ಷ ಪೌಂಡ್ ಹಣದ ಜೊತೆಗೆ ಕೆಲವು ಪ್ರದೇಶಗಳನ್ನು ಕಂಪನಿಗೆ ಬಿಟ್ಟುಕೊಟ್ಟನು. ಆದರೆ, ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು. ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕ ಮುಕ್ತ ಎಂದು ಘೋಷಿಸಿದನು. ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದರು. ಪರಿಣಾಮ ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಹೊಡೆತ ಬಿದ್ದಿತು. ಬ್ರಿಟಿಷರಿಗೆ ನವಾಬನನ್ನು ವಿರೋಧಿಸಲು ಇದಿಷ್ಟೇ ಸಾಕಿತ್ತು. ಅವರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು. ಬ್ರಿಟಿಷರ ಕುಟಿಲತೆಯನ್ನೆಲ್ಲ ಅರಿತಿದ್ದ ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು. ಭಾರತೀಯ ವ್ಯಾಪಾರಿಗಳು ಮತ್ತು ವಿವಿಧ ಕಸುಬುದಾರರು ಅವನ ಬೆಂಬಲಕ್ಕೆ ನಿಂತರು. ಈ ನಿಟ್ಟಿನಲ್ಲಿ ಮುಂದುವರೆದ ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜ್–ಉದ್–ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಪರಿಣಾಮವಾಗಿ, ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು. ಅಂತಿಮವಾಗಿ ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು. ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು. (ಮುಂದುವರಿಯುವುದು)

MATHS

Inverse trigonometric functions

27. Prove that:

$$\sin^{-1}x=\cos^{-1}\sqrt{1-x^2}=\tan^{-1}\frac{x}{\sqrt{1-x^2}}=\sec^{-1}\frac{1}{\sqrt{1-x^2}}=\cot^{-1}\frac{\sqrt{1-x^2}}{x}=\operatorname{cosec}^{-1}\frac{1}{x}$$

(.......Contd)

$$\tan\theta=\frac{\sin\theta}{\cos\theta}=\frac{x}{\sqrt{1-x^2}};$$
$$\operatorname{cosec}\theta=\frac{1}{\sin\theta}=\frac{1}{x};$$
$$\sec\theta=\frac{1}{\cos\theta}=\frac{1}{\sqrt{1-x^2}};$$
$$\cot\theta=\frac{1}{\tan\theta}=\frac{\sqrt{1-x^2}}{x}$$
$$\Rightarrow \theta=\cos^{-1}\sqrt{1-x^2};\quad \theta=\sec^{-1}\frac{1}{\sqrt{1-x^2}}$$
$$\theta=\tan^{-1}\frac{x}{\sqrt{1-x^2}};\quad \theta=\cot^{-1}\frac{\sqrt{1-x^2}}{x}$$
$$\theta=\operatorname{cosec}^{-1}\frac{1}{x};$$

Thus, $\sin^{-1}x=\cos^{-1}\sqrt{1-x^2}=\tan^{-1}\frac{x}{\sqrt{1-x^2}}$

$$\Rightarrow \operatorname{cosec}^{-1}\frac{1}{x}=\sec^{-1}\frac{1}{\sqrt{1-x^2}}=\cot^{-1}\frac{\sqrt{1-x^2}}{x}$$

(Each $=\theta$); $x\neq 0$ and $x\neq\pm 1$.

28. Prove that : $\tan^{-1}x+\tan^{-1}y=\tan^{-1}\frac{x+y}{1-xy}$; $\left(|x|<1,|y|<1\right)$ [i.e., $xy<1$]

Proof : – Let $\tan^{-1}x=A$ and $\therefore x=\tan A$ $\quad[\tan^{-1}y=B;\ \therefore y=\tan B]$

Given $|x|<1\Rightarrow -1<x<1$

Given $|y|<1\Rightarrow -1<y<1=-1<\tan B<1$

$$\Rightarrow -1<\tan A<1\Rightarrow -\frac{\pi}{4}<A<\frac{\pi}{4}\ ....(1)$$
$$\Rightarrow -\frac{\pi}{4}<B<\frac{\pi}{4}\ ....(2)$$

From (1) and (2), adding $-\frac{\pi}{2}<A+B<\frac{\pi}{2}$

We know that

$$\tan(A+B)=\frac{\tan A+\tan B}{1-\tan A\tan B}=\frac{x+y}{1-xy}$$

and $\because A+B\in\left(-\frac{\pi}{2},\frac{\pi}{2}\right)$

$$\therefore A+B=\tan^{-1}\frac{x+y}{1-xy}$$
$$\Rightarrow \tan^{-1}x+\tan^{-1}y=\tan^{-1}\left(\frac{x+y}{1-xy}\right)$$

29. Prove that $\tan^{-1}x+\tan^{-1}y+\tan^{-1}z=\tan^{-1}\left(\frac{x+y+z-xyz}{1-xy-yz-zx}\right)$

Proof : – $(\tan^{-1}x+\tan^{-1}y)+\tan^{-1}z=$

$$\tan^{-1}\left(\frac{x+y}{1+xy}\right)+\tan^{-1}z$$
$$=\tan^{-1}\left[\frac{\frac{x+y}{1-xy}+z}{1-\left(\frac{x+y}{1-xy}\right)z}\right]$$
$$=\tan^{-1}\left[\frac{x+y+z-xyz}{1-xy-yz-zx}\right]$$

30. Prove that $\cot^{-1}x+\cot^{-1}y=\cot^{-1}\left(\frac{xy-1}{y+x}\right)$

Proof : – $\cot^{-1}x+\cot^{-1}y=\tan^{-1}\frac{1}{x}+\tan^{-1}\frac{1}{y}$

$$=\tan^{-1}\left[\frac{\frac{1}{x}+\frac{1}{y}}{1-\frac{1}{x}\cdot\frac{1}{y}}\right]$$
$$=\tan^{-1}\left(\frac{y+x}{xy-1}\right)$$
$$=\cot^{-1}\left(\frac{xy-1}{y+x}\right)$$

31. Prove that $\tan^{-1}\frac{1-x}{1+x}-\tan^{-1}\frac{1-y}{1+y}=\sin^{-1}\frac{y-x}{\sqrt{1+x^2\,1+y^2}}$

Soln : – Consider, L.H.S.

$$(\tan^{-1}-\tan^{-1}x)-(\tan^{-1}1-\tan^{-1}y)$$
$$=\tan^{-1}y-\tan^{-1}x=\tan^{-1}\frac{y-x}{1+yx}$$
$$=\sin^{-1}\frac{y-x}{\sqrt{(1+yx)^2+(y-x)^2}}$$
$$=\sin^{-1}\frac{y-x}{\sqrt{1+y^2x^2+y^2+x^2}}$$
$$=\sin^{-1}\frac{y-x}{\sqrt{1+x^2}\sqrt{1+y^2}}=\text{R.H.S.}$$

32. Evaluate $\cos\left(2\cos^{-1}x+\sin^{-1}x\right)$ at $x=\frac{1}{5}$, where $0\le\cos^{-1}x\le\pi$ & $-\frac{\pi}{2}\le\sin^{-1}x\le\frac{\pi}{2}$.

Soln : – $\cos(2\cos^{-1}x+\sin^{-1}x)$

$$\Rightarrow \cos\{\cos^{-1}x+(\cos^{-1}x+\sin^{-1}x)\}$$

(Contd....)

ಈಗಲೂ ನಿಂತಿಲ್ಲ ನಿಯಮ ಉಲ್ಲಂಘನೆ

30X40 ಅಡಿ ವಿಸ್ತೀರ್ಣದ ನಿವೇಶನಗಳಲ್ಲಿ 4–5 ಅಂತಸ್ತುಗಳ ನಿರ್ಮಾಣ

• ಎ.ಎಂ.ಸುರೇಶ

ಮುಖ್ಯಾಂಶಗಳು

- 14 ತಿಂಗಳಾದರೂ ಬಗೆಹರಿಯದ ಸಮಸ್ಯೆ
- ವಿದ್ಯುತ್ ಸರಬರಾಜು ಕಂಪನಿಗಳಿಗೆ ಆದಾಯ ಇಳಿಮುಖ
- ಗ್ರಾಹಕರಿಗೂ ಸಿಗದ ಮುಕ್ತಿ

ಬೆಂಗಳೂರು: ವಿದ್ಯುತ್ ಮತ್ತು ನೀರಿನ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣ ಪತ್ರ (ಒ.ಸಿ)ವನ್ನು ಸುಪ್ರೀಂ ಕೋರ್ಟ್ ಕಡ್ಡಾಯಗೊಳಿಸಿದ ನಂತರ 30X40 ಅಡಿ ವಿಸ್ತೀರ್ಣದ ನಿವೇಶನಗಳಲ್ಲಿ ನೆಲ +2 ಅಂತಸ್ತು ಅಥವಾ ಸ್ಟಿಲ್ಟ್+3 ಅಂತಸ್ತಿನವರೆಗೆ ಮಾತ್ರ ವಸತಿ ಕಟ್ಟಡಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅವಕಾಶ ನೀಡಿದೆ. ಆದರೆ, ಈಗಲೂ ಇದರ ಪಾಲನೆ ಆಗುತ್ತಿಲ್ಲ.

'ರಾಜಧಾನಿ ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳಲ್ಲಿ 30X40 ಅಡಿ ವಿಸ್ತೀರ್ಣದ ನಿವೇಶನಗಳಲ್ಲಿ ನಿಯಮ ಉಲ್ಲಂಘಿಸಿ 4–5 ಅಂತಸ್ತುಗಳ ನಿರ್ಮಾಣ ಕಾರ್ಯ ಮುಂದುವರಿದಿದೆ. ಈ ರೀತಿ ಮಾಡಿದರೆ ಕಾಯಂ ವಿದ್ಯುತ್ ಸಂಪರ್ಕ ನೀಡುವುದಿಲ್ಲ ಎಂದು ಎಷ್ಟೇ ಹೇಳಿದರೂ, ಜನರು ಅರ್ಥ ಮಾಡಿಕೊಳ್ಳುತ್ತಿಲ್ಲ' ಎಂದು ಬೆಸ್ಕಾಂನ ಎಂಜಿನಿಯರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮನೆಗಳ ನಿರ್ಮಾಣ ಕಾರ್ಯ ಆರಂಭವಾದಾಗ ನಕ್ಷೆ ಮಂಜೂರಾತಿ ಪಡೆದು ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ. ಆ ಸಂದರ್ಭದಲ್ಲೇ ನಕ್ಷೆಗೆ ಅನುಗುಣವಾಗಿ ಮನೆ ನಿರ್ಮಿಸಬೇಕು ಅಥವಾ ಒ.ಸಿ ನೀಡಬೇಕು. ಇಲ್ಲದಿದ್ದರೆ ಮುಂದೆ ಕಾಯಂ ವಿದ್ಯುತ್ ಸಂಪರ್ಕ ನೀಡುವುದಿಲ್ಲ ಎಂದು ಷರತ್ತು ವಿಧಿಸಲಾಗುತ್ತಿದೆ. ಆದರೂ, ಇದನ್ನು ಉಲ್ಲಂಘಿಸಿ ಅಧಿಕ ಅಂತಸ್ತುಗಳ ಮನೆಗಳನ್ನು ಕಟ್ಟಲಾಗುತ್ತಿದೆ' ಎಂದು ವಿವರಿಸಿದರು.

'ನೆಲ +2 ಅಂತಸ್ತು ಅಥವಾ ಸ್ಟಿಲ್ಟ್+3 ಅಂತಸ್ತಿನವರೆಗೆ ನಿರ್ಮಿಸಿದ್ದರೆ ಒ.ಸಿ ಕೇಳುವುದಿಲ್ಲ. ಇದಕ್ಕಿಂತ ಹೆಚ್ಚಿನ ಅಂತಸ್ತು ನಿರ್ಮಿಸಿದರೆ ಒ.ಸಿ ಬೇಕಾಗುತ್ತದೆ. ಪಾಲಿಕೆಯಿಂದ ಒ.ಸಿ ತಂದರೆ ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ಆಧರಿಸಿ ವಿದ್ಯುತ್ ಸಂಪರ್ಕ ನೀಡುತ್ತೇವೆ. ಆದರೆ, ಒ.ಸಿ ನೀಡುವುದು, ಬಿಡುವುದು ಪಾಲಿಕೆಗಳಿಗೆ ಬಿಟ್ಟ ವಿಷಯ' ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದರು.

'ಬೆಂಗಳೂರಿನಲ್ಲಿ ನಿವೇಶಗಳ ಬೆಲೆ ದುಬಾರಿಯಾಗಿದೆ. ಇದರ ಜೊತೆಗೆ ಮನೆ ಬಾಡಿಗೆಯೂ ಅಧಿಕ. ಹೀಗಾಗಿ ಮನೆ ನಿರ್ಮಾಣ ಮಾಡುವವರು ಸ್ವಂತಕ್ಕೆ ಅಷ್ಟೇ ಇರಲಿ ಎಂದು ಯೋಚಿಸುವುದಿಲ್ಲ. ಎರಡು ಅಂತಸ್ತು ಹೆಚ್ಚಿಗೆ ನಿರ್ಮಾಣ ಮಾಡಿದರೆ, ಬಾಡಿಗೆ ಬರುತ್ತದೆ ಎಂದು ಯೋಚಿಸುತ್ತಾರೆ. ಹೀಗಾಗಿಯೇ ಕಟ್ಟಡಗಳ ನಕ್ಷೆ ಉಲ್ಲಂಘನೆ ಪ್ರಕರಣಗಳು ನಿಂತಿಲ್ಲ' ಎಂದು ಅವರು ವಿಶ್ಲೇಷಿಸಿದರು.

ಆದಾಯ ಇಳಿಮುಖ: ವಿದ್ಯುತ್ ಸಂಪರ್ಕ ನೀಡಲು ಸುಪ್ರೀಂ ಕೋರ್ಟ್ ಆದೇಶದಂತೆ ಒ.ಸಿ ಕಡ್ಡಾಯಗೊಳಿಸಿದ ಬಳಿಕ, ಬೆಂಗಳೂರು ಸೇರಿದಂತೆ ಬಹುತೇಕ ಎಲ್ಲ ಕಡೆ ಹೊಸದಾಗಿ ವಿದ್ಯುತ್ ಸಂಪರ್ಕ ನೀಡುವ ಸಂಖ್ಯೆ ಕಡಿಮೆಯಾಗಿದೆ. ಇದರಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಆದಾಯ ಕಡಿಮೆಯಾಗಿದೆ.

> **ವಿಸ್ತೀರ್ಣದ ಮಿತಿ ಹಾಕದೆ ಈಗಾಗಲೇ ನಿರ್ಮಾಣವಾಗಿರುವ ಎಲ್ಲ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಇದರಿಂದ ಲಕ್ಷಾಂತರ ಗ್ರಾಹಕರಿಗೆ ಅನುಕೂಲವಾಗಲಿದೆ**
> **ಸಿ. ರಮೇಶ್,**
> ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ

1,200 ಚದರಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಒ.ಸಿ ಪಡೆಯುವುದರಿಂದ ವಿನಾಯಿತಿ ನೀಡಿ ಸುಮಾರು ಆರು ತಿಂಗಳ ಹಿಂದೆ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಇದರಿಂದ ಕೆಲವರಿಗೆ ಅಷ್ಟೇ ಪ್ರಯೋಜನವಾಗಿದೆ. 30X50 ಅಡಿ, 40X60 ಅಡಿ ವಿಸ್ತೀರ್ಣದಲ್ಲಿ ಮನೆಗಳನ್ನು ನಿರ್ಮಾಣ ಮಾಡಿರುವವರ ಸಂಖ್ಯೆ ಹೆಚ್ಚಾಗಿದೆ. ಅವರಿಗೆಲ್ಲ ಸಂಪರ್ಕ ನೀಡಿದ್ದರೆ, ಕಂಪನಿಗಳಿಗೆ ಆದಾಯ ಬರುತ್ತಿತ್ತು. ಗ್ರಾಹಕರಿಗೂ ಅನುಕೂಲವಾಗುತ್ತಿತ್ತು ಎಂದು ಬೆಸ್ಕಾಂ ಅಧಿಕಾರಿಯೊಬ್ಬರು ತಿಳಿಸಿದರು.

'ಕಟ್ಟಡಗಳ ನಕ್ಷೆ ಉಲ್ಲಂಘನೆ ಮಿತಿಯನ್ನು ಶೇ 5 ರಿಂದ ಶೇ 15ವರೆಗೂ ವಿಸ್ತರಿಸಲಾಗಿದೆ. ಆದರೆ, ಬೆಂಗಳೂರಿನಲ್ಲಿ ದೊಡ್ಡಮಟ್ಟದಲ್ಲಿ ನಕ್ಷೆ ಉಲ್ಲಂಘನೆ ಆಗಿದೆ. ಹೀಗಾಗಿ ಶೇ 15ರವರೆಗೆ ವಿಸ್ತರಿಸಿದ್ದರೂ ಹೆಚ್ಚಿನ ಅನುಕೂಲ ಆಗುವುದಿಲ್ಲ. ಒಂದು ಕಾಲಮಿತಿ ನಿಗದಿ ಮಾಡಿ, ದಂಡ ವಿಧಿಸುವ ಮೂಲಕ ಇಲ್ಲಿಯವರೆಗೆ ನಿರ್ಮಾಣ ಮಾಡಿರುವ ಎಲ್ಲ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತೇವೆ. ಆದರೆ, ಇನ್ನು ಮುಂದೆ ನಕ್ಷೆ ಉಲ್ಲಂಘನೆ ಮಾಡಿದರೆ ವಿದ್ಯುತ್ ನೀಡುವುದಿಲ್ಲ ಎಂಬ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡರೆ ಬಹಳಷ್ಟು ಮಂದಿಗೆ ಅನುಕೂಲವಾಗಲಿದೆ' ಎಂದರು.

'ನಕ್ಷೆ ಉಲ್ಲಂಘಿಸಿ ಇದುವರೆಗೆ ಕಟ್ಟಿರುವ ಎಲ್ಲ ಮನೆಗಳಿಗೆ, ಒಮ್ಮೆಗೆ ಮಾತ್ರ ಅನ್ವಯವಾಗುವಂತೆ ವಿಶೇಷ ಯೋಜನೆ ರೂಪಿಸಿ ದಂಡ ವಿಧಿಸುವ ಮೂಲಕ ವಿದ್ಯುತ್ ಸಂಪರ್ಕ ನೀಡುವ ಕುರಿತ ಟಿಪ್ಪಣಿಯನ್ನು ಹಲವು ತಿಂಗಳ ಹಿಂದೆಯೇ ಸಿದ್ಧಪಡಿಸಲಾಗಿತ್ತು. ಆದರೆ, ಇದು ಸಚಿವ ಸಂಪುಟ ಸಭೆಯ ಮುಂದೆ ಬರಲಿಲ್ಲ. ಮುಂದಿನ ದಿನಗಳಲ್ಲಿ ಸರ್ಕಾರ ಇದಕ್ಕೆ ಒಪ್ಪಿಗೆ ನೀಡುವ ನಿರೀಕ್ಷೆ ಇದೆ' ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ.

'ಮರುಮೌಲ್ಯಮಾಪನ: ಹೆಚ್ಚುವರಿ ಶುಲ್ಕ ಮರುಪಾವತಿ'

ನವದೆಹಲಿ (ಪಿಟಿಐ): 12ನೇ ತರಗತಿಯ ಮರುಮೌಲ್ಯಮಾಪನ ಪ್ರಕ್ರಿಯೆ ವೇಳೆ ತಾಂತ್ರಿಕ ದೋಷದಿಂದ ವಿದ್ಯಾರ್ಥಿಗಳಿಗೆ ವಿಧಿಸಿದ್ದ ಹೆಚ್ಚುವರಿ ಶುಲ್ಕವನ್ನು ಮರುಪಾವತಿ ಮಾಡುವುದಾಗಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್ಇ) ಭಾನುವಾರ ತಿಳಿಸಿದೆ.

ಮರು ಮೌಲ್ಯಮಾಪನದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಎದುರಿಸಿದ ತಾಂತ್ರಿಕ ದೋಷಗಳ ಕುರಿತು ವಿವರವಾದ ವರದಿಯನ್ನು ಸಲ್ಲಿಸುವಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಿಬಿಎಸ್ಇಗೆ ಸೂಚಿಸಿದ್ದರು.

'ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳಿಗಾಗಿ ವಿದ್ಯಾರ್ಥಿಗಳು ಮೇ 21 ಮತ್ತು 22ರಂದು ಅರ್ಜಿ ಸಲ್ಲಿಸುವಾಗ ತಾಂತ್ರಿಕ ಸಮಸ್ಯೆಯಿಂದ ಹೆಚ್ಚಿನ ಶುಲ್ಕ ಕಡಿತಕ್ಕೆ ಕಾರಣವಾಗಿತ್ತು.

ಕೆಲ ಸಂದರ್ಭದಲ್ಲಿ ಹೆಚ್ಚಿನ ಶುಲ್ಕ ಕಡಿತವಾಗಿದ್ದರೆ, ಮತ್ತೆ ಕೆಲ ಸಂದರ್ಭ ಕಡಿಮೆ ಶುಲ್ಕ ಕಡಿತವಾಗಿದೆ. ಹೀಗಾಗಿ ಹೆಚ್ಚುವರಿ ಶುಲ್ಕವನ್ನು ಮರು ಪಾವತಿ ಮಾಡಲಾಗುವುದು. ಕಡಿಮೆ ಶುಲ್ಕ ಕಡಿತವಾದ ವಿದ್ಯಾರ್ಥಿ ಗಳಿಂದ ಬಾಕಿ ಹಣವಸೂಲಿ ಮಾಡಲಾಗುವುದು' ಎಂದು ಸಿಬಿಎಸ್ಇ ತಿಳಿಸಿದೆ.

'ವಿದ್ಯಾರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಈಗಾಗಲೇ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ಮೌಲ್ಯ ಮಾಪನ ಮಾಡಿದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಒದಗಿಸ ಲಾಗುತ್ತದೆ.' ಎಂದು ಮಂಡಳಿಯು ಹೇಳಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾನ್ಯ ಸಚಿವರಾದ ಶ್ರೀ ಕೆ.ಜೆ. ಜಾರ್ಜ್ ಅವರು

ಭಟ್ಕಳ: 10 ಮಂದಿ ಜಲಸಮಾಧಿ

ಒಂದನೇ ಪುಟದಿಂದ...

'ಚಿಪ್ಪಿಕಲ್ಲು ಆರಿಸಲು ತೆರಳಿದ್ದಾಗ ನೀರಿನ ಹರಿವು ಕಡಿಮೆ ಇತ್ತು. ನದಿ ಮಧ್ಯಕ್ಕೆ ಸಾಗಿದಾಗ ಸಮುದ್ರದ ಉಬ್ಬರದಿಂದ ನೀರು ಒಳ ನುಗ್ಗಿದೆ. ನೀರಿನ ಮಟ್ಟ ಏಕಾಏಕಿ ಹೆಚ್ಚಿ, ಎಲ್ಲರೂ ಮುಳುಗಿದ್ದಾರೆ. ಮೃತರಿಗೆ ಈಜು ಬರುತ್ತಿರಲಿಲ್ಲ. ಹೂಳು ಹೆಚ್ಚಿದ್ದರಿಂದ ಅವರಿಗೆ ಪಾರಾಗಲು ಸಾಧ್ಯವಾಗಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ತಿಳಿಸಿದರು.

'ಸಮುದ್ರ ಉಬ್ಬರದ ಸಾಧ್ಯತೆಯಿಂದ ನದಿಗೆ ಇಳಿಯದಂತೆ ಸ್ಥಳೀಯ ಮೀನುಗಾರರು ಎಚ್ಚರಿಸಿದ್ದರು. ಆದರೆ, ಬೆಳಿಗ್ಗೆ 10 ಗಂಟೆಗೆ ಮೊದಲು ನೀರಿನ ಹರಿವು ತೀರಾ ಕಡಿಮೆ ಇತ್ತು. ಆಗ ನದಿಯ ಮಧ್ಯಭಾಗಕ್ಕೆ ತೆರಳಿರುವ ಸಾಧ್ಯತೆ ಇದೆ. ಘಟನೆ ನಡೆದ ಸ್ಥಳದಿಂದ ಕೇವಲ ಒಂದು ಕಿ.ಮೀ ಅಂತರದಲ್ಲಿಯೇ ಅರಬ್ಬಿ ಸಮುದ್ರ ಇದ್ದು, ಅದರಿಂದ ಉಬ್ಬರದ ಸಮಯದಲ್ಲಿ ಬಹುಬೇಗನೆ ನೀರು ನದಿಗೆ ಬಂದಿದೆ. ಚಿಪ್ಪಿಕಲ್ಲು ಆರಿಸಲು ನದಿಗೆ ಇಳಿದಿದ್ದವರು ಪಾರಾಗಲು ಪರಸ್ಪರ ಕೈ ಹಿಡಿದು ಸಾಗಿರುವ ಶಂಕೆ ಇದೆ. ಗಾಬರಿಗೊಂಡು ಕೈ ಎಳೆದು ಕೊಂಡಿದ್ದರಿಂದ ನಿಯಂತ್ರಣ ತಪ್ಪಿ ಮುಳುಗಿರಬಹುದು' ಎಂದು ಅಳ್ವೆಕೋಡಿ ಗ್ರಾಮಸ್ಥರು ಹೇಳಿದರು.

'ದ್ವೇಷ ಭಾಷಣ': ಕೇಂದ್ರ ಅಡ್ಡಿ

ಒಂದನೇ ಪುಟದಿಂದ...

ಈ ಪತ್ರವನ್ನು ಉಲ್ಲೇಖಿಸಿ ರಾಜ್ಯ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯ ಕಾರ್ಯ ದರ್ಶಿಗೆ ಮೇ 12ರಂದು ಪತ್ರ ಬರೆದಿರುವ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಕಾನೂನು ವಿಭಾಗ, 'ಪ್ರಸ್ತಾಪಿತ ಮಸೂದೆಯ ಕುರಿತಂತೆ ಮುಂದಿನ ಪ್ರಕ್ರಿಯೆ ಕೈಗೊಳ್ಳಲು, ಪತ್ರದಲ್ಲಿರುವ ಅಂಶಗಳ ಕುರಿತಂತೆ ಸ್ಪಷ್ಟೀಕರಣ ನೀಡಬೇಕು' ಎಂದು ತಿಳಿಸಿದೆ.

ಇದೀಗ, ಸರ್ಕಾರದ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಇದೇ 20ರಂದು ಪತ್ರ ಬರೆದಿರುವ ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್, ಕೇಂದ್ರ ಗೃಹ ಸಚಿವಾಲಯವು ಮಸೂದೆಯ ಕುರಿತಂತೆ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಸ್ಪಷ್ಟೀಕರಣ ನೀಡುವಂತೆ ಮನವಿ ಮಾಡಿದ್ದಾರೆ.

'ದ್ವೇಷ ಅಪರಾಧಗಳನ್ನು ಸಹಿಸುವುದಿಲ್ಲ' ಎಂದು 2018ರ ಜುಲೈ 17ರಂದು ಹಾಗೂ 'ಕೋಮು ದ್ವೇಷ ಹರಡುವ ಅಥವಾ ದ್ವೇಷ ಭಾಷಣದಲ್ಲಿ ತೊಡಗಿಸಿಕೊಳ್ಳುವ ಯಾವುದೇ ಪ್ರಯತ್ನವನ್ನು ಸಹಿಸುವುದಿಲ್ಲ' ಎಂದು 2025ರ ಮೇ 5ರಂದು ಪ್ರತ್ಯೇಕ ತೀರ್ಪುಗಳಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿತ್ತು. ಈ ತೀರ್ಪುಗಳನ್ನು ಪರಿಗಣಿಸಿ ರಾಜ್ಯ ಸರ್ಕಾರ, ಈ ಮಸೂದೆಯನ್ನು ರೂಪಿಸಿ ಅಂಕಿತಕ್ಕೆ ರಾಜ್ಯಪಾಲರಿಗೆ ಕಳುಹಿಸಿತ್ತು.

ಆದರೆ, ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ನೀಡಿದ್ದ ಕೆಲವು ತೀರ್ಪುಗಳನ್ನು ಉಲ್ಲೇಖಿಸಿ ಮತ್ತು ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾಪ್ರಭುತ್ವದ ಚರ್ಚೆಯ ಮೇಲೆ ತೀವ್ರ ನಕಾರಾತ್ಮಕ ಪರಿಣಾಮ ಉಂಟು ಮಾಡುವ ಸಾಧ್ಯತೆಯ ಆತಂಕ ವ್ಯಕ್ತಪಡಿಸಿ ಮಸೂದೆಯನ್ನು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದ ರಾಜ್ಯಪಾಲರು, ರಾಷ್ಟ್ರಪತಿಯ ವಿವೇಚನೆಗೆ ಕಾಯ್ದಿರಿಸಿದ್ದರು. ರಾಷ್ಟ್ರಪತಿಯ ಅಂಕಿತಕ್ಕಾಗಿ ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿಗೆ (ನ್ಯಾಯಾಂಗ) ಫೆ. 4ರಂದು ರವಾನಿಸಲಾಗಿತ್ತು' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ರಾಜ್ಯಪಾಲರ ಆಕ್ಷೇಪವೇನು?: ಮಸೂದೆಗೆ ಅಂಕಿತ ಹಾಕದೆ ಸರ್ಕಾರಕ್ಕೆ ವಾಪಸ್ ಮಾಡಿದ್ದ ರಾಜ್ಯಪಾಲರು, 29 ಕಾರಣಗಳನ್ನು ನೀಡಿದ್ದರು. ಮಸೂದೆ ಯಲ್ಲಿ ದ್ವೇಷ ಭಾಷಣ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ ಎಂದಿ ದ್ದರು. ಇದರಿಂದಾಗಿ ಜಾತಿ, ಧರ್ಮ, ಜನಾಂಗದ ವ್ಯಕ್ತಿಗಳ ಮೇಲೆ ಪೂರ್ವಗ್ರಹದಿಂದ ಕ್ರಮ ಆಗುವ ಸಾಧ್ಯತೆ ಇದೆ. ಕೆಲವೊಂದು ಅಂಶಗಳು ಸಂವಿಧಾನಾತ್ಮಕವಾಗಿ ಸಂರಕ್ಷಿತ ಪ್ರಜಾಪ್ರಭುತ್ವದ ಚರ್ಚೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಆಗುವ ಸಾಧ್ಯತೆ ಇದೆ. ಮಸೂದೆ ಕಾನೂನಾದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬ ಮೂಲಭೂತ ಹಕ್ಕನ್ನು ಕಸಿಯುವ ಸಾಧ್ಯತೆ ಇದೆ. ಆನ್‌ಲೈನ್ ವಿಷಯಗಳನ್ನು ನಿಯಂತ್ರಿಸುವ ಹಾಗೂ ಪೊಲೀಸ್ ಬಲ ಬಳಸಿ ಕಾನೂನು ದುರುಪ ಯೋಗಪಡಿಸುವ ಸಾಧ್ಯತೆ ಇದೆ. ದ್ವೇಷ ಭಾಷಣ ನಿಯಂತ್ರಣಕ್ಕೆ ಈಗಾಗಲೇ ಹಲವು ಕಾನೂನುಗಳಿವೆ. ಹೀಗಾಗಿ, ಈ ಮಸೂದೆಯ ಅಗತ್ಯವೇನಿದೆ? ಬೌದ್ಧಿಕ ಚಿಂತನೆ ಹಾಗೂ ಸ್ವತಂತ್ರ ಅಭಿವ್ಯಕ್ತಿಗೆ ಇಂತಹ ಮಸೂದೆಯಿಂದ ಅಡ್ಡಿ ಯಾಗುವ ಸಾಧ್ಯತೆ ಇದೆ' ಎಂದೂ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದರು ಎಂದೂ ಮೂಲಗಳು ಹೇಳಿವೆ.

ಕೇಳ್ಕರ್ ನೇಮಕ: ಬಿಜೆಪಿ, ಎಡಪಕ್ಷ ವಿರೋಧ



ರತನ್ ಯು. ಕೇಳ್ಕರ್

ತಿರುವನಂತಪುರ (ಪಿಟಿಐ): ಕೇರಳಂ ಮುಖ್ಯಮಂತ್ರಿ ವಿ.ಡಿ ಸತೀಶನ್ ಅವರ ಕಾರ್ಯದರ್ಶಿಯಾಗಿ ಹಿರಿಯ ಐಎಎಸ್ ಅಧಿಕಾರಿ ರತನ್ ಯು. ಕೇಳ್ಕರ್ ಅವರು ಭಾನುವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಈ ವಿಚಾರವಾಗಿ ಸಿಪಿಎಂ, ಸಿಪಿಐ ಮತ್ತು ಬಿಜೆಪಿ ವಾಗ್ದಾಳಿ ನಡೆಸಿವೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿಯಾಗಿದ್ದ ಕೇಳ್ಕರ್ ಅವರನ್ನು ಉನ್ನತ ಹುದ್ದೆಗೆ ನೇಮಕ ಮಾಡಿರುವುದಕ್ಕೆ ವಿಪಕ್ಷಗಳು ಸರ್ಕಾರವನ್ನು ಟೀಕಿಸಿವೆ.

ಕೇಳ್ಕರ್ ವರ್ಗಾವಣೆಯಾದ ಮರುದಿನವೇ ಮುಖ್ಯಮಂತ್ರಿ ಅವರ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿರುವ ಚಿತ್ರಗಳನ್ನು ಮುಖ್ಯಮಂತ್ರಿ ಕಚೇರಿ ಪ್ರಕಟಿಸಿದೆ. ಭಾನುವಾರವಾಗಿದ್ದರೂ, ತಕ್ಷಣವೇ ಅಧಿಕಾರ ವಹಿಸಿಕೊಳ್ಳುವಂತೆ ಸತೀಶನ್ ಸೂಚನೆ ನೀಡಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ.

'ಈ ಬೆಳವಣಿಗೆಯು ಕಾಂಗ್ರೆಸ್‌ನ ಅವಕಾಶವಾದಿ ರಾಜಕಾರಣದ ಭಾಗವಾಗಿದ್ದು, ಈ ಬಗ್ಗೆ ರಾಹುಲ್ ಗಾಂಧಿ ತಕ್ಷಣ ಪ್ರತಿಕ್ರಿಯೆ ನೀಡಬೇಕು' ಎಂದು ಬಿಜೆಪಿ ನಾಯಕ ವಿ.ಮುರಳೀಧರನ್ ಅವರು ಆಗ್ರಹಿಸಿದರು.

'ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ನಡೆಸಿದ್ದಕ್ಕಾಗಿ ಆಯೋಗದಲ್ಲಿದ್ದವರಿಗೆ ಬಹುಮಾನ ನೀಡಲಾಗಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದರು. ಹಾಗಾದರೆ ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ದುಷ್ಕೃತ್ಯ ಎಸಗಲು ಸಹಾಯ ಮಾಡಿದ್ದಕ್ಕಾಗಿ ಕೇಳ್ಕರ್ ಅವರ ನೇಮಕಾತಿ ನಡೆದಿದೆಯೇ' ಎಂದು ಪ್ರಶ್ನಿಸಿದರು.

'ಬಿಜೆಪಿ ಆಡಳಿತವಿರುವ ಪಶ್ಚಿಮ ಬಂಗಾಳದಲ್ಲಿ ಇಂಥ ನೇಮಕಾತಿಯನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಟುವಾಗಿ ಟೀಕಿಸಿದ್ದರು. ಆದರೆ ಕೇರಳದಲ್ಲೂ ಇದು ನಡೆದಾಗ, ಕೆ.ಸಿ ವೇಣುಗೋಪಾಲ್ ಅವರು 'ಅದು ಅಧಿಕಾರದಲ್ಲಿರುವವರ ಜವಾಬ್ದಾರಿ' ಎಂದು ಹೇಳುತ್ತಾರೆ. ಕಾಂಗ್ರೆಸ್ ದ್ವಿಮುಖ ನಿಲುವನ್ನು ಇದು ಸ್ಪಷ್ಟಪಡಿಸುತ್ತದೆ' ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಎಂ.ವಿ ಗೋವಿಂದನ್ ಅವರು ಟೀಕಿಸಿದ್ದಾರೆ.

'ಒಳಜಗಳ, ಭ್ರಮೆ ಬಿಟ್ಟು ಕೆಲಸ ಮಾಡಿ'

ಒಂದನೇ ಪುಟದಿಂದ...

'ರಾಜ್ಯ ಸರ್ಕಾರದ ವಿರುದ್ಧ ಬೀದಿಗಿಳಿದು ಎಷ್ಟು ಹೋರಾಟ ನಡೆಸಿದ್ದೀರಿ? ಎಷ್ಟು ಹೋರಾಟಗಳನ್ನು ತಾರ್ಕಿತ ಅಂತ್ಯಮುಟ್ಟಿಸಿದ್ದೀರಿ? ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಗೆದ್ದರೆ ಸಾಕೇ? ಪಕ್ಷವನ್ನು ಗೆಲ್ಲಿಸಲು ಏನು ಮಾಡಿದ್ದೀರಿ? ರಾಜ್ಯದಲ್ಲಿ ಬಿಜೆಪಿ ಈವರೆಗೆ ಎರಡು ಬಾರಿ ಸರ್ಕಾರ ರಚಿಸಿದರೂ, ಸ್ವಂತ ಬಲದ ಸ್ವತಂತ್ರ ಸರ್ಕಾರವಾಗಿರಲಿಲ್ಲ. ಸಂಘಟನೆ ಸರಿಯಾಗಿ ಇರದೇ ಇದ್ದರೆ ಮುಂದೆಯೂ ಹೀಗೇ ಆಗುತ್ತದೆ' ಎಂದು ಎಚ್ಚರಿಕೆ ನೀಡಿದರು.

'ತಮಿಳುನಾಡಿನಲ್ಲಿ ಡಿಎಂಕೆ ವಿರುದ್ಧ ಆಡಳಿತ ವಿರೋಧಿ ಅಲೆ ಇತ್ತು. ಎಐಎಡಿಎಂಕೆ ಸುಲಭವಾಗಿ ಗೆಲ್ಲಲಿದೆ ಎಂದು ಎಣಿಸಲಾಗಿತ್ತು. ಆದರೆ ಟಿವಿಕೆ ಸ್ಪರ್ಧೆಗೆ ಇಳಿದ ಕಾರಣ ಚುನಾವಣಾ ಕಣವೇ ಬದಲಾಗಿ ಹೋಯಿತು. ಅಲ್ಲಿ ಎಐಎಡಿಎಂಕೆ ಮಾಡಿದ ತಪ್ಪನ್ನು ನೀವು ಕರ್ನಾಟಕದಲ್ಲಿ ಮಾಡಬಾರದು. ಎಲ್ಲರೂ ಬೀದಿಗಿಳಿದು ಹೋರಾಡಬೇಕು. ಪಕ್ಷದಲ್ಲಿ ಎಲ್ಲ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜನರ ಬಳಿಗೆ ಹೋಗಬೇಕು' ಎಂದು ಸೂಚಿಸಿದರು.

'ರಾಜ್ಯ ಕಾಂಗ್ರೆಸ್ ಘಟಕವು ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಲೇ ಅಧಿಕಾರಕ್ಕೆ ಬಂದು, ಈಗ ತಾನೇ ಅತೀವ ಭ್ರಷ್ಟಾಚಾರದಲ್ಲಿ ತೊಡಗಿದೆ. ಮುಖ್ಯಮಂತ್ರಿ ಆದಿಯಾಗಿ ಎಲ್ಲ ಸಚಿವರ ವಿರುದ್ಧವೂ ಭ್ರಷ್ಟಾಚಾರದ ಆರೋಪಗಳಿವೆ. ಜತೆಗೆ, ಜನರಿಗೆ ಕೊಟ್ಟ ಮಾತನ್ನು ಕಾಂಗ್ರೆಸ್ ಮರೆತಿದೆ. ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಇಷ್ಟು ಸಾಕು ಎಂದು ಭಾವಿಸಿದರೆ, ಬಿಜೆಪಿ ವಿರೋಧ ಪಕ್ಷದಲ್ಲಿಯೇ ಇರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು' ಎಂದು ಮೂಲಗಳು ಹೇಳಿವೆ.

ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ವಿವಿಧ ಮೋರ್ಚಾಗಳ ಅಧ್ಯಕ್ಷರು, ಜಿಲ್ಲಾ ಘಟಕದ ಅಧ್ಯಕ್ಷರು ಸಭೆಯಲ್ಲಿ ಭಾಗಿಯಾಗಿದ್ದರು. ಭಿನ್ನರ ಬಣದಲ್ಲಿ ಗುರುತಿಸಿಕೊಂಡಿದ್ದ ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ.ಹರೀಶ್ ಅವರು ಹಾಜರಾಗಿದ್ದರು.

'ಚುನಾವಣೆಗೆ ಸಿದ್ಧರಾಗಿ'

'ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷವಿದೆ. ಆದರೆ ಅದಕ್ಕೆ ಪೂರ್ವ ತಯಾರಿ ಮಾಡಿಕೊಳ್ಳಲು ನಮ್ಮ ಎದುರು ಹಲವು ಅವಕಾಶಗಳಿವೆ. ಹೀಗಾಗಿ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಿ ಎಂದು ನಿತಿನ್ ಅವರು ಪಕ್ಷದ ನಾಯಕರಿಗೆ ಸೂಚಿಸಿದರು' ಎಂದು ಮೂಲಗಳು ತಿಳಿಸಿವೆ.


'ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಬೇಕಿದೆ. ಜಿಬಿಎ ಪಾಲಿಕೆಗಳಿಗೆ ಮತ್ತು ವಿಧಾನ ಪರಿಷತ್ತಿನ ಸ್ಥಾನಗಳಿಗೆ ಚುನಾವಣೆ ಎದುರಿಸಬೇಕಿದೆ. ಈ ಎಲ್ಲ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಿದರೆ, ವಿಧಾನಸಭೆ ಚುನಾವಣೆ ಹೊತ್ತಿಗೆ ಆತ್ಮವಿಶ್ವಾಸ ಹೆಚ್ಚಾಗಲಿದೆ' ಎಂದು ತಿಳಿ ಹೇಳಿದ್ದಾರೆ.

'ಎಲ್ಲ ಜಿಲ್ಲಾ ಘಟಕಗಳ ಅಧ್ಯಕ್ಷರೂ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಪಕ್ಷವನ್ನು ತಳಮಟ್ಟದಿಂದ ಇನ್ನಷ್ಟು ಗಟ್ಟಿಗೊಳಿಸಬೇಕು. ರಾಜ್ಯ ಘಟಕದ ನಾಯಕರು ಪಕ್ಷ ಸಂಘಟನೆ ಕಾರ್ಯದಲ್ಲಿ ತೊಡಗಿಕೊಳ್ಳ ಬೇಕು. ನಾನು ಇನ್ನೂ ಮೂರು ಬಾರಿ ರಾಜ್ಯಕ್ಕೆ ಬರುವೆ. ಪಶ್ಚಿಮ ಬಂಗಾಳದಲ್ಲಿ ಗೆದ್ದ ಮಾದರಿಯಲ್ಲಿ ಇಲ್ಲೂ ಗೆಲ್ಲಬೇಕು ಎಂದು ತಿಳಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಾಲು ಸಾಲು ಕಾರ್ಯಕ್ರಮ

- ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಮನೆಯಲ್ಲಿ ಬೆಳಿಗ್ಗೆ ನಿತಿನ್ ನವೀನ್ ಅವರ ಉಪಾಹಾರ ಸಭೆ
- ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಾಲಯಕ್ಕೆ ಭೇಟಿ
- ಲೋಕಭವನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋಟ್ ಅವರ ಭೇಟಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ದಯೆ ಮತ್ತು ಕರುಣೆಯ ಮುಂದೆ ಅತಿ ಬುದ್ಧಿವಂತಿಕೆ ನಿಲ್ಲಲಾರದು.

–ರೂಸೊ

ಸಂಪಾದಕೀಯ

ಯುವಜನರ ಆನ್‌ಲೈನ್ ಸಂಚಲನ ಸಮಕಾಲೀನ ರಾಜಕಾರಣಕ್ಕೆ ಎಚ್ಚರಿಕೆ

ದೇಶದಲ್ಲಿ ಹಠಾತ್ತನೆ ಹೊರಹೊಮ್ಮಿರುವ 'ಆನ್‌ಲೈನ್ ಗಣತಂತ್ರ'ದ ರಾಷ್ಟ್ರೀಯ ಪ್ರಾಣಿಯಾಗಿ ಜಿರಲೆ ಹೊರಹೊಮ್ಮಿದೆ. ದೇಶದ ಅಸ್ಮಿತೆ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪ್ರತಿನಿಧಿಸುವ ಹುಲಿ, ನವಿಲು ಸೇರಿದಂತೆ ವಿಶಿಷ್ಟ ವರ್ಚಸ್ಸು ಹಾಗೂ ಘನತೆ ಹೊಂದಿರುವ ಪ್ರಾಣಿಗಳನ್ನು ಜಿರಲೆ ಹಿಂದಿಕ್ಕಿದೆ. ದೇಶದ ಸುಪ್ರೀಂ ಕೋರ್ಟ್ ನ್ಯಾಯ ಮೂರ್ತಿ ವಿವೇಕದ ಅತ್ಯುನ್ನತ ಪೀಠದಿಂದ ಬಂದ ಒಂದು ಟೀಕೆಯು ವಿಶಿಷ್ಟ ಸಂಚಲನವನ್ನು ಹುಟ್ಟುಹಾಕಿದೆ. ಆ ಪೀಠದ ಒಂದು ವಿಶ್ಲೇಷಣೆಯು ದೇಶದ ದೊಡ್ಡ ಸಂಖ್ಯೆಯ ನಾಗರಿಕರ ಸಂಚಲನಕ್ಕೆ ಕಾರಣವಾಗಿರುವುದು ಹಾಗೂ ಒಂದು ಕೀಟದ ಹೆಸರಿನಲ್ಲಿ ಅವರು ತಮ್ಮನ್ನು ಗುರುತಿಸಿಕೊಳ್ಳುತ್ತಿರುವುದು ಅಚ್ಚರಿಯ ವಿದ್ಯಮಾನವಾಗಿದೆ. ತನ್ನ ರಾಜಕಾರಣದ ಕೇಂದ್ರದಲ್ಲಿ ಇರುವವನ್ನು ಹೊಂದಿರುವ ವಿಶ್ವದ ಬಹು ದೊಡ್ಡ ಸಂಘಟನೆಗಿಂತಲೂ ಜಿರಲೆಯ ಹೆಸರಿನ ಸಂಘಟನೆ ಹೆಚ್ಚಿನ ಜನರ ಗಮನವನ್ನು ಸೆಳೆದಿದೆ. ಕಡೆಗಣನೆಗೆ ಒಳಗಾದ ಅಸಂಖ್ಯ ಜನರು ಒಂದು 'ಮೀಮ್'ನಲ್ಲಿ ತಮ್ಮ ಧ್ವನಿಯನ್ನು ಕಂಡುಕೊಂಡಿದ್ದಾರೆ. ತಪ್ಪು ಅಪರಾಧದ್ದಲ್ಲ; ಜಿರಲೆ ಅಥವಾ ಪರಾವಲಂಬಿ ಗುಂಪುಗಳದ್ದೂ ಅಲ್ಲ. ಮುಖ್ಯವಾದ ಮಂದಹಾಸ ಮೂಡಿಸುವಂತಿರುವ ಈ ಪದಗಳನ್ನು ನಿಷೇಧಿಸುವುದು ಇಲ್ಲವೇ ಬಂಧಿಸುವುದು ಸಾಧ್ಯವಿಲ್ಲ, ಇ.ಡಿ.ಯಿಂದಲೂ.

ಕ್ಷುಲ್ಲಕ ಎಂದು ಭಾವಿಸಲಾದ ಜಿರಲೆಗಳನ್ನು ಕಂಡು ಯಾರಾದರೂ ಯಾಕಾಗಿ ಹೆದರಬೇಕು? 'ಕಾಕ್ರೋಚ್ ಜನತಾ ಪಾರ್ಟಿ' ಹೆಸರಿನಲ್ಲಿ ಜಿರಲೆಯನ್ನು ಚಿಹ್ನೆಯಾಗಿಸಿಕೊಂಡಿರುವ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿರ್ಬಂಧಿಸಿರುವುದು ಹಾಸ್ಯಾಸ್ಪದವೂ ಅಪಾಯಕಾರಿ ಬೆಳವಣಿಗೆಯೂ ಆಗಿದೆ. ಆನ್‌ಲೈನ್ ಎನ್ನುವುದು ಏಕಕಾಲದಲ್ಲಿ ವಾಸ್ತವವೂ ಅವಾಸ್ತವವೂ ಆಗಿದೆ. ಅನುಭವ ವೇದ್ಯವಾಗುವ ವಾಸ್ತವ ಸಾಕಷ್ಟಿದ್ದೂ, ನಾವು ನಿರ್ಲಕ್ಷಿಸಬಹುದಾದ ಅವಾಸ್ತವ ಸಂಗತಿಗಳೂ ಆನ್‌ಲೈನ್‌ನಲ್ಲಿ ಸಾಕಷ್ಟಿವೆ. ವಿಚಿತ್ರವಾಗಿಯೂ ತಮಾಷೆಯಾಗಿಯೂ ರೂಪುಗೊಂಡಿರುವ ಪರಿಕಲ್ಪನೆಯನ್ನು ಕಾನೂನಿನ ಮೂಲಕ ಹತ್ತಿಕ್ಕಲು ಪ್ರಯತ್ನಿಸುವುದು ನಗೆಪಾಟಲಿನ ವಿಷಯವೇ ಆಗಿದೆ. ಈ ಪ್ರಯತ್ನ ಅಸಹಿಷ್ಣುತೆ, ದಮನಕಾರಿ ಪ್ರವೃತ್ತಿ ಮತ್ತು ಅವಿವೇಕದ ದಿಕ್ಸೂಚಿ. ಸರ್ಕಾರ ಸಾಗುತ್ತಿರುವ ಅಪಾಯದ ಸೂಚನೆಯಾಗಿದೆ. ತಕ್ಷಣದ ಪ್ರತಿಕ್ರಿಯೆಯಾಗಿ ಯುವಜನರ ಹೆಚ್ಚಿನ ಸಂಖ್ಯೆಯಲ್ಲಿರುವ ಸಮುದಾಯದ ಕಾಳಜಿಗಳು ಹಾಗೂ ಆತಂಕಕ್ಕೆ ದಿಢೀರ್ ಸಂಕೇತದ ರೂಪದಲ್ಲಿ ಜಿರಲೆ ಒದಗಿ ಬಂದಿದೆ. ಆದರೆ, ಈ ಸಂಕೇತ ಸರ್ಕಾರವನ್ನು ಬುಡಮೇಲು ಮಾಡಲು ಹೊರಟಿರುವ 'ಜಿರಲೆ'ಯಲ್ಲ ಎಂದು ಯೋಚಿಸುವುದು ಅತಿರೇಕದ ಪ್ರತಿಕ್ರಿಯೆ ಆಗುತ್ತದೆ. ಮೀಮ್ ಅಭಿವ್ಯಕ್ತಿಯನ್ನು ರಾಷ್ಟ್ರೀಯ ಸಾರ್ವಭೌಮತೆಗೆ ಎದುರಾದ ಆತಂಕ ಎಂದು ಭಾವಿಸುವ ಸಂಸ್ಥೆಗಳು ತಮ್ಮ ಘನತೆಯನ್ನು ತಾವೇ ಕುಗ್ಗಿಸಿಕೊಂಡಿವೆ. ವಿನೋದ ಅಥವಾ ವ್ಯಂಗ್ಯವನ್ನು 'ರಾಷ್ಟ್ರವಿರೋಧಿ' ಕೃತ್ಯ ಎಂದು ಸರ್ಕಾರ ಭಾವಿಸುವುದು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ನಡೆಯಾಗಿದೆ.



ಜಿರಲೆಯ ಸಂಕೇತದಲ್ಲಿ ಕಾಣಿಸಿಕೊಂಡಿರುವ ಆನ್‌ಲೈನ್ ಸಮೂಹದ ಅಭಿವ್ಯಕ್ತಿಯು ವರ್ತಮಾನದ ರಾಜಕೀಯಕ್ಕೆ ಯುವಜನರ ಪ್ರತಿರೋಧದ ಸಂಕೇತವಾಗಿದೆ; ಭವಿಷ್ಯಕ್ಕೆ ಅನೇಕ ಸಾಧ್ಯತೆಗಳಿವೆ ಎನ್ನುವುದನ್ನು ಹೇಳುವಂತಿದೆ.

ಕೋಟ್ಯಂತರ ಜನರ ಗಮನಸೆಳೆದಿರುವ 'ಕಾಕ್ರೋಚ್ ಜನತಾ ಪಾರ್ಟಿ'ಯನ್ನು ಒಂದು ಪಕ್ಷ ಎಂದು ಕರೆಯುವುದು ಸಾಧ್ಯವಿಲ್ಲ. ಹಾಗೆಯೇ ಒಂದು ಆಂದೋಲನದ ರೂಪದಲ್ಲಿಯೂ ಅದನ್ನು ನೋಡುವುದು ಸಾಧ್ಯವಿಲ್ಲ. ಈ ಬೆಳವಣಿಗೆ ವರ್ತಮಾನದ ರಾಜಕಾರಣವನ್ನು ವಿರೋಧಿಸುವ ಒಂದು ಮನಸ್ಥಿತಿ ಆಗಿರಬಹುದು ಹಾಗೆಯೇ ಈ ವಿರೋಧ ಆವೇಶ ಪಕ್ಷಕ್ಕೆ ಸೀಮಿತವಾದುದೂ ಅಲ್ಲ. ಅಸ್ವಸ್ಥತೆ ಮತ್ತು ಆಕ್ರೋಶವೂ ಆಗಿರಬಹುದಾದ, ಯಾವುದೇ ಸಿದ್ಧಾಂತಕ್ಕೆ ಬದ್ಧತೆಯಿಲ್ಲದ, ಮೀಮ್ ಸಂಸ್ಕೃತಿ ಪ್ರಧಾನವಾದ ಈ ಅಭಿವ್ಯಕ್ತಿಯು ವ್ಯವಸ್ಥೆಯನ್ನು ವಿರೋಧಿಸುವ ಸ್ವಭಾವ ಹೊಂದಿದೆ. ಸರ್ಕಾರದ ವಿರುದ್ಧ ಆಂದೋಲನ ರೂಪಿಸುವ ಇಂಥ ಬೆಳವಣಿಗೆಗಳನ್ನು ದೇಶ ಈ ಮೊದಲೂ ಕಂಡಿದೆ. ಜಯಪ್ರಕಾಶ್ ನಾರಾಯಣ್ ಹಾಗೂ ಅಣ್ಣಾ ಹಜಾರೆ ಅವರ ಚಳವಳಿಗಳಿಗೆ ಇಂಥ ಮನೋಭಾವದ ಚೈತನ್ಯ ತುಂಬಿತ್ತು. ಆದರೆ, ಆ ಆಂದೋಲನಗಳು ನಾಯಕತ್ವ, ಸಂಘಟನೆ ಹಾಗೂ ಗುರಿ ಹೊಂದಿದ್ದುವು. ಪ್ರಸ್ತುತ ಆನ್‌ಲೈನ್ ಸಮೂಹವು ವ್ಯಾಕರಣವಿಲ್ಲದ ಘೋಷಣೆಗಳನ್ನು, ಸ್ಪಷ್ಟ ವ್ಯಾಖ್ಯಾನವಿಲ್ಲದ ಪರಿಕಲ್ಪನೆಗಳನ್ನು ಹೊಂದಿದೆ. ಇಂಥ ಗುಂಪನ್ನು ಹತ್ತಿಕ್ಕಲು ಪ್ರಯತ್ನಿಸುವುದು ಅದರ ಅಸ್ತಿತ್ವವನ್ನು ಸಮರ್ಥಿಸುವ ಹಾಗೂ ಆ ಗುಂಪಿನ ಮಾನ್ಯತೆಯನ್ನು ದೃಢಗೊಳಿಸುವ ಪ್ರಯತ್ನವಾಗಿದೆ. ಪರಿಕಲ್ಪನೆಗಳನ್ನು ಸಂಪೂರ್ಣವಾಗಿ ನಾಶ ಮಾಡುವುದು ಕಷ್ಟ. ಅವು ಭೂಗತವಾಗಿ ಪ್ರವಹಿಸುತ್ತವೆ, ರೂಪಾಂತರಗೊಳ್ಳುತ್ತವೆ ಹಾಗೂ ಜಿರಲೆಗಳಂತೆ ಬದುಕುಳಿಯುತ್ತವೆ. ಇತಿಹಾಸಕ್ಕೆ ಜೋತುಬಿದ್ದವರಿಗೆ ಹಾಗೂ ಭವಿಷ್ಯವೆನ್ನುವುದು ಗತದ ಮರುಕಳಿಕೆ ಮಾತ್ರ ಎಂದು ನಂಬುವವರಿಗೆ ಈ 'ಕೀಟ ದಂಗೆ'ಯು ಒಂದು ಎಚ್ಚರಿಕೆಯಾಗಿದೆ. ಬೇರೆ ಭವಿಷ್ಯಗಳೂ, ಸಾಧ್ಯತೆಗಳೂ, ಪರಿಕಲ್ಪನೆಗಳೂ ಇವೆ ಎನ್ನುವುದನ್ನು ಈ ವಿದ್ಯಮಾನ ಸೂಚಿಸುವಂತಿದೆ.

ಶಾಲೆ ಕಲುಷಿತ ಬೇಡ



ಶಾಲೆಯಲ್ಲಿ ಮಕ್ಕಳ ಹಾಜರಿ ತೆಗೆದುಕೊಳ್ಳುವ ಕರ್ತವ್ಯ ಶಿಕ್ಷಕರದು. ತರಗತಿಗೆ ಹಾಜರಾದ ಮಕ್ಕಳು 'ಎಸ್ ಸರ್', 'ಬಂದಿದ್ದೇನೆ ಗುರುಗಳೇ', 'ಪ್ರೆಸೆಂಟ್ ಸರ್' ಎಂದು ಹೇಳಬೇಕಿರುವುದು ಶಿಕ್ಷಕರಿಗೇ ಹೊರತು ಬೇರೆ ಯಾರಿಗೂ ಅಲ್ಲ. ಇಂತಹ ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಪ್ರಕ್ರಿಯೆಯನ್ನು ಕಲುಷಿತಗೊಳಿಸಬಾರದು.

ರವಿರಾಜ್ ಸಾಗರ್, ಕಲಾವಿದ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಅಪರಾಧ ಮುಕ್ತ ಸಮಾಜ ನಿರ್ಮಿಸುವ ಬದಲು 'ಅಪರಾಧಿಗಳಿಗೆ ಕೇಸ್ ಮುಕ್ತ ಅಭಯ' ನೀಡುವ ಕಾರ್ಯದಲ್ಲಿ ರಾಜ್ಯ ಸರ್ಕಾರ ತೊಡಗಿದೆ. ಕನಿಷ್ಠ ಕಾನೂನು ಪ್ರಜ್ಞೆಯನ್ನೂ ಲೆಕ್ಕಿಸದೆ ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಹೊರಟಿರುವ ಸರ್ಕಾರದ ನಡೆ ಅಪಾಯಕಾರಿ.

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 25-5-2001

• ಕೆಪಿಎಸ್‌ಸಿ: ಗ್ರಾಮೀಣ ಕೃಪಾಂಕ ನೀಡದೇ ನೇಮಕಾತಿ

ಬೆಂಗಳೂರು, ಮೇ 24– ಗೆಜೆಟೆಡ್ 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳು, 'ಸಿ' ದರ್ಜೆ ಹಾಗೂ ಸಿಬ್ಬಂದಿ ವರ್ಗದ ಒಟ್ಟು 2,626 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿದ್ದ ಲಿಖಿತ, ಮೌಖಿಕ ಪರೀಕ್ಷೆಗಳ ಪ್ರಕ್ರಿಯೆಯನ್ನು ಗ್ರಾಮೀಣ ಕೃಪಾಂಕ ನೀಡದೇ ಮುಂದುವರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಹುದ್ದೆಗಳಿಗೆ ನಡೆಯುತ್ತಿದ್ದ ನೇಮಕಾತಿ ಪ್ರಕ್ರಿಯೆಗೆ ಸರ್ಕಾರ ನೀಡಿರುವ ತಡೆಯಾಜ್ಞೆಯನ್ನು ಹಿಂತೆಗೆದುಕೊಂಡು ಈ ಪ್ರಕ್ರಿಯೆ ಮುಗಿಯುವವರೆಗೆ ಮಾತ್ರ ಕರ್ನಾಟಕ ಮೀಸಲಾತಿ ಕಾಯ್ದೆ–2000 ಅನ್ವಯಿಸಬಾರದು ಎಂದು ಇತ್ತೀಚೆಗೆ ನಡೆದ ಸರ್ವ ಪಕ್ಷಗಳ ಸಭೆ ತೀರ್ಮಾನ ತೆಗೆದುಕೊಂಡ ಹಿನ್ನೆಲೆಯಲ್ಲಿ ಸಚಿವ ಸಂಪುಟದ ಸಭೆ ಈ ನಿರ್ಣಯ ತಗೆದುಕೊಂಡಿದೆ.

ಸರ್ಕಾರ ಎಲ್ಲ ವರ್ಗಗಳ ಹಾಗೂ ದರ್ಜೆಗಳ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಾಗ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಶೇ 10ರಷ್ಟು ಕೃಪಾಂಕ ನೀಡುತ್ತಿದ್ದುದು ಸಂವಿಧಾನಬಾಹಿರ ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಈ ನೇಮಕಾತಿ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿತ್ತು.

75 ವರ್ಷಗಳ ಹಿಂದೆ

ಶುಕ್ರವಾರ, 25-5-1951

• ಮತ್ತೊಂದು ಯುದ್ಧದಿಂದ ವಿಶ್ವದಲ್ಲಿ ಅಂಧಕಾರ

ವಾಷಿಂಗ್ಟನ್, ಮೇ 24– ಮತ್ತೊಂದು ವಿಶ್ವಯುದ್ಧವಾದರೆ ಪ್ರಪಂಚವು ಅಂಧಕಾರಯುಗಕ್ಕೆ ಹಿಂತಿರುಗುವುದೆಂದು ಇಂದು ಅಮೆರಿಕ ಅಧ್ಯಕ್ಷ ಟ್ರೂಮನ್ ಅವರು ತಿಳಿಸಿದರು.

ಅಂಥ ಯುದ್ಧವು ವಿಶ್ವದ ಎಲ್ಲವನ್ನೂ ನಾಶ ಮಾಡುವುದೆಂದೂ, ವಿಶ್ವಶಾಂತಿಗಿಂತ ತಮಗೆ ಪ್ರಿಯವಾದುದಾವುದೂ ಇಲ್ಲವೆಂದೂ ಅಮೆರಿಕ ಅಧ್ಯಕ್ಷರು ಸ್ಪಷ್ಟಪಡಿಸಿದರು.

ತೃತೀಯ ಯುದ್ಧವು ಸಂಭವಿಸಿದರೆ ಅಮೆರಿಕವು ಹಿಂದಿನ ಯುದ್ಧಗಳಲ್ಲಿದ್ದ ಸ್ಥಿತಿಯಲ್ಲಿ ಇರುವುದಿಲ್ಲವೆಂದೂ ಅಮೆರಿಕ ಸಂಯುಕ್ತ ಸಂಸ್ಥಾನವು ಯುದ್ಧ ಕ್ಷೇತ್ರವಾಗುವುದೆಂದೂ ನುಡಿದರು. ದ್ವಿತೀಯ ಮಹಾಯುದ್ಧದಲ್ಲಿ ಇತರ ರಾಷ್ಟ್ರಗಳು ವಿನಾಶಕ್ಕೆ ಒಳಗಾದಂತೆ ಅಮೆರಿಕವು ನಷ್ಟಪಡಬೇಕಾಗುವುದೆಂದೂ ಅಧ್ಯಕ್ಷರು ಹೇಳಿದರು.

ಪುನರ್ವಸತಿ 'ಅರಣ್ಯನ್ಯಾಯ'ವಲ್ಲ!



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

> ಸಮಾಜದ ಮುಖ್ಯವಾಹಿನಿಯಲ್ಲಿ ಸೇರಬೇಕೆಂದು ಅರಣ್ಯವಾಸಿಗಳು ಬಯಸಿದಲ್ಲಿ, ಅವರ ಇಚ್ಛೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅವರಿಗೆ ಸಮರ್ಪಕ ಪುನರ್ವಸತಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರ ಪ್ರಾಮಾಣಿಕವಾಗಿದ್ದಲ್ಲಿ ಅರಣ್ಯವಾಸಿಗಳಿಗೆ ಸಾಮಾಜಿಕ ನ್ಯಾಯ ದೊರಕುತ್ತದೆ.

ಭಾರತದ ವಿಸ್ತೀರ್ಣದಲ್ಲಿ ಶೇ 4ರಷ್ಟಿರುವ ಸಂರಕ್ಷಿತ ಅರಣ್ಯ ಪ್ರದೇಶವು ದೇಶದ 150 ಕೋಟಿ ಜನರ ಜೀವ-ಜೀವನಕ್ಕೆ ಆಧಾರವಾಗಿದೆ. ಶುದ್ಧ ಗಾಳಿ, ನೀರು, ಆಹಾರಭದ್ರತೆ ಇತ್ಯಾದಿಗಳು ದೊರಕುತ್ತಿವೆ. ಶೇ 3ರಷ್ಟು ಸಂರಕ್ಷಿತ ಪ್ರದೇಶಗಳು ಇವತ್ತು ಅಪಾಯವನ್ನು ಎದುರಿಸುತ್ತಿವೆ. ಭವಿಷ್ಯದ ದೃಷ್ಟಿಯಿಂದ ಇವುಗಳ ಸಂರಕ್ಷಣೆ ಹಾಗೂ ನಿರ್ವಹಣೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಅರಣ್ಯವಾಸಿಗಳ ಪುನರ್ವಸತಿ ಪ್ರಕ್ರಿಯೆಗೆ ವಿಶೇಷ ಮಹತ್ವವಿದೆ.

ಅರಣ್ಯವಾಸಿ ಕುಟುಂಬಗಳು ತಾವಾಗಿಯೇ ಮುಂದೆ ಬಂದು ಅಭಯಾರಣ್ಯ ಅಥವಾ ರಾಷ್ಟ್ರೀಯ ಉದ್ಯಾನದಿಂದ ಹೊರಹೋಗಲು ಇಚ್ಛಿಸಿದರೆ, ಆ ಕುಟುಂಬಗಳನ್ನು ಅವರ ನೆಲೆಯಿಂದ ಹೊರತರುವ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಎರಡು ಕ್ರಮಗಳಿವೆ: ಸ್ವಯಂಪ್ರೇರಿತ ಸ್ಥಳಾಂತರ ಮತ್ತು ಸ್ವಯಂಪ್ರೇರಿತ ಪುನರ್ವಸತಿ. ಸ್ವಯಂಪ್ರೇರಿತ ಸ್ಥಳಾಂತರ ಎಂದರೆ, ಪರಿಹಾರವನ್ನು ನಗದಿನ ರೂಪದಲ್ಲಿ ಪಡೆದು ತಾವಾಗಿಯೇ ನೆಲೆ ಕಂಡುಕೊಳ್ಳುವುದು. ಇದರಲ್ಲೂ ಎರಡು ಆಯ್ಕೆಗಳಿವೆ. ಒಂದನೆಯದು, ಪ್ರತಿ ಕುಟುಂಬಕ್ಕೆ ₹15 ಲಕ್ಷದ ಪ್ಯಾಕೇಜ್. ಈ ಪದ್ಧತಿಯಲ್ಲಿ, 18 ವರ್ಷ ಮೇಲ್ಪಟ್ಟ ಮಕ್ಕಳನ್ನು ಒಂದು ಪ್ರತ್ಯೇಕ ಕುಟುಂಬ ಎಂದು ಪರಿಗಣಿಸಿ ಅವರಿಗೂ ಪ್ರತ್ಯೇಕ ಪ್ಯಾಕೇಜ್ ನೀಡಲಾಗುತ್ತದೆ. ಇದರಿಂದ ಅವಿಭಕ್ತ ಕುಟುಂಬಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಎರಡನೆಯ ವಿಧಾನದಲ್ಲಿ, ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡಿ, ಪ್ಯಾಕೇಜ್ ಮೊತ್ತ ನಿರ್ಧರಿಸಲಾಗುತ್ತದೆ. ಒಂದು ಕುಟುಂಬಕ್ಕೆ ಈಗ ಇರುವ ಜಮೀನಿನ ಮಾರುಕಟ್ಟೆ ಮೌಲ್ಯ ಹೆಚ್ಚಾಗಿದ್ದರೆ, ಆ ಕುಟುಂಬಕ್ಕೆ ನಗದು ಪರಿಹಾರ ನೀಡುವ ಬದಲು, ಆ ಜಮೀನಿಗೆ ತಕ್ಕ ಪರಿಹಾರ ನಿಗದಿ ಮಾಡಿ, ಅವರನ್ನು ಬೇರೆ ಕಡೆ ಸ್ಥಳಾಂತರಿಸುವುದು. ಜಮೀನಿಗೆ ಸರಿಯಾದ ಮೌಲ್ಯ ನಿರ್ಧರಿಸಿ ಸ್ಥಳಾಂತರ ಮಾಡುವ ಕ್ರಮ ಆ ಕುಟುಂಬದ ಸ್ವತ್ತಿಗೆ ನ್ಯಾಯ ಒದಗಿಸುತ್ತದೆ.

ಪುನರ್ವಸತಿಗೊಳ್ಳುವ ಕುಟುಂಬಗಳಿಗೆ ಹೊಸ ಸ್ಥಳದಲ್ಲಿ ಬದುಕು ಕಟ್ಟಿಕೊಳ್ಳಲು ಅಗತ್ಯ ಸೌಲಭ್ಯ ಮತ್ತು ಸಂಪನ್ಮೂಲ ಒದಗಿಸುವುದನ್ನು 'ಪುನರ್ವಸತಿ ಪ್ರಕ್ರಿಯೆ' ಎನ್ನಬಹುದು. ಇಲ್ಲಿಯೂ ಎರಡು ಆಯ್ಕೆಗಳಿವೆ. ಮೊದಲನೆಯದು, ಪುನರ್ವಸತಿಗೊಳ್ಳುವ ಕುಟುಂಬ 'ಜಮೀನು ಬೇಕು' ಎಂದು ಬೇಡಿಕೆ ಇಟ್ಟಲ್ಲಿ, ಅರಣ್ಯೇತರ ಪ್ರದೇಶದಲ್ಲಿ ಸರ್ಕಾರದ ಬಳಿ ಇರುವ ಕಂದಾಯ ಜಮೀನನ್ನು ಗುರ್ತಿಸಿ ಅವರಿಗೆ ಒದಗಿಸುವುದು. ಕುಟುಂಬ ತನ್ನ ಹಿಂದಿನ ಕೃಷಿ ಮತ್ತು ಜೀವನವಿಧಾನಕ್ಕೆ ಅನುಗುಣವಾದ ಭೂ ಒಡೆತನ ಪಡೆಯಬಹುದು. ಎರಡನೆಯ ಆಯ್ಕೆ: ಕಂದಾಯ ಜಮೀನು ಲಭ್ಯವಿಲ್ಲದ ಸಂದರ್ಭದಲ್ಲಿ, ಅಭಯಾರಣ್ಯದ ಅಂಚಿನಲ್ಲಿರುವ ಕಡಿಮೆ ಮಹತ್ವದ ಅರಣ್ಯ ಭೂಮಿಯನ್ನು ಅರಣ್ಯ ಸ್ಥಾನಮಾನದಿಂದ ರದ್ದು ಮಾಡಿ ಸ್ಥಳಾಂತರಗೊಳ್ಳುವ ಕುಟುಂಬಗಳಿಗೆ ನೀಡುವುದು. ಈ ಕ್ರಮ ಕೈಗೊಳ್ಳುವ ಮೊದಲು, ಆ ಭೂಮಿ ವನ್ಯಜೀವಿ ಆವಾಸಕ್ಕೆ ನಿರ್ಣಾಯಕವಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನಾಡು ಮತ್ತು ಕಾಡಿನ ನಡುವೆ ಸಮನ್ವಯ ಸಾಧಿಸುವ ಪ್ರಕ್ರಿಯೆಯು ಬಲವಂತದಿಂದ ಕೂಡಿರಬಾರದು.

ಭಾರತದ ಅರಣ್ಯ ಸಂರಕ್ಷಣೆಯ ಕಾನೂನು, ವನ್ಯಜೀವಿ ಸಂರಕ್ಷಣೆ ಮತ್ತು ಸ್ವಇಚ್ಛೆಯಿಂದ ಸ್ಥಳಾಂತರಗೊಳ್ಳುವ ಸಮುದಾಯಗಳ ಭೂ ಒಡೆತನ, ಈ ಮೂರು ವಿಷಯಗಳಿಗೆ ಸಂಬಂಧಿಸಿದಂತೆ 2002ರಿಂದ 2019ರವರೆಗಿನ ಹದಿನೇಳು ವರ್ಷಗಳಲ್ಲಿ ಸುಪ್ರೀಂ ಕೋರ್ಟ್, ಕೇಂದ್ರ ಸಶಕ್ತ ಸಮಿತಿ (ಸಿಇಸಿ), ಪರಿಸರ ಮತ್ತು ಅರಣ್ಯ ಸಚಿವಾಲಯ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಾಲ್ಕು ಸ್ವತಂತ್ರ ಸಂಸ್ಥೆಗಳ ನಡುವೆ ಐತಿಹಾಸಿಕ ಎನ್ನಬಹುದಾದ ಅನೇಕ ಪ್ರಕ್ರಿಯೆಗಳು ನಡೆದಿವೆ.

ಮಹಾರಾಷ್ಟ್ರದ ಚಂದ್ರಪುರ ಜಿಲ್ಲೆಯ ಅಂಧಾರಿ ವನ್ಯಜೀವಿ ಅಭಯಾರಣ್ಯದೊಳಗೆ ಮೂರು ಗ್ರಾಮಗಳ ನಿವಾಸಿಗಳನ್ನು ಸ್ವಇಚ್ಛೆಗೆ ಅನುಗುಣವಾಗಿ ಸ್ಥಳಾಂತರಿಸಲು, 550 ಹೆಕ್ಟೇರ್ ಅರಣ್ಯ ಬಳಕೆಗೆ ಕೇಂದ್ರ ಸರ್ಕಾರ 2002ರ ಜನವರಿಯಲ್ಲಿ ನೀಡಿದ ಷರತ್ತುಬದ್ಧ ಒಪ್ಪಿಗೆ ಭವಿಷ್ಯದ ಸಂಘರ್ಷಕ್ಕೆ ಕಾರಣವಾಯಿತು. ಅರಣ್ಯ ಭೂಮಿಯ ಕಾನೂನು ಸ್ಥಾನಮಾನ ಬದಲು ಮಾಡದೆ, ಸ್ವಇಚ್ಛೆಯ ಪುನರ್ವಸತಿ ಮಾಡುವ ಕ್ರಮವೇ ಸಂಘರ್ಷಕ್ಕೆ ಕಾರಣ. ಮುಂದಿನ ಆದೇಶ ಬರುವ ತನಕ ಯಾವ ಅರಣ್ಯ, ಅಭಯಾರಣ್ಯ ಅಥವಾ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯನ್ನು ಕಡಿತಗೊಳಿಸಕೂಡದು ಎಂಬುದು ಷರತ್ತಿನ ಇನ್ನೊಂದು ಪ್ರಮುಖ ಭಾಗ.

ಅರಣ್ಯ ಸಂರಕ್ಷಣೆಯ ದೃಷ್ಟಿಯಿಂದ ಇದು ಮಹತ್ವದ ಷರತ್ತಾಗಿದ್ದರೂ, ವಾಸ್ತವದಲ್ಲಿ ಪುನರ್ವಸತಿಗೊಳ್ಳುವ ಕುಟುಂಬಗಳ ಬದುಕು ಅನಿಶ್ಚಿತತೆಗೆ ಸಿಲುಕಲು ಕಾರಣವಾಯಿತು. ಏಕೆಂದರೆ ಅರಣ್ಯ ಭೂಮಿಯಲ್ಲಿ ನಿರ್ಮಿಸಿದ ಮನೆ, ಅಂಗಳ, ಹೊಲ ಯಾವುದೂ ವೈಯಕ್ತಿಕ ಹಕ್ಕಿನಡಿ ದಾಖಲಾಗಲಿಲ್ಲ. ಭೂ ದಾಖಲೆ, ಹಕ್ಕುಪತ್ರ, ಅಭಿವೃದ್ಧಿ ಯೋಜನೆ ಎಲ್ಲವೂ ಅವರ ಪಾಲಿಗೆ ಮರೀಚಿಕೆಯಾಯಿತು.

ಅರಣ್ಯಭೂಮಿ ಎಂಬ ಕಾನೂನು ಸ್ಥಾನಮಾನ ಉಳಿಸಿಕೊಂಡಲ್ಲಿ, ಪುನರ್ವಸತಿಗೊಂಡ ಅರಣ್ಯವಾಸಿ ಸಮುದಾಯಗಳು ಭೂ ಮಾಲೀಕತ್ವ ಪಡೆಯುವಂತಿಲ್ಲ. ಮೂಲ ಸೌಕರ್ಯಗಳು ಸಿಗುವುದಿಲ್ಲ. ಸ್ವಯಂಪ್ರೇರಿತವಾಗಿ ಪುನರ್ವಸತಿಗೊಳ್ಳಲು ಬಯಸುತ್ತಿರುವ ಸಮುದಾಯಗಳು ಹೊರಹೋಗಲು ಮನಸ್ಸು ಮಾಡುವುದಿಲ್ಲ. ಅರಣ್ಯ ಸಂರಕ್ಷಣೆಗಾಗಿ ಮಾಡಿದ ಕ್ರಮ ಸ್ವತಃ ಸಂರಕ್ಷಣೆಗೆ ಅಡ್ಡಿಯಾಗುವ ವೈರುಧ್ಯವಿದು.

ಸಿಇಸಿಯು ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ, 2006ರ ಸೆಪ್ಟೆಂಬರ್ 28ರಂದು ವರದಿ ಸಲ್ಲಿಸಿತು. ಅರಣ್ಯ ಸ್ಥಾನಮಾನ ಬದಲಾಯಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡುವುದರ ಬಗ್ಗೆ ಮರುಪರಿಶೀಲಿಸಬೇಕು ಎಂದು ವಿನಂತಿ ಮಾಡಿತು.

2008ರ ನವೆಂಬರ್ 21ರಂದು ಸಿಇಸಿ ನೀಡಿದ ವರದಿಯನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್, ಮಹತ್ವದ ತೀರ್ಪು ನೀಡಿತು. ಅಂಧಾರಿ ಅಭಯಾರಣ್ಯದ ಮೂರು ಗ್ರಾಮಗಳ ಸ್ವಯಂಪ್ರೇರಿತ ಸ್ಥಳಾಂತರಕ್ಕಾಗಿ ಬಳಸಲಾದ ಅರಣ್ಯದ ಕಾನೂನು ಸ್ಥಾನಮಾನವನ್ನು ಕಂದಾಯ ಭೂಮಿಯಾಗಿ ಪರಿವರ್ತಿಸಲು ಆದೇಶ ನೀಡಿತು. ಅರಣ್ಯ ಪ್ರದೇಶ ವಿಸ್ತರಿಸುವ ಉದ್ದೇಶದ ಜೊತೆಗೆ ಅಭಯಾರಣ್ಯವಾಸಿಗಳ ಸ್ವಯಂಪ್ರೇರಿತ ಪುನರ್ವಸತಿಯನ್ನು ಸಮನ್ವಯಗೊಳಿಸುವ, ಉತ್ತೇಜಿಸುವ ಅಂಶಗಳು ಸದರಿ ತೀರ್ಪಿನಲ್ಲಿದ್ದವು. ಆದೇಶ ಬರೀ ಮೂರು ಗ್ರಾಮಗಳಿಗೆ ಸೀಮಿತವಾಗಿದೆ ಎಂಬ ಷರತ್ತೂ ಇತ್ತು.

ಈ ತೀರ್ಪನ್ನು ಮಾನದಂಡವಾಗಿಟ್ಟುಕೊಂಡು 2009ರ ಸೆಪ್ಟೆಂಬರ್‌ನಲ್ಲಿ ಕೇಂದ್ರ ಪರಿಸರ ಸಚಿವಾಲಯ ಸರ್ಕಾರಿ ಆದೇಶ ಹೊರಡಿಸಿತು. ರಾಷ್ಟ್ರೀಯ ಉದ್ಯಾನ, ಅಭಯಾರಣ್ಯ ಮತ್ತು ಹುಲಿ ಸಂರಕ್ಷಿತ ಅರಣ್ಯದಿಂದ ಸ್ವಇಚ್ಛೆಯಿಂದ ಸ್ಥಳಾಂತರಗೊಂಡ ಎಲ್ಲ ಗ್ರಾಮಗಳ ಭೂಹಕ್ಕಿಗೂ ಇದು ಅನ್ವಯವಾಗಲಿದೆ. ನ್ಯಾಯಾಲಯ ನಿಶ್ಚಿತ ಪ್ರಕರಣಕ್ಕೆ ನೀಡಿದ ತೀರ್ಪನ್ನು ಕಾರ್ಯಾಂಗ ವ್ಯಾಪಕ ಅರ್ಥದಲ್ಲಿ ಅನ್ವಯಿಸಿದ ಕ್ರಮ ತರ್ಕಬದ್ಧ ಮಾರ್ಗವೆಂದು ಪರಿಗಣಿಸಬಹುದು. ಆದರೆ, ಸುಪ್ರೀಂ ಕೋರ್ಟ್ ಆದೇಶದ ಮಿತಿಯನ್ನು ಕಾರ್ಯಾಂಗ ಮೀರಿದೆಯೇ ಎನ್ನುವ ಮತ್ತೊಂದು ಪ್ರಶ್ನೆ ಹುಟ್ಟಿಕೊಂಡಿತು.

2015ರಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಮಧ್ಯಂತರ ಅರ್ಜಿ ಸಲ್ಲಿಸಿ ಕೆಲವು ಆಘಾತಕಾರಿ ಅಂಶಗಳನ್ನು ಬೆಳಕಿಗೆ ತಂದಿತು. ಅಭಯಾರಣ್ಯಗಳ ಕೇಂದ್ರ ಭಾಗಗಳಲ್ಲಿ ವಾಸಿಸುತ್ತಿದ್ದ ದೇಶದ 751 ಗ್ರಾಮಗಳನ್ನು ಸ್ಥಳಾಂತರಿಸಲು ಗುರ್ತಿಸಲಾಗಿತ್ತು. ಅದರಲ್ಲಿ 177 ಗ್ರಾಮಗಳನ್ನು ಸ್ಥಳಾಂತರಗೊಳಿಸಲಾಗಿತ್ತು, 122 ಗ್ರಾಮಗಳು ಅರಣ್ಯ ಪ್ರದೇಶದಲ್ಲೇ ಪುನರ್ವಸತಿಗೊಂಡಿದ್ದವು. 122 ಗ್ರಾಮಗಳ ಪೈಕಿ, 42 ಗ್ರಾಮಗಳ ಭೂಮಿ ಮಾತ್ರ ಅರಣ್ಯ ಸ್ಥಾನಮಾನದಿಂದ ಮುಕ್ತವಾಗಿತ್ತು. 80 ಗ್ರಾಮಗಳ ಜನ ಅರಣ್ಯ ಭೂಮಿಯಲ್ಲಿ ಮನೆ ಕಟ್ಟಿಕೊಂಡು, ಒಡೆತನವಿಲ್ಲದೆ ಬದುಕು ನಡೆಸುತ್ತಿದ್ದರು ಎಂಬುದು ಬಹಿರಂಗವಾಯಿತು.

2018ರ ಡಿಸೆಂಬರ್‌ನಲ್ಲಿ ಸಿಇಸಿಯು ತನ್ನ 50ನೇ ವರದಿ ಸಲ್ಲಿಸಿ, ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರ ಸಲ್ಲಿಸಿದ 2008ರ ಆದೇಶದ ವ್ಯಾಪ್ತಿಯನ್ನು ದೇಶದ ಎಲ್ಲ ಸ್ವಇಚ್ಛೆ ಸ್ಥಳಾಂತರ ಪ್ರಕರಣಗಳಿಗೆ ವಿಸ್ತರಿಸಬೇಕೆಂದು ಹೇಳಿತು. ಇದರಲ್ಲಿ ಎಂಟು ನಿಬಂಧನೆಗಳನ್ನು ಅಡಕಗೊಳಿಸಿತು. ಸ್ವಯಂಪ್ರೇರಿತ ಪುನರ್ವಸತಿಯನ್ನು ಅರಣ್ಯದ ಹೊರ ಅಂಚಿನಲ್ಲಿ ಮಾಡಬೇಕು. ವನ್ಯಜೀವಿ ಆವಾಸ ಸ್ಥಾನವು ಛಿದ್ರಗೊಳ್ಳಬಾರದು, ಅರಣ್ಯದ ಒಳಗೆ ತೆರವುಗೊಳಿಸಲಾದ ಭೂಮಿಯು ಸಂರಕ್ಷಿತ ವ್ಯಾಪ್ತಿಗೆ ಸೇರಬೇಕು. ಲಭ್ಯವಿರುವ ಕಂದಾಯ ಭೂಮಿಗೆ ಆದ್ಯತೆ ನೀಡಬೇಕು ಮುಂತಾದವು. 2019ರ ಜ. 28ರಂದು ಸುಪ್ರೀಂ ಕೋರ್ಟ್ ಈ ವರದಿಯನ್ನು ಪರಿಗಣಿಸಿ ಪೂರಕ ತೀರ್ಪು ನೀಡಿತು. ಶಿವಮೊಗ್ಗದ ಶೆಟ್ಟಿಹಳ್ಳಿ ಹಾಗೂ ಮಲೆಮಹದೇಶ್ವರ ಅಭಯಾರಣ್ಯದ ಚಂಗಡಿ ಗ್ರಾಮಗಳ ಪುನರ್ವಸತಿಗಾಗಿ ಕಾಯುತ್ತಿರುವ ಅರಣ್ಯವಾಸಿಗಳಿಗೆ ಈ ಆದೇಶ ಪೂರಕವಾಗಿದೆ.

2000ರಲ್ಲಿನ ಆದೇಶ ಅರಣ್ಯ ಸಂರಕ್ಷಣೆಗೆ ಹೆಚ್ಚಿನ ಭದ್ರತೆ ನೀಡಿತು. 2006ರ ಸಿಇಸಿ ನೀಡಿದ ವರದಿ ಮಾನವೀಯ ಅಂಶಗಳನ್ನು ಎತ್ತಿ ಹಿಡಿಯಿತು. 2008ರ ತೀರ್ಪು ಎರಡನ್ನೂ ಒಳಗೊಳ್ಳುವ ಪ್ರಯತ್ನ ಮಾಡಿತು. 2018-19ರಲ್ಲಿ ನಡೆದ ಪ್ರಕ್ರಿಯೆಗಳು ಸಂರಕ್ಷಣೆಯ ವ್ಯಾಪ್ತಿಯನ್ನು ವಿಸ್ತರಿಸಿದವು.

ಕೊನೆಯದಾಗಿ, ಸಮಾಜದ ಮುಖ್ಯವಾಹಿನಿಯಲ್ಲಿ ಸೇರಬೇಕೆಂಬ ಅರಣ್ಯವಾಸಿಗಳ ಇಚ್ಛೆಯನ್ನು ಸರ್ಕಾರ ಮತ್ತು ಅರಣ್ಯ ಇಲಾಖೆಯು ಗಂಭೀರವಾಗಿ ಪರಿಗಣಿಸಬೇಕು. ಆದ್ಯತೆ ಮೇರೆಗೆ ಈ ಪ್ರಕ್ರಿಯೆಗಳನ್ನು ತುರ್ತಾಗಿ ಜಾರಿ ಮಾಡಲು ಮುಂದಾಗಬೇಕು. ಪ್ರತಿ ಕುಟುಂಬದ ಪರಿಸ್ಥಿತಿ ಅವಲೋಕಿಸಿ, ಸೂಕ್ತವಾದದ್ದನ್ನು ಆಯ್ಕೆ ಮಾಡಿ, ಕಾರ್ಯರೂಪಕ್ಕೆ ತರಬೇಕು. ಸ್ವಯಂಪ್ರೇರಿತ ಸ್ಥಳಾಂತರ ಮತ್ತು ಪುನರ್ವಸತಿ ಯಶಸ್ವಿಯಾಗಲು, ಭೂ ಒಡೆತನ, ಮೂಲಸೌಕರ್ಯ, ಜೀವನೋಪಾಯದ ಭರವಸೆ ನೀಡಲು ಸರ್ಕಾರ ಮುಂದಾದಲ್ಲಿ, ಅರಣ್ಯವಾಸಿಗಳಿಗೆ ಸಾಮಾಜಿಕ ನ್ಯಾಯ ದೊರಕುತ್ತದೆ. ವನ್ಯಧಾಮಗಳಿಗೂ ಭದ್ರತೆ ಸಿಗುತ್ತದೆ.



ವಾಚಕರ ವಾಣಿ

ಸ್ಪರ್ಧಾತ್ಮಕ ಪರೀಕ್ಷೆ: ಕನ್ನಡ ಸಾಹಿತ್ಯ ನಗಣ್ಯ

ರಾಜ್ಯ ಸರ್ಕಾರದ 'ಸಿ' ವೃಂದದ ಹುದ್ದೆಗಳ ನೇರ ನೇಮಕಾತಿ ಪರೀಕ್ಷೆಯ ದ್ವಿತೀಯ ಪತ್ರಿಕೆಯಲ್ಲಿ ಸಂವಹನ ವಿಭಾಗವಿದೆ. ಈ ಪತ್ರಿಕೆಯಲ್ಲಿ ಕನ್ನಡ, ಇಂಗ್ಲಿಷ್ ಹಾಗೂ ಕಂಪ್ಯೂಟರ್ ವಿಷಯಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ಗ್ರಾಮೀಣ ಅಭ್ಯರ್ಥಿಗಳು ಇಂಗ್ಲಿಷ್ ಮತ್ತು ಕಂಪ್ಯೂಟರ್ ಜ್ಞಾನವನ್ನು ಅರ್ಥೈಸಿಕೊಂಡು ಆಂಗ್ಲ ಮಾಧ್ಯಮದ ಅಭ್ಯರ್ಥಿಗಳ ಜೊತೆಗೆ ಪರೀಕ್ಷೆ ಎದುರಿಸುವುದು ಕಷ್ಟಕರ. ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಇಂಗ್ಲಿಷ್, ಕಂಪ್ಯೂಟರ್ ಜ್ಞಾನ ಕಬ್ಬಿಣದ ಕಡಲೆ. ಸರ್ಕಾರ ಈಗ 56,423 ಹುದ್ದೆಗಳ ಭರ್ತಿಗೆ ಮುಂದಾಗಿದೆ. ಈ ನೇಮಕಾತಿ ವೇಳೆ ಸಂವಹನ ಪತ್ರಿಕೆಯಲ್ಲಿ ಶೇ 60ರಷ್ಟು ಕನ್ನಡ ಸಾಹಿತ್ಯದ ಪ್ರಶ್ನೆಗಳಿರಲಿ. ಉಳಿದಂತೆ ಇಂಗ್ಲಿಷ್, ಕಂಪ್ಯೂಟರ್ ವಿಷಯಕ್ಕೆ ಸಂಬಂಧಿಸಿದಂತೆ ತಲಾ 20 ಪ್ರಶ್ನೆಗಳನ್ನು ಅಳವಡಿಸಿಕೊಂಡು ಪರೀಕ್ಷೆ ನಡೆಸಬೇಕಿದೆ. ಅಥವಾ ಮೊದಲಿದ್ದಂತೆ ದ್ವಿತೀಯ ಪತ್ರಿಕೆಯಾಗಿ 'ಸಾಮಾನ್ಯ ಕನ್ನಡ' ವಿಷಯ ಅಳವಡಿಸಿಕೊಂಡರೆ ಅನುಕೂಲವಾಗಲಿದೆ.

ಲಕ್ಷ್ಮೀಕಾಂತ್ ಜೆ.ಸಿ., ತುಮಕೂರು

'ದಳಪತಿ' ಮಾದರಿ: ರಾಜ್ಯವೂ ಪಾಲಿಸಲಿ

ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ತಮಿಳುನಾಡಿನಲ್ಲಿ ಧಾರ್ಮಿಕ ಸ್ಥಳ, ಶಿಕ್ಷಣ ಸಂಸ್ಥೆ, ಬಸ್‌ನಿಲ್ದಾಣದ 500 ಮೀಟರ್ ವ್ಯಾಪ್ತಿಯೊಳಗಿದ್ದ 717 ಮದ್ಯದ ಅಂಗಡಿಗಳನ್ನು ಮುಚ್ಚಲು ಆದೇಶಿಸಿದ್ದಾರೆ. ಸಮಾಜದ ಆರೋಗ್ಯದ ದೃಷ್ಟಿಯಿಂದ ಇಂಥ ನಿರ್ಧಾರ ಅಗತ್ಯ. ಕರ್ನಾಟಕದಲ್ಲಿಯೂ ಶಾಲಾಕಾಲೇಜು, ಧಾರ್ಮಿಕ ಸ್ಥಳ ಮತ್ತು ಬಸ್‌ನಿಲ್ದಾಣದ ಸಮೀಪ ಮದ್ಯ ಮಾರಾಟ ಮಳಿಗೆಗಳಿವೆ. ಇವುಗಳಿಗೆ ನಿರ್ಬಂಧ ಹೇರಬೇಕಿದೆ. ಜನಸಂಚಾರ ಪ್ರದೇಶಗಳಲ್ಲಿ ಹೊಸ ಪರವಾನಗಿಗೆ ಮಿತಿ ನಿಗದಿಪಡಿಸಬೇಕು. ರಾತ್ರಿ ಸಮಯದಲ್ಲಿ ಮದ್ಯ ಮಾರಾಟವನ್ನು ನಿಯಂತ್ರಿಸಬೇಕು. ಇದರಿಂದ ಸಾರ್ವಜನಿಕ ಶಾಂತಿ ಮತ್ತು ಸುರಕ್ಷತೆ ಕಾಪಾಡಬಹುದು. ರಸ್ತೆ ಅಪಘಾತ ಕಡಿಮೆಯಾಗಲಿವೆ; ಜೊತೆಗೆ, ಕೌಟುಂಬಿಕ ಕಲಹಗಳೂ ತಗ್ಗಲಿವೆ.

ವೀರೇಶ್ ಯಾದವ್ ಡಿ.ಎಸ್., ಶಿರಾ

ಸಿಬಿಎಸ್‌ಇ ಪುಸ್ತಕ: ಸಮಸ್ಯೆ ಬಗೆಹರಿಸಿ

ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಏಕಾಏಕಿಯಾಗಿ ಸಿಬಿಎಸ್‌ಇ ಒಂಬತ್ತನೇ ತರಗತಿಯ ಪಠ್ಯಪುಸ್ತಕಗಳ ಬದಲಾವಣೆಯಾಗಿದೆ. ಶಾಲೆ ಪ್ರಾರಂಭವಾಗಿ ಎರಡು ತಿಂಗಳಾಗುತ್ತಾ ಬಂದರೂ ಇನ್ನೂ ಎನ್‌ಸಿಇಆರ್‌ಟಿಯಿಂದ ಸಮಾಜ ವಿಜ್ಞಾನ ಪಠ್ಯಪುಸ್ತಕ ಬಿಡುಗಡೆಯಾಗಿಲ್ಲ. ಇತರೆ ವಿಷಯಗಳ ಪಠ್ಯಪುಸ್ತಕಗಳೂ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಶಾಲೆಗಳು ಆನ್‌ಲೈನ್ ಪಿಡಿಎಫ್ ಆಧರಿಸಿ ಪಾಠ ಮಾಡುತ್ತಿವೆ. ಶಾಲೆ ಪ್ರಾರಂಭವಾಗುವ ಮುನ್ನವೇ ಪಠ್ಯಪುಸ್ತಕ ಒದಗಿಸಲು ಸಾಧ್ಯವಿಲ್ಲದಿದ್ದರೆ, ತುರ್ತಾಗಿ ಬದಲಾವಣೆ ಮಾಡುವ ಅಗತ್ಯವೇನಿದೆ? ಮುಂದಿನ ವರ್ಷ ಹತ್ತನೇ ತರಗತಿಗೂ ಪಠ್ಯಪುಸ್ತಕ ಬದಲಾವಣೆ ಮಾಡುವುದಾಗಿ ತಿಳಿಸಲಾಗಿದೆ. ಈ ಪಠ್ಯಪುಸ್ತಕಗಳಾದರೂ ಡಿಸೆಂಬರ್‌ನೊಳಗೆ ಲಭ್ಯವಾಗಲಿ.

ಸುರೇಂದ್ರ ಪೈ, ಭಟ್ಕಳ

ತುಮಕೂರಿನ 'ವಿವೇಕ' ಮುಕ್ಕಾಗದಿರಲಿ

ತುಮಕೂರು ಜಿಲ್ಲೆಯನ್ನು 'ಬೆಂಗಳೂರು ಉತ್ತರ ಜಿಲ್ಲೆ' ಎಂದು ಮರುನಾಮಕರಣ ಮಾಡುವ ಗೃಹ ಸಚಿವ ಜಿ. ಪರಮೇಶ್ವರ ಅವರ ಪ್ರಸ್ತಾಪದ ಒಳಹೂರಣದ ಕಠೋರ ಸತ್ಯವನ್ನು ಅವರೇ ಬಯಲುಗೊಳಿಸಿದ್ದಾರೆ. 'ತುಮಕೂರು ಬೆಂಗಳೂರಿನ ಭಾಗವೆಂದು ಅಮೆರಿಕದಲ್ಲಿ ಕುಳಿತವರಿಗೆ ಗೊತ್ತಾಗಿ ಇಲ್ಲಿಗೆ ಬಂದು, ಬಂಡವಾಳ ಹೂಡಿಕೆ ಮಾಡಬೇಕು' ಎಂಬ ಅವರ ದೂರಾಲೋಚನೆಯು ತುಮಕೂರು ಜಿಲ್ಲೆಯ 'ಪ್ರಾಚೀನತೆ'ಯ ಮೇಲಿನ 'ಅರ್ವಾಚೀನ'ದ ದಾಳಿ ಎನ್ನಬಹುದು. ತುಮಕೂರಿನ ಸಾಧು–ಸಿದ್ಧ–ಸಂತರ ಮಠಗಳು, ದೇಗುಲಗಳು, ಸುಂದರ ಪರಿಸರ, ಬೆಟ್ಟಗುಡ್ಡಗಳನ್ನು ಸಮತಟ್ಟು ಮಾಡಿ 'ಪ್ರಭುತ್ವ'ವು ಬಂಡವಾಳಶಾಹಿಗಳೊಂದಿಗೆ 'ಶೈಕ್ಷಣಿಕ ಸ್ಥಾವರ'ಗಳು ಮತ್ತು ಬಹುರಾಷ್ಟ್ರೀಯ ಬೃಹತ್ ಸ್ಥಾವರಗಳನ್ನು ಸ್ಥಾಪಿಸಿ, ಇಳೆ ನಂಬಿದ ಶ್ರಮಿಕರನ್ನು ಒಕ್ಕಲೆಬ್ಬಿಸುವ ಹುನ್ನಾರ ಸಚಿವರ ಪ್ರಸ್ತಾಪದಲ್ಲಿದೆ.

1832ರಲ್ಲಿ ತುಮಕೂರು ಜಿಲ್ಲೆಯಾಗಿ ಮುಂಬರುವ 2032ಕ್ಕೆ ಎರಡು ಶತಮಾನಗಳ ಸಂಭ್ರಮ ಆಚರಿಸಿಕೊಳ್ಳಲು ತುದಿಗಾಲಲ್ಲಿ ನಿಂತಿರುವ ತುಮಕೂರಿಗೆ ಈ ಪ್ರಸ್ತಾಪ, ಜಿಲ್ಲೆಯ ಚಾರಿತ್ರಿಕ ನಾಡಿಮಿಡಿತದೊಂದಿಗೆ ಮೈಗೂಡಿಸಿಕೊಂಡ ಇಲ್ಲಿನ ಜನಪದರ ಬದುಕಿನ ಅಸ್ಮಿತೆಯನ್ನೇ ಸರ್ವನಾಶಗೊಳಿಸುವುದರಲ್ಲಿ ಸಂಶಯವಿಲ್ಲ. ಥಳಕುಬಳುಕಿನ ನಗರೀಕರಣ ಆರಂಭದಲ್ಲಿ ಚೆಂದವೇ; ಕಾಲಗತಿಸಿದಂತೆ ಅದು ಬರ್ಬರಗೊಳ್ಳುತ್ತದೆ. ಜಿಲ್ಲೆಯನ್ನು ಬೌದ್ಧಿಕವಾಗಿ, ಔದ್ಯಮಿಕವಾಗಿ, ವೈಜ್ಞಾನಿಕವಾಗಿ ಬೆಳೆಸುವ ಭರದಲ್ಲಿ ಸಚಿವರಿಗೆ ತುಮಕೂರಿನ ಹೆಸರಿನ ಮೇಲೆ ವಕ್ರದೃಷ್ಟಿ ಬಿದ್ದಿರುವುದು ಚಿದಂಬರ ರಹಸ್ಯವೇನಲ್ಲ. ನೆಮ್ಮದಿಯಿಂದ ಬದುಕುತ್ತಿರುವ ಚಂದದ ತುಮಕೂರನ್ನು ಅಂದಗೆಡಿಸುವ ನಿರ್ಧಾರವನ್ನು ಹಿಂಪಡೆದುಕೊಳ್ಳುವಲ್ಲಿ ಸರ್ಕಾರ ಕಿಂಚಿತ್ತಾದರೂ ವಿವೇಕದಿಂದ ವರ್ತಿಸಬೇಕು.

ತುಂಬಾಡಿ ರಾಮಯ್ಯ, ಪ್ರೊ. ಸಿದ್ಧಗಂಗಯ್ಯ ಹೊಲತಾಳು, ಸಿದ್ಧಲಿಂಗಸ್ವಾಮಿ ಹಿರೇಮಠ, ತುಮಕೂರು

ನೀಟ್: ಕೇಂದ್ರದ ಉತ್ತರದಾಯಿತ್ವ ಇಲ್ಲವೇ?

ಪ್ರಧಾನಿ ನರೇಂದ್ರ ಮೋದಿಯವರ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮ ಮಕ್ಕಳಲ್ಲಿ, ಯುವಜನರಲ್ಲಿ ಜನಪ್ರಿಯ. ಆದರೆ, ಇಪ್ಪತ್ತಮೂರು ಲಕ್ಷ ಪರೀಕ್ಷಾರ್ಥಿಗಳು ಬರೆದ 'ನೀಟ್' ರದ್ದಾಗಿದ್ದಕ್ಕೆ ಮತ್ತು ಹಲವು ವಿದ್ಯಾರ್ಥಿಗಳ ಆತ್ಮಹತ್ಯೆ ಬಗ್ಗೆ ಮೋದಿ ಅವರ ಮೌನ ಅಸಹನೀಯವಾಗಿದೆ. 2017, 2019, 2024ರಲ್ಲೂ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಆಕಾಂಕ್ಷಿಗಳ ಆಕ್ರೋಶಕ್ಕೆ ಕಾರಣವಾಗಿತ್ತು. ಇದು ಕೇಂದ್ರ ಶಿಕ್ಷಣ ಸಚಿವರ ಹೊಣೆಗೇಡಿತನಕ್ಕೆ ಕನ್ನಡಿ ಹಿಡಿದಿದೆ. ಆದರೂ, ಎಚ್ಚೆತ್ತುಕೊಳ್ಳದೆ ಯಾವುದೇ ತಪ್ಪು ಮಾಡದ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಎಂಬ ಕಠಿಣ ಶಿಕ್ಷೆ ವಿಧಿಸಿರುವುದು ಸರಿಯಲ್ಲ. ಇಷ್ಟೆಲ್ಲಾ ಅನಾಹುತವಾಗಿದ್ದರೂ ಸಂಬಂಧಪಟ್ಟ ಸಚಿವರಾಗಲೀ ಪ್ರಧಾನಿಯಾಗಲೀ ಸಾರ್ವಜನಿಕವಾಗಿ ವಿಷಾದವ್ಯಕ್ತಪಡಿಸಿಲ್ಲ. ಈ ಲೋಪದೋಷಕ್ಕೆ ಸರ್ಕಾರ ಉತ್ತರದಾಯಿಯಲ್ಲವೇ?

ಶಾಂತಕುಮಾರ್, ಸರ್ಜಾಪುರ

ಚುರುಮುರಿ



ಜಿರಲೆಗಳು ಸಾರ್ ಜಿರಲೆಗಳು!

• ಸುಮಂಗಲಾ

ಬೆಕ್ಕಣ್ಣ ಸಣ್ಣ ಜಿರಲೆಯೊಂದನ್ನು ಹಿಡಿಯುವ ಸನ್ನಾಹದಲ್ಲಿ ಇತ್ತು. ಜಿರಲೆ ತಪ್ಪಿಸಿಕೊಂಡಿತು.

'ಎಷ್ಟ್ ಸಲ ಹೇಳೀನಿ ನಿನಗ... ಹಿಟ್ ಸ್ಪ್ರೇ ತಂದು ಎಲ್ಲಾ ಕಡಿಗಿ ಹಾಕು ಅಂತ. ಹಿಂಗೆ ಬಿಟ್ಟರೆ ಮನಿ ತುಂಬ ಅವೇ ತುಂಬತಾವು' ಎಂದು ಬೆಕ್ಕಣ್ಣ ರೇಗಿತು.

'ಏನು ಮಾಡಿದರೂ ಒಂದೆರಡು ಇದ್ದೇ ಇರತಾವು. ಅಡಗಿ ಮನ್ಯಾಗೆ ಎಲ್ಲಾನೂ ಸರಿಯಾಗಿ ಮುಚ್ಚಿಟ್ಟರೆ ಆತು ಬಿಡು' ಎಂದು ಸಮಾಧಾನಿಸಿದೆ.

'ಜಿರಲೆಗಳು ವ್ಯವಸ್ಥೆಯ ಮ್ಯಾಲೆ ದಾಳಿ ಮಾಡುವ ಪರಾವಲಂಬಿಗಳು...' ಎನ್ನುತ್ತ ಪೇಪರಿನಲ್ಲಿದ್ದ ಮುಖ್ಯ ನ್ಯಾಯಮೂರ್ತಿಯವರ ಹೇಳಿಕೆ ತೋರಿಸಿತು.

'ಆ ಪರಾವಲಂಬಿ ಜಿರಲೆಗಳೇ ಹೆಂಗೆ ಡಿಜಿಟಲ್ ಪಾರ್ಟಿ ಕಟ್ಟಿಕೊಂಡಾರೆ ನೋಡು! ನಿಮ್ ಮೋದಿಮಾಮಾನಿಗಿಂತ ಜಿರಲೆ ಜನತಾ ಪಾರ್ಟಿಗೆ ಫಾಲೋವರ್ಸ್ ಜಾಸ್ತಿ ಅಗ್ಯಾರೆ' ನಾನು ಕಿಚಾಯಿಸಿದೆ.

'ಅದೆಲ್ಲ ಅಲ್ಗಾರಿದಮ್ ಆಧಾರಿತ ಡಿಜಿಟಲ್ ಪ್ರಾಪಗಾಂಡ ಅನ್ನೂದು ಮರೀಬ್ಯಾಡ' ಎಂದು ಬುದ್ಧಿವಾದ ಹೇಳಿದ ಬೆಕ್ಕಣ್ಣ, 'ಹಂಗಾರೆ ನೀನೂ ಜಿರಲೇನಾ?' ಎಂದು ಪ್ರಶ್ನಿಸಿತು.

'ನಾ ಕೆಲಸ ಮಾಡತೀನಿ, ಹಿಂಗಾಗಿ ನಿರುದ್ಯೋಗಿ ಜಿರಲೆ ಅಲ್ಲ. ಆದ್ರ ಸಾವಿರಾರು ಜಿರಲೆಗಳು ಎತ್ತಿದ ಪ್ರಶ್ನೆ ನಂದೂ ಹೌದು' ಎಂದೆ.

'ಪ್ರಶ್ನೆ ಸರಿಯಿದ್ದರೆ ಅದನ್ನ ಕೇಳೂ ವಿಧಾನನೂ ಸರಿಯಿರಬಕು. ಹಿಂಗೆಲ್ಲ ಡಿಜಿಟಲ್ ಪ್ರಾಪಗಾಂಡ ಮಾಡಬಾರದು' ಎಂದು ಬೆಕ್ಕಣ್ಣ ಗುರುಗುಟ್ಟಿತು.

'ಮತ್ತ ನಮ್ ಯುವಮಂದಿ ಯಾರಿಗೆ, ಯಾವ ವಿಧಾನದಾಗೆ ಪ್ರಶ್ನೆ ಕೇಳಬಕು? ಪ್ರಶ್ನೆ ಕೇಳಕ್ಕೆ ಮೋದಿಮಾಮಾರು ಸಿಗಂಗೇ ಇಲ್ಲ. ನಾರ್ವೆದಾಗೆ ಯುವ ಪತ್ರಕರ್ತೆ ಪ್ರಶ್ನಿಸಿದ್ದಕ್ಕೆ ಮೋದಿಮಾಮಾರು ಎಷ್ಟ್ ಗರಂ ಆದ್ರು' ಎಂದೆ.

'ಆಕಿ ಯಾರು ನಮ್ ಮೋದಿಮಾಮಾರಿಗೆ ಪ್ರಶ್ನೆ ಕೇಳಕ್ಕೆ?! ಥತ್... ಎಲ್ಲ ಜಿರಲೆಗಳೇ. ಖರೇ ಅಂದ್ರೆ ಮೆಲೊಡಿ ಚಾಕೊಲೇಟ್ ತಿಂದರೆ ಅದ್ರಾಗೆ ಸಕಲ ಪ್ರಶ್ನೆಗಳಿಗೂ ಉತ್ತರ ಸಿಗತೈತಿ!' ಎಂದ ಬೆಕ್ಕಣ್ಣ ಈವರೆಗಿನ ವಾಗ್ವಾದವನ್ನೇ ಬದಿಗಿಟ್ಟು, ಮೆಲೊಡಿ ಬಾಯಿಗಿಟ್ಟುಕೊಂಡು ಚಪ್ಪರಿಸಿತು!

ಸಂಗತ

ನಾಗರಿಕತ್ವಹರಣದ ದುರಂತ: ಎಚ್ಚರ ಅಗತ್ಯ


ಮತದಾರರ ಪಟ್ಟಿ ಪರಿಷ್ಕರಣೆ ನೆಪದಲ್ಲಿ ಪರೋಕ್ಷವಾಗಿ 'ಪೌರತ್ವ' ನಿರ್ಣಯಿಸುವ ತನ್ನದಲ್ಲದ ಕೆಲಸದಲ್ಲಿ ಆಯೋಗ ತೊಡಗಿಕೊಂಡಿದೆ. ಈ ನಡೆ ವಿರುದ್ಧ ಎಚ್ಚರ ಅಗತ್ಯ.

• ಕೆ. ಫಣಿರಾಜ್

ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡಾವಳಿಗಳು ಶುರುವಾಗಿವೆ. ಈ ಹಿನ್ನೆಲೆಯಲ್ಲಿ, ರಾಜ್ಯ ಚುನಾವಣಾ ಆಯುಕ್ತರು ನೀಡಿರುವ ಪತ್ರಿಕಾ ಸಂದರ್ಶನದಲ್ಲಿ (ಪ್ರ.ವಾ., ಮೇ 23) '2002ರಲ್ಲಿ ನಡೆದ ಎಸ್‌ಐಆರ್' ಎಂಬ ಭಾಷಾಪ್ರಯೋಗ ಮಾಡಿದ್ದಾರೆ. ಇದು ಉತ್ತರದಾಯಿತ್ವ ಇಲ್ಲದ ಮಾತು. 1950ರ ಪ್ರಜಾಪ್ರತಿನಿಧಿ ಕಾಯ್ದೆಯ ಪಠ್ಯದಲ್ಲಿ 'ಎಸ್‌ಆರ್' (ಸಾರ ರೂಪದ ಪರಿಷ್ಕರಣೆ) ಹಾಗೂ 'ಐಆರ್' (ತೀವ್ರ ಪರಿಷ್ಕರಣೆ) ಪ್ರಕ್ರಿಯೆಗಳು ಇವೆಯೇ ಹೊರತು, 'ಎಸ್‌ಐಆರ್' ಪ್ರಸ್ತಾಪವೇ ಇಲ್ಲ.

2002ರಲ್ಲಿ ನಡೆದದ್ದು 'ಐಆರ್' ಮತ್ತೂ ಈಗ ಸಂವಿಧಾನ ಬದ್ಧತೆ ಇಲ್ಲದೆ ಕೈಗೊಂಡಿರುವುದು ಎಸ್‌ಐಆರ್. ಇದು, ಪ್ರಸ್ತುತ ಚುನಾವಣಾ ಆಯೋಗದ 'ಉತ್ಪಾದನೆ' ಎನ್ನುವುದನ್ನು ಸಾರ್ವಜನಿಕರು ಗಮನಿಸಬೇಕು. ಅಂತೆಯೇ, 2002ರಲ್ಲಿ 'ಐಆರ್' ನಡೆದ ವೇಳೆ, ಜನರಿಗೆ ತಮ್ಮ ಪೌರತ್ವ ಸಾಬೀತು ಮಾಡಲು ಒತ್ತಾಯಿಸುವ 11 ದಾಖಲೆಗಳ ಪ್ರಮಾಣವನ್ನು ಕೇಳಲಾಗಿತ್ತೇ ಎಂಬ ಪ್ರಶ್ನೆಗೂ ಚುನಾವಣಾ ಆಯೋಗವು ಉತ್ತರಿಸುತ್ತಿಲ್ಲ.

ಸಂದೇಹಾಸ್ಪದ ನಡೆಗಳ ನಡುವೆಯೇ, ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಿತು. 'ಎಸ್‌ಐಆರ್'ನ ಎಲ್ಲ ಹಂತಗಳನ್ನೂ ನಡೆಸಿ, ಮತದಾರರ ಕರಡುಪಟ್ಟಿ ತಯಾರಾದ ನಂತರ ಆಯೋಗವು 'ತಾರ್ಕಿಕವಾಗಿ ತಾಳೆಯಾಗದಿರುವಿಕೆ' ಎಂಬ ಹೊಸ ಪ್ರಕಾರವನ್ನು ಆವಿಷ್ಕರಿಸಿ, ಕರಡು ಪಟ್ಟಿಯಲ್ಲಿದ್ದ 1.2 ಕೋಟಿ ಮತದಾರರನ್ನು ಮತ್ತೆ ಕಟಕಟೆಗೆ ತಂದು ನಿಲ್ಲಿಸಿತು; ಆ ನಡೆ ಪಶ್ಚಿಮ ಬಂಗಾಳದಲ್ಲಿ ಅಲ್ಲೋಲಕಲ್ಲೋಲ ಉಂಟು ಮಾಡಿತು. ಆ ಕ್ರಮದ ನ್ಯಾಯವಂತಿಕೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಕೋರ್ಟ್ ಮಧ್ಯಪ್ರವೇಶ ಮಾಡಿತಾದರೂ, ಸಮಸ್ಯೆ ಇತ್ಯರ್ಥವಾಗದೆ ವಿಚಾರಣೆ ಮುಂದುವರಿದಿದೆ. ಹೀಗೆ, ಹುಟ್ಟನೊಂದಿಗೆ ಸಮಸ್ಯೆಗಳನ್ನು ಹೊಂದಿರುವ 'ಎಸ್‌ಐಆರ್' ಪ್ರಕ್ರಿಯೆ ಈಗ ಕರ್ನಾಟಕದಲ್ಲಿ ಶುರುವಾಗಿದೆ. ಇಲ್ಲಿಯೂ ಈ 'ತಾರ್ಕಿಕವಾಗಿ ತಾಳೆಯಾಗದಿರುವಿಕೆ' ಎಂಬ ವಿಲಕ್ಷಣ ನಡಾವಳಿಯನ್ನು ಕೈಗೊಳ್ಳುವುದಾಗಿ ಆಯೋಗವು ತಿಳಿಸಿರುವುದು ಆತಂಕದ ವಿಚಾರ.



2002–2003ರ ಮತದಾರರ ಪಟ್ಟಿ ಹಾಗೂ 2025ರ ಮತದಾರರ ಪಟ್ಟಿಗಳನ್ನು ತಾಳೆ ಹಾಕಿದಾಗ ಕಂಡುಬರುವ ಈ ಕೆಳಗಿನ ಐದು ಬಗೆಯ ವ್ಯತ್ಯಾಸಗಳನ್ನು ಆಯೋಗವು 'ತಾರ್ಕಿಕವಾಗಿ ತಾಳೆಯಾಗದಿರುವಿಕೆ' ಎನ್ನುತ್ತದೆ.

ಆ ವ್ಯತ್ಯಾಸಗಳು ಹೀಗಿವೆ: 1. ಮತದಾರರು ಅಥವಾ ಅವರ ಪಾಲಕರ ನಮೂದಾದ ಹೆಸರಿನಲ್ಲಿ ಇರುವ (ಸಾಸಿವೆ ಕಾಳಿನಷ್ಟಾದರೂ ಸರಿಯೇ) ವ್ಯತ್ಯಾಸ. ಉದಾಹರಣೆಗೆ, 'ಫಣಿರಾಜ ಕೆ', 'ಫಣಿರಾಜ ಕೆ.'/ 'ಕೆ. ಫಣಿರಾಜ' ಇತ್ಯಾದಿ ಇದ್ದಲ್ಲಿ ಸಮಸ್ಯೆ ಖಚಿತ; 2. ಮತದಾರರು ಹಾಗೂ ಅವರ ಪಾಲಕರ ವಯಸ್ಸಿನ ಅಂತರ 15 ವರ್ಷಗಳಿಗಿಂತ ಕಡಿಮೆ ಅಥವಾ 50 ವರ್ಷಗಳಿಗಿಂತ ಹೆಚ್ಚಾಗಿರುವುದು; 3. ಮತದಾರರು ಹಾಗೂ ಅವರ ಅಜ್ಜ/ಅಜ್ಜಿಯರ ವಯಸ್ಸಿನ ಅಂತರ 40 ವರ್ಷಕ್ಕಿಂತ ಕಡಿಮೆ ಇರುವುದು; 4. ಮತದಾರರ ತಂದೆ, ತಾಯಿ, ಗಂಡನ ಹೆಸರುಗಳು ಸಂಬಂಧಿತ ದಾಖಲೆಗಳಲ್ಲಿ ಕರಾರುವಕ್ಕಾಗಿ ಒಂದೇ ರೀತಿಯಲ್ಲಿ ಇರದೇ ಇರುವುದು (1ರಲ್ಲಿರುವ ಉದಾಹರಣೆ); 5. ಮತದಾರರ ತಾಯಿ–ತಂದೆಯರಿಗೆ 6ಕ್ಕಿಂತ ಹೆಚ್ಚು ಸಂತಾನ ಇರುವುದು.

ಮೇಲಿನ ಐದು ಬಗೆಯ ವ್ಯತ್ಯಾಸಗಳು ಉಂಟಾಗುವುದಕ್ಕೆ ಯಾರು ಕಾರಣ? ಮತದಾರರೇ ಅಥವಾ ಸಾಮಾಜಿಕ–ಅಧಿಕಾರಶಾಹಿ ವ್ಯವಸ್ಥೆಯೇ? ಎನ್ನುವುದು ಸಮಾಜ ಶಾಸ್ತ್ರಜ್ಞರು ಸಂಶೋಧಿಸಬೇಕಾದ ವಿಷಯವೇ ಸರಿ. ಅದು ಹೇಗಿದ್ದರೂ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗೂ ಇವುಗಳಿಗೂ ಏನು ಸಂಬಂಧ ಎಂದು ಕೇಳಿದರೆ ಚುನಾವಣಾ ಆಯುಕ್ತರು 'ಅರ್ಹ ಮತದಾರರಾಗಲಿಕ್ಕೆ ಅವರು ಭಾರತದ ಪ್ರಜೆ ಆಗಿರಬೇಕಲ್ಲವೇ?' ಎಂದು ಮರು ಪ್ರಶ್ನಿಸುತ್ತಾರೆ. ಚುನಾವಣಾ ಆಯೋಗಕ್ಕೆ ಅಧಿಕಾರ ಇರುವುದು, 1950ರ ಪ್ರಜಾಪ್ರತಿನಿಧಿ ಕಾಯ್ದೆಯನ್ವಯ ವ್ಯಕ್ತಿಯೊಬ್ಬ ಅರ್ಹ ಮತದಾರ ಹೌದೋ ಅಲ್ಲವೋ ಎನ್ನುವುದನ್ನು ಖಾತರಿಪಡಿಸಿಕೊಳ್ಳುವುದೇ ಹೊರತು, ಅರ್ಹ ಮತದಾರ ಭಾರತದ ಪ್ರಜೆ ಹೌದೋ ಅಲ್ಲವೋ ಎಂದು ನಿರ್ಧರಿಸುವುದಲ್ಲ.

1955ರ 'ಭಾರತದ ಪೌರತ್ವ ಕಾಯ್ದೆ'ಯ ಪ್ರಕಾರ ಆ ಅಧಿಕಾರ ಇರುವುದು ಸಂಸತ್ತಿಗೆ, ಸಂಸತ್ತಿನಲ್ಲಿ ಜನಪ್ರತಿನಿಧಿಗಳು ಸಹಮತದಲ್ಲಿ ಮಾಡುವ ಕಾಯ್ದೆಯ ತಿದ್ದುಪಡಿಗೆ.

2019–20ರಲ್ಲಿ, ದೇಶದ ಸಾಮಾಜಿಕ ವಾಸ್ತವಗಳನ್ನು ಕಡೆಗಣಿಸಿ, ಅಧಿಕಾರಶಾಹಿ ಸರ್ವಾಧಿಕಾರ ಧೋರಣೆಯಿಂದ ಬಹು ಜನರಿಗೆ ಇರದ 'ಕಾಗದ'ಗಳ ಆಧಾರದಲ್ಲಿ 'ಪೌರತ್ವ ನೋಂದಣಿ' ಮಾಡುವ ಉಪಕ್ರಮಕ್ಕೆ ಒಕ್ಕೂಟ ಸರ್ಕಾರ ಪ್ರಯತ್ನಿಸಿತ್ತು. ಆದರೆ, ಪ್ರಬಲ ಜನವಿರೋಧ ಎದುರಾಗಿದ್ದಕ್ಕಾಗಿ ಆ ಕ್ರಮವನ್ನು ನಿಲ್ಲಿಸಬೇಕಾಯ್ತು.

ಇದೀಗ ಚುನಾವಣಾ ಆಯೋಗದ ಮೂಲಕ 11 ಕಾಗದಗಳು ಹಾಗೂ 'ತಾರ್ಕಿಕವಾಗಿ ತಾಳೆಯಾಗದಿರುವಿಕೆ' ಎನ್ನುವ ಸಾಮಾಜಿಕವಾಗಿ ಅವಾಸ್ತವಿಕವಾದ ನಡೆಗಳ ಮೂಲಕ 'ಪೌರತ್ವ' ಸಾಬೀತುಮಾಡಲು ಹೊರಟಿದ್ದಾರೆ; ಕೆಲವೇ ತಿಂಗಳುಗಳ ಕಿರು ಅವಧಿಯಲ್ಲಿ 'ನಾಗರಿಕತ್ವಹರಣ' ಶಸ್ತ್ರಕ್ರಿಯೆಗೆ ಮುಂದಾಗಿದ್ದಾರೆ. ಆ ಅಪಾಯಕಾರಿ ಪ್ರಕ್ರಿಯೆ ಕರ್ನಾಟಕದಲ್ಲೂ ಶುರುವಾಗಿದೆ. ಕರ್ನಾಟಕ ಸರ್ಕಾರ ಹಾಗೂ ಪ್ರಜೆಗಳು ಎಚ್ಚರದಿಂದ ತಡೆಯೊಡ್ಡದಿದ್ದರೆ, ಮತ್ತೊಂದು ಸಂವಿಧಾನ ವಿರೋಧಿ ಅಧಿಕಾರ ಚಲಾವಣೆ ನಡೆಯುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರೀಲ್ಸ್ ಮಾಯಾಲೋಕ



• ಬಿ.ವಿ.ಶ್ರೀನಾಥ್



ರೀಲ್ 1 ಕೇರಳದ ಮುಖ್ಯಮಂತ್ರಿಯಾದ ನಂತರ ವಿ.ಡಿ.ಸತೀಶನ್ ಅವರು ಮಾಧ್ಯಮಗೋಷ್ಠಿ ನಡೆಸಿದರು. ಯುವಕನೊಬ್ಬ 'ವಾಹನ ಮಾರ್ಪಾಡಿಗೆ ಅನುಮತಿ ನೀಡುವುದಾಗಿ ಕೊಟ್ಟ ಭರವಸೆಯನ್ನು ಈಡೇರಿಸುತ್ತೀರಾ' ಎಂದು ಕೇಳಿದ ಪ್ರಶ್ನೆಗೆ, ಹೌದು ಎನ್ನುವಂತೆ ವಿಚಿತ್ರವಾಗಿ ತಲೆಯಾಡಿಸಿ, ಕಣ್ಸನ್ನೆ ಮಾಡಿದ್ದರು. ಅದು ವ್ಯಾಪಕವಾಗಿ ಹರಿದಾಡಿತು. ಅದೆಷ್ಟು ಜನಪ್ರಿಯವಾಗಿದೆಯೆಂದರೆ, ಸಾಮಾಜಿಕ ಜಾಲತಾಣಗಳನ್ನು ಹೆಚ್ಚು ಬಳಸುವ ಯುವ ಸಮುದಾಯ ಅವರಿಗೆ 'ಪೂಕಿ' ಸಿ.ಎಂ ಅಂದರೆ 'ಮುದ್ದಿನ' ಸಿ.ಎಂ ಎಂಬ ಹೆಸರನ್ನೂ ಇಟ್ಟಿದೆ. ಹಲವು ಉದ್ದಿಮೆಗಳು ಈ ವಿಡಿಯೊ ತುಣಕನ್ನು ತಮ್ಮ ಉತ್ಪನ್ನಗಳ ಜಾಹೀರಾತಿಗಾಗಿಯೂ ಬಳಸಿಕೊಳ್ಳುತ್ತಿವೆ. ಹಾಸ್ಯಕ್ಕೂ ಈ ವಿಡಿಯೊ ವ್ಯಾಪಕವಾಗಿ ಬಳಕೆಯಾಗುತ್ತಿದೆ.

ರೀಲ್ 2 ಪ್ರಧಾನಿ ಮೋದಿ ಅವರು ಇತ್ತೀಚೆಗೆ ಇಟಲಿಗೆ ಭೇಟಿ ನೀಡಿದ್ದಾಗ, ಅಲ್ಲಿನ ಪ್ರಧಾನಿ ಮೆಲೋನಿ ಅವರಿಗೆ ಪಾರ್ಲೆ ಕಂಪನಿಯ ಮೆಲೋಡಿ ಚಾಕೊಲೆಟ್ ನೀಡಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡಿದೆ. ತನ್ನ ಉತ್ಪನ್ನವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದಿದ್ದಕ್ಕೆ ಮೋದಿ ಅವರಿಗೆ ಸ್ವತಃ ಪಾರ್ಲೆ ಕಂಪನಿ ಧನ್ಯವಾದ ಹೇಳಿದೆ. ಈ ಕಂಪನಿಗೆ ಸಂಬಂಧ ಪಡದೇ ಇದ್ದರೂ 'ಪಾರ್ಲೆ ಇಂಡಸ್ಟ್ರೀಸ್' ಎಂಬ ಕಂಪನಿಯ ಶೇರು ಮೌಲ್ಯವೂ ಏರಿಕೆಯಾಗಿತ್ತು.



ರೀಲ್ 3 ಹೆಸರು– ನಿತ್ಯಶ್ರೀ– ಊರು, ಮಂಡ್ಯದ ಕೆ.ಆರ್.ಪೇಟೆ ತಾಲ್ಲೂಕಿನ ಮೊಸಳೆಕೊಪ್ಪಲು. ಮೈಸೂರಿನ ಕಾಲೇಜೊಂದರಲ್ಲಿ ಪದವಿ ಅಧ್ಯಯನ ಮಾಡುತ್ತಿದ್ದ ಈ ಯುವತಿ ಒಮ್ಮೆ ಸ್ನೇಹಿತೆಯರ ಮುಂದೆ 'ಬಿರುಗಾಳಿ' ಚಿತ್ರದ 'ಹೂವಿನ ಬಾಣದಂತೆ..' ಹಾಡನ್ನು ತಮ್ಮದೇ ಶೈಲಿಯಲ್ಲಿ ಅಪಶ್ರುತಿಯಲ್ಲಿ ಹಾಡಿದ್ದರು. ಅದನ್ನು ಚಿತ್ರೀಕರಿಸಿಕೊಂಡಿದ್ದವರೊಬ್ಬರು ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದರು. ರಾತ್ರೋರಾತ್ರಿ ಅದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿತು (ವೈರಲ್). ಅದರ ಬಗ್ಗೆ ತರಹೇವಾರಿ ಜನ ತರಹೇವಾರಿಯಾಗಿ ಪ್ರತಿಕ್ರಿಯಿಸಿದರು. ಅನೇಕರು ಅದೇ ರೀತಿ ಹಾಡಿ, ತಮಾಷೆ ಮಾಡಿ ವಿಡಿಯೊ ಮಾಡಿದರು. ಅಂಥ ಸಾವಿರಾರು ರೀಲ್ಸ್ ಹುಟ್ಟಿಕೊಂಡು, ಅವುಗಳನ್ನು ಲಕ್ಷಾಂತರ ಮಂದಿ ನೋಡಿದರು.



ರೀಲ್ 4 ತೆಲುಗು ನಟ ಬಾಲಕೃಷ್ಣ ತಮ್ಮ 'ಅಖಂಡ–2' ಚಿತ್ರದ ಪ್ರಚಾರದ ಭಾಗವಾಗಿ ಹಿಂದಿ ಸುದ್ದಿ ವಾಹಿನಿಯೊಂದಕ್ಕೆ ಸಂದರ್ಶನ ನೀಡುತ್ತಿದ್ದರು. ಚಿತ್ರದ ನಿರ್ದೇಶಕ ಬೋಯಪಾಟಿ ಶ್ರೀನು ತಮ್ಮ ಹರಕುಮುರುಕು ಹಿಂದಿಯಲ್ಲಿ ಚಿತ್ರದ ಬಗ್ಗೆ ವಿವರಿಸುತ್ತಿದ್ದರೆ, ಬಾಲಕೃಷ್ಣ ಅವರು ಅದಕ್ಕೆ ತಲೆದೂಗುತ್ತಾ 'ಆಲ್ರೆಡಿ' ಎಂದು ಹೇಳಿದ್ದು ಭಾರಿ ಜನಪ್ರಿಯವಾಗಿತ್ತು.

***

ಒಂದು ಪುಟ್ಟ ವಿಡಿಯೊದಿಂದ ಮರಾಠಿ ನಟಿ ಗಿರಿಜಾ ಓಕ್ ಅವರ ಸ್ನಿಗ್ಧ ಸೌಂದರ್ಯ ಸಂಚಲನ ಮೂಡಿಸುತ್ತದೆ. ಒಂದು ಹಾಡಿನಿಂದ ರಾನು ಮಂಡಲ್ ಎನ್ನುವ ಅನಾಮಿಕ ಮಹಿಳೆ 'ಸ್ಟೇಷನ್ ಗಾಯಕಿ' ಎಂದು ಹೆಸರಾಗುತ್ತಾರೆ. ಶೇಂಗಾ ಬೀಜ ಮಾರಾಟ ಮಾಡುತ್ತಿದ್ದ ಭುವನ್ ಬೈದ್ಯಾಕರ್ ಒಂದು ಹಾಡಿನ ವಿಡಿಯೊದಿಂದ ರಾತ್ರಿ ಬೆಳಗಾಗುವುದರೊಳಗೆ ಜನಪ್ರಿಯರಾಗುತ್ತಾರೆ.

ರೀಲ್ಸ್ ಹೇಗೆ ಹುಟ್ಟುತ್ತವೆ ಮತ್ತು ಹೇಗೆ ವ್ಯಾಪಕವಾಗಿ ಹರಿದಾಡುತ್ತವೆ ಹಾಗೂ ಕೆಲವೇ ದಿನಗಳಲ್ಲಿ ಜನರ ಸ್ಮೃತಿಯಿಂದ ಅಳಿಸಿಹೋಗುತ್ತವೆ ಎನ್ನುವುದಕ್ಕೆ ಇವು ಕೆಲವು ಉದಾಹರಣೆಗಳು.



ಸಾಮಾಜಿಕ ಜಾಲತಾಣಗಳಲ್ಲಿ ಕಾಣಸಿಗುವ ಕಿರು ವಿಡಿಯೊಗಳನ್ನು 'ರೀಲ್ಸ್' ಎನ್ನುತ್ತಾರೆ. ಸಾಮಾನ್ಯವಾಗಿ ರೀಲ್ಸ್ 15 ಸೆಕೆಂಡ್‌ನಿಂದ 3 ನಿಮಿಷದ್ದಾಗಿರುತ್ತದೆ. ಕೆಲವು ಮಾತ್ರ ಹೆಚ್ಚು ಅವಧಿ ಹೊಂದಿರುತ್ತವೆ. ಇನ್‌ಸ್ಟಾಗ್ರಾಂನಲ್ಲಿ 20 ನಿಮಿಷದವರೆಗಿನ ವಿಡಿಯೊ ಅನ್ನು ಅಪ್ಲೋಡ್ ಮಾಡಬಹುದಾಗಿದೆ. ಫೇಸ್‌ಬುಕ್‌ನಲ್ಲಿ 3 ನಿಮಿಷದವರೆಗಿನ ರೀಲ್ಸ್ ಅಪ್ಲೋಡ್ ಮಾಡಬಹುದು. ಯೂಟ್ಯೂಬ್‌ನಲ್ಲಿ ಇದಕ್ಕೆ 'ಶಾರ್ಟ್ಸ್' ಎನ್ನುವ ಹೆಸರಿದೆ.

ರೀಲ್ಸ್, ಡಿಜಿಟಲ್ ಕಾಲಮಾನದ ಹೊಸ ಅಭಿವ್ಯಕ್ತಿ ಮಾಧ್ಯಮ. ಎಲ್ಲ ವಯೋಮಾನದವರಿಗೆ ಅಚ್ಚುಮೆಚ್ಚು. ಆದರೆ, ಜೆನ್ ಝೀಗಳಿಗೆ ಅದೊಂದು ಹುಚ್ಚು. ರೀಲ್ಸ್‌ನಲ್ಲಿ ಏನಿದೆ ಏನಿಲ್ಲ ಎಂದು ಕೇಳುವಂತೆಯೇ ಇಲ್ಲ; ಬದುಕು, ಭಾವನೆ, ಕಲೆ, ಸಮಾಜ, ವಿಜ್ಞಾನ, ಮಾಹಿತಿ... ಹೀಗೆ ಎಲ್ಲವೂ ಇವೆ. ಹೆಚ್ಚಿನವರು ತಮಗಿಷ್ಟದ ವಸ್ತು–ವಿಷಯಗಳ ಮೇಲ್ಪದರವನ್ನಷ್ಟೇ ಸ್ಪರ್ಶಿಸಿ, ಮುಂದಕ್ಕೆ ಸಾಗುವವರು. ಬಹುತೇಕರು ಆ ಕ್ಷಣದ ಅನಿಸಿಕೆಗಳಿಗೆ ಜೀವ ತುಂಬಿದರೆ, ಕೆಲವರು ವಿಶೇಷ ತಯಾರಿ ನಡೆಸಿ ವಿಡಿಯೊ ಮಾಡುತ್ತಾರೆ.

ಸಾಮಾಜಿಕ ಜಾಲತಾಣಗಳು, ಅದರಲ್ಲೂ ರೀಲ್ಸ್ ಜನರ ಪ್ರತಿಭೆ, ಕೌಶಲ, ಗೀಳು, ಹುಚ್ಚುತನ, ಕ್ರಿಯಾಶೀಲತೆ, ಸೃಜನಶೀಲತೆಯ ವೇದಿಕೆಯಾಗಿವೆ. ರೀಲ್ಸ್‌ನಿಂದ ಕೆಲವರು ರಾತ್ರೋರಾತ್ರಿ ತಾರೆಗಳಾಗುತ್ತಾರೆ. ಇದು ಕೆಲವೊಮ್ಮೆ ಅತಿಯಾಗಿ ಅನಪೇಕ್ಷಿತ ಸ್ವರೂಪ ಪಡೆಯುವುದೂ ಉಂಟು. ಎಲ್ಲೋ ತಮ್ಮ ಪಾಡಿಗೆ ತಾವಿದ್ದವರಿಗೆ ರೀಲ್ಸ್ ಖ್ಯಾತಿ, ದುಡ್ಡು, ತಾರಾಪಟ್ಟ, ಅಪಖ್ಯಾತಿ, ಕುಖ್ಯಾತಿ ತಂದುಕೊಟ್ಟಿವೆ.

ರೀಲ್ಸ್ ಮಾಡುವುದಕ್ಕೆ ವಯಸ್ಸಿನ ಹಂಗಿಲ್ಲ; ವಿಷಯದ ಮಿತಿಯೂ ಇಲ್ಲ. ಇದು ಹೀಗೇ ಇರಬೇಕು ಎನ್ನುವ ನಿಯಮ ಇಲ್ಲ. ಚೌಕಟ್ಟು ಮೊದಲೇ ಇರುವುದಿಲ್ಲ. ಮನಸ್ಸಿನ ಲಹರಿಯಂತೆ ರೀಲ್ಸ್ ಮಾಡುತ್ತಾರೆ. ಅದೇ ಅವುಗಳ ಹೆಚ್ಚುಗಾರಿಕೆ; ಅದೇ ಅವುಗಳ ಮಿತಿಯೂ ಹೌದು.

(ಚಿತ್ರಗಳನ್ನು ಆಯಾ ರೀಲ್‌ನಿಂದ ಪಡೆಯಲಾಗಿದೆ)



ಚಿತ್ರ: ಸಂತೋಷ್ ಸಸಿಹಿತ್ಲು

'ವೈರಲ್' ಆಗುವುದೆಂದರೆ...

ರೀಲ್ಸ್‌ನ ವೈಶಿಷ್ಟ್ಯವೆಂದರೆ, ಯಾವುದು ಏಕೆ ವ್ಯಾಪಕ ಜನಪ್ರಿಯತೆ ಪಡೆಯಿತು ಎನ್ನುವುದೇ ಬಹಳ ಸಲ ಅರ್ಥವಾಗುವುದಿಲ್ಲ. ಅದಕ್ಕೆ ಯಾವ ತರ್ಕವೂ ಇರುವುದಿಲ್ಲ. ನಿಜಜೀವನದಲ್ಲಿ ದಿನವೂ ನೋಡುವ ವಿಚಾರ–ಜನಗಳೇ ಭಾರಿ ಸಂಚಲನ ಸೃಷ್ಟಿಸುತ್ತಾರೆ. ಕೆಲವರು ಅದನ್ನು ಸಂಭ್ರಮಿಸಿದರೆ, ಕೆಲವರಿಗೆ ಅದು ಇರಿಸುಮುರುಸು ಉಂಟುಮಾಡುವುದೂ ಇದೆ. ಒಂದು ವಿಡಿಯೊ ಜನಪ್ರಿಯವಾದರೆ, ಅದಕ್ಕೆ ಪ್ರತಿಕ್ರಿಯೆ ಎಂಬಂತೆ ನೂರಾರು, ಸಾವಿರಾರು ವಿಡಿಯೊಗಳು ಹುಟ್ಟಿಕೊಳ್ಳುತ್ತವೆ. ಐಎ ಬಂದ ಮೇಲೆ ಈ ಪ್ರವೃತ್ತಿ ಮತ್ತಷ್ಟು ಹೆಚ್ಚಾಗಿದೆ. ಜನರ ವೈಯಕ್ತಿಕ ಅನಿಸಿಕೆ, ಅಭಿವ್ಯಕ್ತಿ, ಕ್ರಿಯಾಶೀಲತೆಗೆ ರೀಲ್ಸ್ ಹೊಸ ಆಯಾಮ ನೀಡಿವೆ. ರೀಲ್ಸ್‌ನಲ್ಲಿ ಹೆಚ್ಚಾಗಿ ಜನಪ್ರಿಯವಾಗುವುದು ವೈಯಕ್ತಿಕವಾದ ಸಂಗತಿಗಳೇ. ಜನರಿಗೆ ಮತ್ತೊಬ್ಬರ ಬದುಕು, ಆಹಾರ, ಉಡುಗೆ, ಮಾತು, ಊರು–ಪ್ರದೇಶ ಇವು ಸದಾ ಕುತೂಹಲದ ವಸ್ತುಗಳಾಗಿರುತ್ತವೆ. ಕೆಲವರು ಅಂಥ ಅಂಶಗಳನ್ನೇ ಆಧರಿಸಿ ವಿಡಿಯೊ ಮಾಡಿ, ಅವು ವ್ಯಾಪಕವಾಗಿ ಹರಡುವಂತೆ ಮಾಡಲು ಪ್ರಯತ್ನಿಸುತ್ತಾರೆ. ಆದರೆ, ಪೂರ್ವಯೋಜನೆಯೊಂದಿಗೆ ಮಾಡಿದ ವಿಡಿಯೊಗಳಿಗಿಂತಲೂ ಅಚಾನಕ್ಕಾಗಿ ಮಾಡಿದ ವಿಡಿಯೊಗಳು ಹೆಚ್ಚು ವ್ಯಾಪಕವಾಗಿ ಹರಿದಾಡುವುದು ಒಂದು ಸೋಜಿಗ.

ಆಕಸ್ಮಿಕ ಹುಟ್ಟು, ಅನಿರೀಕ್ಷಿತ ಅಂತ್ಯ

ಹೆಚ್ಚಿನ ಜನರಲ್ಲಿ ತಮ್ಮ ಪ್ರತಿಭೆ, ಜ್ಞಾನ, ಸೌಂದರ್ಯ ಇತ್ಯಾದಿಯನ್ನು ಇತರರ ಮುಂದೆ ಪ್ರದರ್ಶಿಸಬೇಕು ಎನ್ನುವ ಹಂಬಲ ಇರುತ್ತದೆ. ಅಂಥ ಮನಃಸ್ಥಿತಿಯೇ ರೀಲ್ಸ್ ಹುಟ್ಟಿಗೆ ಕಾರಣ. ಆಕಸ್ಮಿಕವಾಗಿ ಹುಟ್ಟಿ, ಅನಿರೀಕ್ಷಿತವಾಗಿ ವ್ಯಾಪಿಸಿ (ವೈರಲ್ ಆಗಿ), ಅಷ್ಟೇ ಅನಿರೀಕ್ಷಿತವಾಗಿ ಮರೆಯಾಗುವುದು ಅವುಗಳ ಲಕ್ಷಣ. ಎಷ್ಟೇ ಜನಪ್ರಿಯವಾದರೂ, ಲಕ್ಷಾಂತರ ವ್ಯೂಸ್ ಬಂದರೂ, ಇವೆಲ್ಲವೂ ಕ್ಷಣಭಂಗುರ ಅಷ್ಟೇ. ರೀಲ್ಸ್‌ಗೆ ದಿಢೀರ್ ಹುಟ್ಟಿನಂತೆಯೇ ದಿಢೀರ್ ಅಂತ್ಯವೂ ಇದೆ. ಅವುಗಳ ಆಯುಸ್ಸು ಕಡಿಮೆ.

ಕಡಿಮೆ ಅವಧಿಯಲ್ಲಿಯೇ ಅತಿ ಹೆಚ್ಚು ಜನರ ಕಣ್ಣು–ಮನಸ್ಸು ಸೆಳೆದು, ನಗು, ಸಂತೋಷ, ವಿಷಾದ ಹೀಗೆ ಎಂಥದೋ ಒಂದು ಭಾವ ಮೂಡಿಸಿ, ಪರ್ಯವಸಾನಗೊಳ್ಳುತ್ತವೆ. ಅದರ ಜಾಗಕ್ಕೆ ಹೊಸ ರೀಲ್ಸ್ ಬರುತ್ತವೆ. ಇವತ್ತು ಒಂದು, ನಾಳೆ ಇನ್ನೊಂದು.. ಹೀಗೆ ದಿನಕ್ಕೊಂದು ಹೊಸ ಲೋಕ ತೆರೆದುಕೊಳ್ಳುತ್ತಲೇ ಇರುತ್ತದೆ.

ಸರ್ವಂ ರೀಲ್ಸ್‌ಮಯಂ

ರೀಲ್ಸ್ ಅನ್ನು ಡಿಜಿಟಲ್ ಯುಗದ ಜಾನಪದ ಎಂದು ಹೇಳಬಹುದು. ಕೆಲವರು ದಿನಕ್ಕೊಮ್ಮೆಯಾದರೂ ರೀಲ್ಸ್ ನೋಡುತ್ತಾರೆ. ಕೆಲವರಿಗೆ ಅದು ದಿನಚರಿಯ ಭಾಗ. ಕೆಲವರಿಗೆ ಹೊತ್ತು ಕಳೆಯುವ ದಾರಿ. ಮತ್ತೆ ಕೆಲವರಿಗೆ ಮನರಂಜನೆಯ ಮೂಲ. ಎಲ್ಲರೂ ರೀಲ್ಸ್ ಎಂಬ ಮಾಯಾಂಗನೆಗೆ ಮೋಹಗೊಂಡವರೇ. ಜನರಲ್ಲಿ ಮೊಬೈಲ್ ವ್ಯಸನ ಹೆಚ್ಚಾಗುವಲ್ಲಿ ರೀಲ್ಸ್ ಪಾತ್ರ ಪ್ರಮುಖ. ಜನರ ಸಾಮಾಜಿಕ ಸಂವಹನ ಕುಂದಲು ಮುಖ್ಯ ಕಾರಣವೂ ಹೌದು. ವಾಹನ ಚಲಾಯಿಸುವಾಗ, ಊಟ ಮಾಡುವಾಗ, ಕೆಲಸ ಮಾಡುವಾಗ, ಕೊನೆಗೆ ಶೌಚಾಲಯದಲ್ಲಿ ಕೂತಿರುವಾಗಲೂ ರೀಲ್ಸ್ ನೋಡುವ ಜನರಿದ್ದಾರೆ. ನಿರ್ದಿಷ್ಟ ಪಕ್ಷ, ಸಿದ್ಧಾಂತ, ಪಂಥ, ವಸ್ತು–ಸೇವೆಯ ಮಾಹಿತಿ ಹರಡಲು ಬಯಸುವರಿಗೆ ಇದು ಕ್ಷಿಪ್ರ, ಪರಿಣಾಮಕಾರಿ, ಕಡಿಮೆ ಖರ್ಚಿನ ಸಂವಹನ ಮಾರ್ಗ.

ದೇಶದ ರಾಜಕೀಯ ಪಕ್ಷಗಳು ಕೂಡ ತಮ್ಮ ನಾಯಕರನ್ನು ಹೊಗಳಲು, ವಿರೋಧ ಪಕ್ಷಗಳ ಮುಖಂಡರನ್ನು ತೆಗಳಲು ರೀಲ್ಸ್‌ಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಿವೆ. ರಾಜಕೀಯ ಮುಖಂಡರಿಗೂ 'ರೀಲ್ಸ್' ಎನ್ನುವುದು ಈಗ ಪರಿಣಾಮಕಾರಿ ಸಂವಹನ ಟೂಲ್.



ವಕ್ರನೋಟವೇ ಅಚ್ಚುಮೆಚ್ಚು

ನೇರವಾದ, ಸ್ಪಷ್ಟವಾದ ವಸ್ತು–ವಿಷಯಗಳ ವಿಡಿಯೊಗಳಿಗಿಂತ ವ್ಯಂಗ್ಯ, ವಕ್ರನೋಟ, ವಿಭಿನ್ನ ಆಯಾಮ ತೋರುವ ರೀಲ್ಸ್ ಬಹಳ ಬೇಗ ಜನಪ್ರಿಯವಾಗುತ್ತವೆ. ಯಾವುದೇ ಸೆನ್ಸಾರ್‌ಶಿಪ್ ಇಲ್ಲದಿರುವುದರಿಂದ ರಾಜಕೀಯ, ಸಾಮಾಜಿಕ ವಿಡಂಬನೆಗೂ ಇದು ಸೂಕ್ತ ಮಾಧ್ಯಮ.

ಯುವತಿಯರು, ಮಹಿಳೆಯರಿಗೆ ತಮ್ಮ ಸೌಂದರ್ಯ, ನೃತ್ಯ, ನಟನಾ ಪ್ರತಿಭೆ ಪ್ರದರ್ಶಿಸಲು ಇದು ಉತ್ತಮ ವೇದಿಕೆ. ಇನ್ನು ಅಡುಗೆ, ಕೃಷಿ, ಆರೋಗ್ಯ ಇತ್ಯಾದಿ ಟಿಪ್ಸ್ ನೀಡುವ ರೀಲ್ಸ್ ಕೂಡ ಜನಪ್ರಿಯತೆಯ ಯಾದಿಯಲ್ಲಿ ಸ್ಥಾನ ಪಡೆದಿವೆ.

ರೀಲ್ಸ್ ಹೆಚ್ಚಿನವರಿಗೆ ಖುಷಿ ನೀಡಿದರೆ, ಅವುಗಳಿಂದ ಹಲವರು ಗೇಲಿಗೊಳಗಾಗಿದ್ದಾರೆ, ಕೆಲವರ ಬದುಕು ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ಹಲವರ ಜೀವನ ಹಳಿತಪ್ಪಿದೆ. ಕುಂಭಮೇಳದಲ್ಲಿ ರುದ್ರಾಕ್ಷಿ ಮಾರುತ್ತಿದ್ದ ಅನಾಮಿಕ ಯುವತಿ ಮೊನಾಲಿಸಾ ಭೋಸ್ಲೆ, ರೀಲ್ಸ್‌ನಿಂದ ಭಾರಿ ಜನಪ್ರಿಯತೆ ಗಳಿಸಿದರು. ಅಲ್ಲಿಂದ ಅವರ ಜೀವನದ ದಿಕ್ಕೇ ಬದಲಾಗಿ ಹೋಯಿತು.



ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

'ಸಕಾಲದಲ್ಲಿ ದೊರೆತ ನೆರವು'



ಬಡತನದಿಂದಾಗಿ ಶಿಕ್ಷಣದಿಂದ ವಂಚಿತರಾಗದಂತೆ, ಪ್ರತಿಭಾವಂತರಿಗೆ ಆರ್ಥಿಕ ನೆರವು ನೀಡುವ 'ಪ್ರಜಾವಾಣಿ' ದಿನಪತ್ರಿಕೆಯ ಶಿಷ್ಯವೇತನ ನನ್ನ ಶಿಕ್ಷಣಕ್ಕೆ ಸಹಕಾರಿಯಾಗಿದೆ. ಕಳೆದ ವರ್ಷ ದೊರೆತ ಶಿಷ್ಯವೇತನದಿಂದ ಪಿಯು ವಿಜ್ಞಾನ ಪ್ರವೇಶ ಶುಲ್ಕ ಭರಿಸಲು ಬಳಕೆ ಆಯಿತು. ಇದರಿಂದ ತುಂಬ ಅನುಕೂಲವಾಗಿದೆ. ಆರ್ಥಿಕವಾಗಿ ಹಿಂದುಳಿದ ನನ್ನಂತವರಿಗೆ ಈ ಶಿಷ್ಯವೇತನ ಸಹಕಾರಿಯಾಗಿದೆ. 2 ವರ್ಷದ ಹಿಂದೆ ನನ್ನ ಅಣ್ಣ ಪ್ರಸನ್ನ 'ಪ್ರಜಾವಾಣಿ' ಶಿಷ್ಯವೇತನ ಪಡೆದಿದ್ದು, ಧಾರವಾಡದಲ್ಲಿ ಬಿ.ಎಸ್‌ಸಿ ಮಾಡುತ್ತಿದ್ದಾರೆ.

ಅಭಿಷೇಕ ಕಮರಿ, ನಾಗರಾಳ, ರಾಯಚೂರು ತಾಲ್ಲೂಕು

ಉನ್ನತ ಶಿಕ್ಷಣಕ್ಕಾಗಿ ಠೇವಣಿ ಇಟ್ಟಿರುವೆ



'ಪ್ರಜಾವಾಣಿ' ದಿನಪತ್ರಿಕೆಯು ನೀಡಿದ ಸ್ಕಾಲರ್‌ಶಿಪ್ ಹಾಗೂ ಸರ್ಕಾರದಿಂದ ಸಿಕ್ಕ ವಿದ್ಯಾರ್ಥಿವೇತನ ಎಲ್ಲವನ್ನೂ ಸೇರಿಸಿ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದ್ದೇನೆ. ಇದನ್ನು ಮುಂದೆ ನನ್ನ ಉನ್ನತ ಶಿಕ್ಷಣದ ಉದ್ದೇಶಕ್ಕಾಗಿ ಬಳಸುತ್ತೇನೆ. ಉನ್ನತ ಸಾಧನೆ ಮಾಡುವ ಗುರಿಯಿದೆ. ನನ್ನಂತಹ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಾಯ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ.

ದಿವ್ಯಾ ರಾಜೇಂದ್ರ ಮುತಾಲಿಕ್ ದೇಸಾಯಿ, ಹುಬ್ಬಳ್ಳಿ

'ರೀಲ್ಸ್‌ಪ್ರಿಯ' ಭಾರತೀಯರು

ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮೊದಲಿಗೆ ಕಾಣಿಸಿಕೊಂಡದ್ದು 2000ರಲ್ಲಿ. ಇವುಗಳನ್ನು ನೋಡುವವರ ಪೈಕಿ ಭಾರತೀಯರು ಮುಂಚೂಣಿಯಲ್ಲಿದ್ದಾರೆ ಎಂದು 'ಮೆಟಾ' ನಡೆಸಿದ ಅಧ್ಯಯನ ವರದಿ ತಿಳಿಸಿದೆ. 2025ರಲ್ಲಿ ನಡೆಸಿದ ಅಧ್ಯಯನದ ಪ್ರಕಾರ, ಭಾರತದ ಟಿವಿ, ಯೂಟ್ಯೂಬ್ ಮತ್ತು ಇತರ ದೃಶ್ಯ ಮಾಧ್ಯಮಗಳನ್ನು ಹಿಂದಿಕ್ಕಿ ರೀಲ್ಸ್ ಅಗ್ರಸ್ಥಾನಕ್ಕೇರಿದವು. ದೇಶದ ಮೊಬೈಲ್ ಬಳಕೆದಾರರ ಪೈಕಿ ಶೇ 97ರಷ್ಟು ಮಂದಿ ದಿನಕ್ಕೆ ಒಮ್ಮೆಯಾದರೂ ಕಿರುವಿಡಿಯೊಗಳನ್ನು ನೋಡುತ್ತಾರೆ. ಅದರಲ್ಲಿ ಶೇ 92ರಷ್ಟು ಮಂದಿ 'ಮೆಟಾ' ವೇದಿಕೆಗಳಲ್ಲಿ (ಫೇಸ್‌ಬುಕ್, ಇನ್‌ಸ್ಟಾಗ್ರಾಂ) ರೀಲ್ಸ್ ನೋಡುತ್ತಾರೆ ಎಂದು ವರದಿ ಹೇಳಿದೆ.

ನಿಯಂತ್ರಣಕ್ಕೆ ಒತ್ತಾಯ

ರೀಲ್ಸ್ ಬಗ್ಗೆ ಸಮಾಜದ ಒಂದು ವರ್ಗದಲ್ಲಿ ಅಸಮಾಧಾನ–ಆಕ್ಷೇಪವೂ ಇದೆ. ರೀಲ್ಸ್ ನೋಡಲು ಜನರು ಅಪಾರ ಸಮಯವನ್ನು ವ್ಯರ್ಥ ಮಾಡುತ್ತಿದ್ದು, ಅವು ಅವರ ಒಟ್ಟಾರೆ ಪ್ರಗತಿಗೆ ಅಡ್ಡಿಯಾಗಿವೆ ಎನ್ನುವುದು ಆಕ್ಷೇಪಕ್ಕೆ ಕಾರಣ. ಅದೇ ಸಮಯವನ್ನು ಹೊಸ ವಿಚಾರ ತಿಳಿಯಲು, ಓದಲು, ಕೆಲಸ ಮಾಡಲು ಬಳಸಬಹುದು. ರೀಲ್ಸ್‌ನಿಂದ ಮಾನವ ಸಂಪನ್ಮೂಲ ವೃದ್ಧಿಗೆ ಮತ್ತು ದೇಶದ ಅಭಿವೃದ್ಧಿಗೆ ಹಿನ್ನಡೆ ಉಂಟಾಗಿದೆ. ವಿಶೇಷವಾಗಿ, ಮಕ್ಕಳ ಮೇಲೆ ಇದು ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತಿದ್ದು, ವ್ಯಸನವಾಗಿ ಬೆಳೆದಿದೆ. ರೀಲ್ಸ್‌ನಿಂದ ವಿದ್ಯಾರ್ಥಿಗಳ ಅಧ್ಯಯನ, ವೃತ್ತಿಪರರ ಕಾರ್ಯದಕ್ಷತೆ ಕುಸಿದಿದೆ ಎನ್ನುವ ಅಭಿಪ್ರಾಯ ಇದೆ. ಯಾರದೋ ಬದುಕಿನ ಕ್ಷುಲ್ಲಕ ಖಾಸಗಿ ವಿಚಾರಗಳು ಸಾರ್ವಜನಿಕ ಚರ್ಚೆಯ ಪ್ರಮುಖ ವಿಚಾರಗಳಾಗುತ್ತವೆ, ಇವುಗಳಿಂದ ವರ್ತಮಾನದ ಪ್ರಮುಖ ಸಮಸ್ಯೆಗಳ ಬಗ್ಗೆ ಜನರು ಅಗತ್ಯ ಪ್ರಮಾಣದಲ್ಲಿ ಸ್ಪಂದಿಸುತ್ತಿಲ್ಲ ಎನ್ನುವ ವಾದವೂ ಇದೆ. ಈ ದಿಸೆಯಲ್ಲಿ ಸರ್ಕಾರವು ಸೂಕ್ತ ನಿಯಂತ್ರಣ ಕ್ರಮಗಳನ್ನು ರೂಪಿಸಬೇಕು ಎನ್ನುವ ಒತ್ತಾಯವೂ ಕೇಳಿಬಂದಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಯುವಕನೊಬ್ಬ** ಕಿಟಕಿಯ ಸರಳುಗಳ ನಡುವೆ ಸಿಲುಕಿಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಯುವಕ ಬಾಂಗ್ಲಾದೇಶದ ಮುಸ್ಲಿಂ ಆಗಿದ್ದು, ಅಸ್ಸಾಂನ ಕೊಕ್ರಜಾರ್‌ನಲ್ಲಿ ಹಿಂದೂ ಧರ್ಮದ ವ್ಯಕ್ತಿಯ ಮನೆಗೆ ಕಳ್ಳತನ ಮಾಡಲು ಬಂದು ಸರಳಿನ ನಡುವೆ ಸಿಲುಕಿಕೊಂಡ. ಬೆಳಿಗ್ಗೆ ಊರಿನ ಜನ ಬಂದು ನೋಡುವವರೆಗೆ ಕಿಟಕಿಯ ಸರಳುಗಳ ನಡುವೆಯೇ ಇದ್ದ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✓ **ಇನ್‌ವಿಡ್** ಟೂಲ್ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಒಂದು ಕೀಫ್ರೇಮ್ ಅನ್ನು ವಿಶ್ಲೇಷಣೆಗೊಳಪಡಿಸಿದಾಗ, ಬಾಂಗ್ಲಾದೇಶದ ಡಾಕಾ ಟ್ರಿಬ್ಯೂನ್ ಎನ್ನುವ ವೆಬ್‌ಸೈಟ್‌ನಲ್ಲಿ 2026ರ ಮೇ 18ರಂದು ಪ್ರಕಟವಾಗಿರುವ ಸುದ್ದಿಗೆ ಸಂಪರ್ಕ ಕಲ್ಪಿಸಿತು. ವಿಡಿಯೊದ ಕೀಫ್ರೇಮ್ ಮತ್ತು ವೆಬ್‌ಸೈಟ್‌ನಲ್ಲಿನ ವರದಿಯ ಜತೆ ಪ್ರಕಟವಾಗಿದ್ದ ಚಿತ್ರವು ಬಹುತೇಕ ಒಂದೇ ಆಗಿದ್ದವು. ಬಾಂಗ್ಲಾದೇಶದ ಕೊಮಿಲ್ಲಾದಲ್ಲಿ ಮಿರ್ಜಾನ್ ಹುಸೇನ್ ಜಿಹಾದ್ ಎಂಬಾತ ಹಾಡಹಗಲೇ ಮನೆಯೊಂದಕ್ಕೆ ನುಗ್ಗಲು ಯತ್ನಿಸಿದಾಗ, ಬಾಲ್ಕನಿಯ ಸರಳುಗಳ ನಡುವೆ ಸಿಲುಕಿಕೊಂಡಿದ್ದ ಘಟನೆ ಕುರಿತ ವರದಿ ಅದು. 'ಮಾಹಿತಿ ತಿಳಿದ ಕೂಡಲೇ ನಾವು ಸ್ಥಳಕ್ಕೆ ಹೋಗಿ ಕಳ್ಳನನ್ನು ರಕ್ಷಿಸಿ, ನಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದೆವು. ಅವನಿಗೆ 20 ದಿನಗಳ ಜೈಲುಶಿಕ್ಷೆ ವಿಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದರು. ಘಟನೆಗೆ ಸಂಬಂಧಿಸಿ ಬಾಂಗ್ಲಾದ ಹಲವು ಮಾಧ್ಯಮಗಳು ವರದಿ ಪ್ರಕಟಿಸಿವೆ. ಬಾಂಗ್ಲಾದ ವಿಡಿಯೊನ ಅಸ್ಸಾಂಗೆ ತಳಕು ಹಾಕಿ, ಅದಕ್ಕೆ ಧಾರ್ಮಿಕ ಆಯಾಮ ನೀಡಿ ಸುಳ್ಳು ಹರಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ನಿರಂತರ ಕಾಯುವ ನಿಯತ್ತು



ದಾದಾಪೀರ್ ನವಿಲೇಹಾಳ್

ಬಷೀರ್ ಸಾಹೇಬರು ಅಕ್ಕಿ ವ್ಯಾಪಾರದ ಜೊತೆಗೆ ಮಂಗಳೂರು ಹೆಂಚುಗಳನ್ನು ಮಾರುತ್ತಿದ್ದರು. ಅವರ ಹತ್ತಿರ ವ್ಯವಹಾರಕ್ಕೆ ಬರಿಗೈಯಲ್ಲಿ ಬರಬಹುದಿತ್ತು. ನಾಳೆ ಕೊಡುತ್ತೇನೆ, ವಾರ ಬಿಟ್ಟು ಕೊಡುತ್ತೇನೆ ಎಂದ ಕೆಲವರು ವರ್ಷಗಟ್ಟಲೆ ಕೊಡುತ್ತಿರಲಿಲ್ಲ. ಹಾಗಂತ ಬಷೀರ್ ಸಾಹೇಬರು ಅವರನ್ನು ಹುಡುಕಿಕೊಂಡು ಹೋಗಿ ಹಣ ಕೇಳಿದ ಉದಾಹರಣೆಯೇ ಇಲ್ಲ. ದುಡಿದ ದುಡ್ಡು, ನಿಯತ್ತಿನ ವ್ಯಾಪಾರ, ಬಂದೇ ಬರುತ್ತೆ ಎಂಬ ವಿಶ್ವಾಸ ಅವರದು. ಅವರ ಜನಪ್ರಿಯತೆ ಹೀಗೆಯೇ ಬೆಳೆದು ಅವರ ವ್ಯವಹಾರ ಹೆಚ್ಚುತ್ತಾ ಹೋಯಿತು. ಅವರ ಜೀವನ ಶೈಲಿಯಲ್ಲಿ ಯಾವ ಹೆಚ್ಚುಗಾರಿಕೆಯೂ ಇರಲಿಲ್ಲ. ಉದ್ದನೆಯ ಗಡ್ಡ, ಜುಬ್ಬಾ ಪೈಜಾಮ ಟೋಪಿ ಎಲ್ಲವೂ ಬಿಳಿಯದೇ. ತಮ್ಮಿಂದ ತೆಗೆದುಕೊಂಡು ಹೋದ ವಸ್ತುಗಳು ಹಾಳಾಗಿದ್ದರೆ, ಬಳಸಿದ ನಂತರ ಮಿಕ್ಕಿದ್ದರೆ ತಮಗೇ ವಾಪಸ್ ಕೊಡುವಂತೆ ಹೇಳಿ ಕಳಿಸುತ್ತಿದ್ದರು. ಇದು ಅವರು ಲೌಕಿಕ ಜಗತ್ತಿಗೆ ತೋರಿದ ನಿಯತ್ತು.

ಮಸೀದಿಯ ಪಕ್ಕದ ಮನೆಯಲ್ಲಿ ವಾಸವಿದ್ದ ಅವರಿಗೆ ಒಬ್ಬ ಮಗ, ಇಬ್ಬರು ಹೆಣ್ಣುಮಕ್ಕಳು. ಪತ್ನಿ ಎಂದೂ ಮನೆಯ ಮುಂದಿನ ರಸ್ತೆಯನ್ನೂ ನೋಡಿರಲಿಲ್ಲ. ಮಕ್ಕಳಿಗೆ ನಿತ್ಯವೂ ಕುರ್‌ಆನ್ ಓದಿಸುವುದು, ನಮಾಜಿನ ತರೀಖಾ ಹೇಳಿಕೊಡುವುದು, ಐದು ಹೊತ್ತೂ ನಮಾಜು ಮಾಡಿ ಬರುವುದು ಅವರ ದಿನಚರಿ.

ಮಕ್ಕಳು ಬೆಳೆದಂತೆ ಸಾಮಾನ್ಯ ಶಿಕ್ಷಣಕ್ಕೆ ಸೇರಿಸಿದರು. ಅವರಿಗೆ ಧಾರ್ಮಿಕ ಶಿಕ್ಷಣದ ಬಗೆಗಿನ ಕಾಳಜಿ ಹೆಚ್ಚು. ಸಾರ್ವಜನಿಕ ಶಿಕ್ಷಣವು ಲಾಭಕೋರವೂ ಅನೈತಿಕವೂ ಆಗಿದೆ ಎಂಬುದು ಅವರ ಸ್ಪಷ್ಟ ನಿಲುವು. ಮಕ್ಕಳನ್ನು ಅಂಥ ಶಿಕ್ಷಣದ ಭಾಗವಾಗಿಸುವುದು ಎಂದರೆ, ಧರ್ಮ ಮತ್ತು ಅದರ ಅಲೌಕಿಕ ಮಹತ್ವದಿಂದ ದೂರವಿಡುವ ಕ್ರಮ ಎಂದೇ ಅವರು ಭಾವಿಸಿದ್ದರು. ಈ ಜೀವನದಲ್ಲಿ ಬದುಕಿ ತೋರಿಸಿ ಸಾಧಿಸುವ ನೈತಿಕತೆಯೇ ಮರಣದ ನಂತರ ದೊರಕುವ ಮುಕ್ತಿಗೆ ರಹದಾರಿ ಎಂದವರು ಆಳವಾಗಿ ನಂಬಿದ್ದರು. ಪ್ರತಿದಿನ ಬೆಳಗಿನ ನಮಾಜಿಗೆ ಮೊದಲು ನಿಯತ್ತು ಮಾಡುವ ವಿಧಾನ ಅವರನ್ನು ತೀವ್ರವಾಗಿ ಪ್ರಭಾವಿಸಿತ್ತು. ಪ್ರತಿ ದಿನವೂ ಯಾರನ್ನೂ ನೋಯಿಸದಂತೆ ನ್ಯಾಯಯುತವಾಗಿ ಜೀವಿಸುವಂತೆ ನನಗೆ ಪ್ರೇರೇಪಿಸು ಎಂದು ದೇವರಲ್ಲಿ ಮೊರೆಯಿಟ್ಟು ಹಾಗೆಯೇ ಬದುಕುತ್ತಿದ್ದರು.

ಅವರ ಬದುಕು ಇತರರಿಗೆ ಆದರ್ಶವಾದಂತೆ ಅವರ ಮಕ್ಕಳಿಗೆ ಆಗಲಿಲ್ಲ. ಚಂದ್ರನನ್ನು ಮೀಟುವ, ತಾರೆಗಳ ದಾಟುವ ಕನಸುಗಳು ಬತ್ತಿ ಹೋಗಿ ಕಾಣದೂರಿನ ಸುಖದ ಹಂಬಲ ಬಿತ್ತಿದ ಧಾರ್ಮಿಕತೆಯ ಬಗ್ಗೆ ಅವರಿಗೆ ನಿರಾಸೆಯೇ ಹುಟ್ಟಿತ್ತು. ಹೀಗಿರುವಾಗ ಬಷೀರ್ ಸಾಹೇಬರು ತೀರಿಕೊಂಡರು. ಇದು ಬದುಕಿನ ಸಂಕೀರ್ಣತೆ. ಸಮಾಜ ಮತ್ತು ಧರ್ಮ ಹೀಗೆ ಸಮಾನಾಂತರದಲ್ಲಿ ಪ್ರತ್ಯೇಕವಾಗಿ ಸಾಗುತ್ತಿವೆ. ಆದರೆ ಒಂದು ಇನ್ನೊಂದನ್ನು ಪ್ರಭಾವಿಸುತ್ತಾ ಒಳಿತಿನ ದಾರಿ ನಿರ್ದೇಶಿಸಬೇಕು ಎನ್ನುವುದು ಎಲ್ಲರ ಆಶಯ.

ಧಾರ್ಮಿಕತೆಯನ್ನು ಅಂತರಂಗಕ್ಕೆ ಇಳಿಸಿಕೊಂಡವರ ಸಾಮಾಜಿಕ ನಡೆಗಳು ಅತ್ಯುನ್ನತ ಮಟ್ಟದಲ್ಲಿವೆ ಎಂಬುದು ಖಾತ್ರಿಯಾಗದಿದ್ದರೆ ಅದು ಬಹುಕೃತವೇಷವಲ್ಲದೆ ಬೇರೇನಲ್ಲ. ಹಿಂಸೆ, ದುರಾಸೆ, ಸುಳ್ಳು, ಸೇಡು, ಲಂಚ, ಕೋಪಗಳಿಂದ ಕೂಡಿದವರ ಯೋಗ, ಪೂಜೆ, ನಮಾಜು ತೋರುಂಬ ಲಾಭ ಮಾತ್ರ.

ಬಷೀರ್ ಸಾಹೇಬರು ಬದುಕಿದ್ದಾಗ ಅವರಿಂದ ಸಾಲ ಪಡೆದವರೆಲ್ಲ ಒಬ್ಬೊಬ್ಬರೇ ಬಂದು ಮಕ್ಕಳಿಗೆ ಕೊಟ್ಟು ಅಪ್ಪನಂತೆ ಬದುಕಲು ಹೇಳಿಹೋದರು. ಅಪ್ಪ ಬಿತ್ತಿದ ನೀತಿ ನಿಯತ್ತಿನ ಬೀಜಗಳು ಎಲ್ಲೆಲ್ಲೋ ಮೊಳಕೆಯೊಡೆದು ಚಿಗುರಿ ಮನೆ ಮಕ್ಕಳಾದಿಯಾಗಿ ಕುಳಿತು ಉಣ್ಣುವಂತಾದ ಫಲವಂತಿಕೆಗೆ ಬೆಲೆಕಟ್ಟಲಾದೀತೇ? ಹಿರಿಯರ ನಿಯತ್ತು ನಮ್ಮನ್ನು ಕಾಯುತ್ತಿರುವಾಗ, ಅದನ್ನು ಮುಂದಿನ ಪೀಳಿಗೆಗೆ ದಾಟಿಸುವ ಹೊಣೆ ನಮಗಿರಬೇಕಲ್ಲವೇ? ❖

ಗುಂಡಣ್ಣ



ಪದಬಂಧ 6413

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾತೆಯಲ್ಲಿಯೇ ಮತ್ತು ಬಂದಿದೆಯಲ್ಲಾ! (4)
3.ಮುಸಲ್ಮಾನರ ದೊರೆ (3)
5.ರೀತಿಯೊಡಗೂಡುವ ಜೋಡುನುಡಿ (3)
6.ಬೂಟಾಟಿಕೆ ಸ್ವಭಾವದವಳು (4)
7.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
11.ಪಣದಲ್ಲಿನ ಅಳತೆ (4)
12.ಒಳ್ಳೆಯ ಸ್ವಭಾವ (3)
15.ದೀಪಕ್ಕೆ ಮುತ್ತುವ ಹುಳು (3)
16.ಈತ ಮನೆಯಿಲ್ಲದವನು (4)

ಮೇಲಿಂದ ಕೆಳಕ್ಕೆ

1.ಸೋದರ ಮಾವನ ಹೆಂಡತಿ (2)
2.ವಾದ್ಯ ನುಡಿಸುವವನು ತಿರುಗಿದ್ದಾನಲ್ಲಾ! (3)
4.ಪ್ರತಿಚ್ಛಾಯೆ ಉಲ್ಟಾ ಆಗಿದೆ (4)
5.ಸೋಜಿಗದ ಸಂಗತಿ ತಿರುವು ಮುರುವಾಗಿದೆಯಲ್ಲಾ? (3)
6.ಅಸಾಮಾನ್ಯವಾದ ವ್ಯಕ್ತಿ ತಿರುಗಿದ್ದಾನಲ್ಲಾ (3)
8.ಹಂತಹಂತವಾಗಿ ಎಂದು ಹೀಗೆನ್ನಿ (3)
9.ಬಾಣ ಹಿಡಿದು ಬಂದಿರುವ ಶೈವ ಭಕ್ತ (3)
10.ಅಪ್ಪನ ಈ ರೂಪ ಅತಿ ವಿರಳ! (4)
13.ಮಾನಿನಿಗೆ ಬಂದಿರುವ ಸಂಶಯ (3)
14.ಅಜ್ಞಾತದಲ್ಲಿ ತಿಳಿದವನಿದ್ದಾನೆ (2)

1		2		■	■	3		4
	■		■	■	■	■	■	
■	5			■	6			
■		■	■	■		■	■	
■	7		8				9	■
10	■	■		■	■	■		■
11				■	12	13		■
	■	■	■	■	■		■	14
15			■	■	16			

6412ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಲರವಿ 3.ಮುಸಲ್ಮಾನ
5.ಪ್ರಸಾದ 7.ಕಸ
9.ಅಂಕ 10.ತಂಗಳು
11.ಅಂಗಡಿ 12.ಮಾಸು
13.ತಮ 15.ಮಹಡಿ
17.ವರ್ಧಮಾನ 18.ಅಕಲಂಕ

ಮೇಲಿಂದ ಕೆಳಕ್ಕೆ:
1.ಬಾಲಕ 2.ವಿಪ್ರ
3.ಮುದ 4.ನಡುಕ
6.ಸಾಮೂಹಿಕವಿವಾಹ
8.ಸವಿಗನಸು 9.ಅಂಕಗಣಿತ
12.ಮಾರ್ದವ 14.ಮರುಕ
15.ಮನ 16.ಡಿಅ

ಸುಡೊಕು 6796

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			2		3		
3		6	5		8		1	
	4			7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

6795 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಮೇ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ದಶಮಿ ಗಂ. 29-11 ನಕ್ಷತ್ರ: ಉತ್ತರ ಫಲ್ಗುಣಿ ಗಂ. 28-09 ಯೋಗ: ವಜ್ರ ಗಂ. 27-15 ಕರಣ: ತೈತಿಲ ಗಂ. 16-47, ವೃಷಭ ಮಾಸದ 10 ನೇ ದಿನ. ಮಳೆ ನಕ್ಷತ್ರ : ರೋಹಿಣಿ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ,ಸೂರ್ಯೋದಯ : 06-07 ಸೂರ್ಯಾಸ್ತ : 06-48,ಮುಸ್ಲಿಂ ದಿನಾಂಕ : 08 ದುಲ್ ಹಿಜ್ಜಾ ,ಅದೃಷ್ಟ ಸಂಖ್ಯೆ : 3, 8

ಮೇಷ: ಈಶ್ವರನ ಅನುಗ್ರಹ ಸಂಪೂರ್ಣವಿದ್ದು ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕ. ಲೇವಾದೇವಿ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದ ಇರಿ.

ವೃಷಭ: ಆಗುಹೋಗುಗಳ ಬಗ್ಗೆ ತಲೆಕೆಡಿಸಿ ಕೊಳ್ಳಬೇಡಿ. ಕೆಲಸದಲ್ಲಿ ಅಥವಾ ಕೆಲಸದ ಜಾಗವನ್ನು ಬದಲಾವಣೆ ಮಾಡುವುದು ಸರಿಯಲ್ಲ. ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಿ.

ಮಿಥುನ: ಗೊಂದಲದ ಸಮಸ್ಯೆಗೆ ಅನುಭವಿಗಳ ಸಲಹೆ ಪಡೆಯಿರಿ. ಶುದ್ಧಹಸ್ತದ ಗುಣದಿಂದ ವ್ಯಕ್ತಿಯೊಬ್ಬರ ಜೊತೆ ಕೆಲಸ ಮಾಡುವ ಅವಕಾಶ ಸಿಗುತ್ತದೆ. ಉದರ ಸಂಬಂಧಿ ಅನಾರೋಗ್ಯ ಎದುರಾಗಬಹುದು.

ಕರ್ಕಾಟಕ: ಆಫೀಸಿನಲ್ಲಿ ಸ್ವಪ್ರಯತ್ನದ ಜೊತೆಯಲ್ಲಿ ಅಧಿಕಾರಿಗಳ ಬೆಂಬಲದಿಂದ ಬಡ್ತಿ ಹೊಂದಬಹುದು. ಸಿಹಿ ಪದಾರ್ಥಗಳ ಮಾರಾಟಗಾರರಿಗೆ ಉತ್ತಮ ಆದಾಯ.

ಸಿಂಹ: ಮೆಕ್ಯಾನಿಕಲ್ ಎಂಜಿನಿಯರ್‌ಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆ ಸಾಧ್ಯತೆ. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಅವಕಾಶಗಳು ಸಿಗಲಿವೆ.

ಕನ್ಯಾ: ನಿಮ್ಮ ಯಶಸ್ಸಿಗೆ ಕಾರಣರಾದವರನ್ನು ಕಾರ್ಯ ಮುಗಿಯುವವರೆಗೆ ಜೊತೆಯಲ್ಲಿಯೆ ಇರಿಸಿಕೊಳ್ಳಿ. ಜನರೊಂದಿಗೆ ಹೆಚ್ಚು ಬೆರೆಯುವುದನ್ನು ಅಭ್ಯಾಸ ಮಾಡಿಕೊಂಡಲ್ಲಿ ವ್ಯವಹಾರ ಸುಗಮವಾಗುವುದು.

ತುಲಾ: ವ್ಯಾವಹಾರಿಕವಾಗಿ ಅಲ್ಲದೆ ಪಾರಮಾರ್ಥಿಕ ದೃಷ್ಟಿಯಲ್ಲಿಯೂ ವಿಷಯಗಳನ್ನು ಯೋಚನೆ ಮಾಡುವುದು ಉತ್ತಮ. ಮಗಳ ವಿದ್ಯಾಭ್ಯಾಸದಲ್ಲಿನ ಪ್ರಗತಿಯಿಂದಾಗಿ ಆನಂದ ಉಂಟಾಗುತ್ತದೆ.

ವೃಶ್ಚಿಕ: ಸ್ಪರ್ಧಾತ್ಮಕ ವಿಚಾರಗಳಲ್ಲಿ ಚಾಣಾಕ್ಷ ಹಾಗೂ ಬಲಾಢ್ಯ ಪ್ರತಿಸ್ಪರ್ಧಿಗಳು ಎದುರಾಗುವರು. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ.

ಧನು: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದ ಇರಿ. ಧರ್ಮಕಾರ್ಯದಲ್ಲಿ ಆಸಕ್ತಿ ಹೆಚ್ಚಿ ಅದರಿಂದ ಉತ್ತಮ ಶುಭ ಫಲ ಕಾಣುವಿರಿ. ನಿವೇಶನ ಕೊಳ್ಳಲು ಸೂಕ್ತಸ್ಥಳದ ಹುಡುಕಾಟ ನಡೆಸುವಿರಿ.

ಮಕರ: ಲೆಕ್ಕಚಾರದ ಜವಾಬ್ದಾರಿಯನ್ನು ಹೊತ್ತಿರುವವರು ಗಮನದಿಂದ ಕೆಲಸ ನಿರ್ವಹಿಸಿ, ಇಲ್ಲವಾದಲ್ಲಿ ಸಮಸ್ಯೆಗೆ ಸಿಲುಕಬಹುದು. ಬಹಳ ದಿನದ ನಂತರದ ಹಳೆಯ ಮಿತ್ರನೊಬ್ಬನ ಭೇಟಿ ಮನಸ್ಸಿಗೆ ಮುದ ತರುವುದು.

ಕುಂಭ: ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸಿ. ನಟನೆ ವೃತ್ತಿಯವರಿಗೆ ಜನಪ್ರಿಯತೆ ಮತ್ತು ಅವಕಾಶವಿರುವುದು. ನೀವಂದುಕೊಂಡ ಕೆಲಸ ನಿಮ್ಮಂತೆಯೇ ನಡೆಯುತ್ತದೆ.

ಮೀನ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಿ. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳು ಪ್ರಗತಿ ಕಾಣುವರು. ಸಾಲಗಳು ತೀರಿ ನೆಮ್ಮದಿ ಮೂಡಲಿವೆ.

ಪೆಟ್ರೋಲ್ ಖರೀದಿಗೆ ಸಾಲು

ಪಿಟಿಐ ಚಿತ್ರ



ಬಿಹಾರದ ಪಟ್ನಾದಲ್ಲಿ ಗ್ರಾಹಕರು ಪೆಟ್ರೋಲ್ ಖರೀದಿಸಲು ಭಾನುವಾರ ಮುಗಿಬಿದ್ದಿದ್ದರು

ಗೃಹ ಸಾಲ ತೀರಿಸಲು ಸೂಪರ್ ಟ್ರಿಕ್

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಮುಂಚಿತವಾಗಿ ಸಾಲದ ಹಣ ಪಾವತಿಸುವುದರಿಂದ ಆಗುವ ಲಾಭ

ಸಾಲದ ಪರಿಸ್ಥಿತಿ	ಒಟ್ಟು ಪಾವತಿಸುವ ಬಡ್ಡಿ (₹ಗಳಲ್ಲಿ)	ಆಗುವ ನಿವ್ವಳ ಉಳಿತಾಯ (₹ಗಳಲ್ಲಿ)	ಕಡಿತವಾಗುವ ಸಾಲದ ಅವಧಿ
ಯಾವುದೇ ಹೆಚ್ಚುವರಿ ಪಾವತಿ ಮಾಡದಿದ್ದರೆ	54,13,879	0	20 ವರ್ಷಗಳು (ಪೂರ್ತಿ)
1ನೇ ವರ್ಷದಲ್ಲಿ (12ನೇ ತಿಂಗಳು) ₹2.5 ಲಕ್ಷ ಕಟ್ಟಿದರೆ	44,55,000	9.58 ಲಕ್ಷ	24 ತಿಂಗಳು (2 ವರ್ಷ ಕಡಿಮೆ)
5ನೇ ವರ್ಷದಲ್ಲಿ (60ನೇ ತಿಂಗಳು) ₹2.5 ಲಕ್ಷ ಕಟ್ಟಿದರೆ	47,15,000	6.98 ಲಕ್ಷ	17 ತಿಂಗಳು ಕಡಿಮೆ
10ನೇ ವರ್ಷದಲ್ಲಿ (120ನೇ ತಿಂಗಳು) ₹2.5 ಲಕ್ಷ ಕಟ್ಟಿದರೆ	50,45,000	3.68 ಲಕ್ಷ	10 ತಿಂಗಳು ಕಡಿಮೆ

ಸ್ವಂತದೊಂದು ಮನೆ ಇರಬೇಕು ಅನ್ನೋದು ಪ್ರತಿಯೊಬ್ಬರ ಜೀವಮಾನದ ಕನಸು. ಆದರೆ, ಈ ಕನಸಿನ ಜೊತೆಗೆ 20-30 ವರ್ಷ ಬೆನ್ನೇರಿ ಬರುವ ಗೃಹಸಾಲದ ಕಂತು (ಇಎಂಐ) ನೆನೆಸಿಕೊಂಡರೆ ಎದೆಬಡಿತ ಜಾಸ್ತಿಯಾಗುತ್ತದೆ. ನನ್ನ ಇಡೀ ಆಯುಷ್ಯ ಈ ಸಾಲ ತೀರಿಸುವುದರಲ್ಲೇ ಮುಗಿದು ಹೋಗುತ್ತಾ? ಅಂತ ಅದೆಷ್ಟೋ ಜನ ತಲೆ ಕೆಡಿಸಿಕೊಳ್ಳುತ್ತಾರೆ. ಆದರೆ ನಿಮಗೊಂದು ಸತ್ಯ ಗೊತ್ತಾ? ನಿಮ್ಮ ಗೃಹ ಸಾಲದ ಹಾದಿಯಲ್ಲೇ ಒಂದು ಉತ್ತಮವಾದ ಆಫರ್ ಅಡಗಿದೆ! ಸಾಲ ಶುರುವಾದ ಮೊದಲ 5 ವರ್ಷ ಇದೆಯಲ್ಲ, ಅದು ಬಡ್ಡಿ ಹಣ ಉಳಿಸೋಕೆ ಸಿಗೋ ಬಂಗಾರದಂತ ಅವಕಾಶ. ಈ ಸಮಯದಲ್ಲಿ ಸ್ವಲ್ಪ ಯೋಚಿಸಿ, ಕೈಗೆ ಸಿಕ್ಕ ಒಂದಿಷ್ಟು ಹೆಚ್ಚುವರಿ ಹಣವನ್ನು ಮುಂಚಿತವಾಗಿಯೇ ಸಾಲಕ್ಕೆ ಜಮಾ ಮಾಡಿದರೆ (ಪ್ರೀಪೇಮೆಂಟ್), ವರ್ಷಗಟ್ಟಲೆ ಸಾಲದ ಅವಧಿನೂ ಕಡಿಮೆಯಾಗುತ್ತದೆ, ಲಕ್ಷಾಂತರ ರೂಪಾಯಿ ದುಡ್ಡು ನಿಮ್ಮ ಜೇಬಲ್ಲೇ ಉಳಿಯುತ್ತದೆ.

ಆರಂಭದಲ್ಲಿ ಅಸಲಿಗಿಂತ ಬಡ್ಡಿಯೇ ಹೆಚ್ಚು: ಮೊದಲ 5 ವರ್ಷ ಏಕೆ ಅಷ್ಟು ಮುಖ್ಯ ಅಂತ ತಿಳಿದುಕೊಳ್ಳಬೇಕಾದರೆ, ಬ್ಯಾಂಕ್‌ನವರು ಇಎಂಐ ಹೇಗೆ ಲೆಕ್ಕ ಹಾಕುತ್ತಾರೆ ಅಂತ ನೋಡಬೇಕು. ಸಾಲ ತೆಗೆದುಕೊಂಡ ಹೊಸದರಲ್ಲಿ ನಿಮ್ಮ ಸಾಲದ ಮೊತ್ತ (ಅಸಲಿನ ಬಾಬ್ತು) ಬೆಟ್ಟದ ತರ ಇರುತ್ತೆ. ಬ್ಯಾಂಕುಗಳು ಬಾಕಿ ಇರುವ ಸಾಲದ ಮೇಲೆಯೇ ಬಡ್ಡಿ ಹಾಕುವುದರಿಂದ, ಆರಂಭದ ವರ್ಷಗಳಲ್ಲಿ ನೀವು ಕಟ್ಟುವ ಇಎಂಐನಲ್ಲಿ ಸಿಂಹಪಾಲು ಬಡ್ಡಿಗೆ ಹೋಗುತ್ತದೆ. ಪಾವತಿಸುವ ದುಡ್ಡಿನಲ್ಲಿ ಅಸಲು ಕರಗುವುದು ತೀರಾ ಕಡಿಮೆ. ನೇರವಾಗಿ ಹೇಳಬೇಕಾದರೆ, ಮೊದಲ ಕೆಲವು ವರ್ಷ ನೀವು ಮನೆಗಾಗಿ ದುಡ್ಡು ಕಟ್ಟುತ್ತಿರಲ್ಲ, ಬದಲಿಗೆ ಸಾಲ ಕೊಟ್ಟ ಬ್ಯಾಂಕಿಗೆ ಲಾಭ ಮಾಡಿಕೊಡಿತ್ತೀರಾ ಅಷ್ಟೇ. ವರ್ಷಗಳು ಉರುಳಿದ ಹಾಗೆ ಅಸಲು ಕಡಿಮೆಯಾಗಿ, ಆ ಮೇಲೆ ಬಡ್ಡಿ ಭಾರ ತಗ್ಗುತ್ತದೆ. ಆದರೆ, 10 ಅಥವಾ 15 ವರ್ಷ ಕಳೆದು ಸಾಲಕ್ಕೆ ಹೆಚ್ಚುವರಿ ದುಡ್ಡು ಕಟ್ಟೋಕೆ ಹೋದರೆ, ಅಷ್ಟರಲ್ಲಾಗಲೇ ಬ್ಯಾಂಕ್ ನಿಮ್ಮಿಂದ ಬರಬೇಕಾದ ಮುಕ್ಕಾಲು ಭಾಗ ಬಡ್ಡಿನ ವಸೂಲಿ ಮಾಡಿ ತೊಳೆದುಕೊಂಡಿರುತ್ತದೆ.

ಮೊದಲ 5 ವರ್ಷಗಳ ಶಕ್ತಿ: ಇದು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ₹50 ಲಕ್ಷ ಸಾಲದ ಒಂದು ಸ್ಪಷ್ಟ ಉದಾಹರಣೆಯೊಂದಿಗೆ ಗಮನಿಸೋಣ. ನೀವು ವರ್ಷಕ್ಕೆ ಶೇ 8.5 ಬಡ್ಡಿ ದರದಲ್ಲಿ, 20 ವರ್ಷದ (240 ತಿಂಗಳು) ಅವಧಿಗೆ ₹50 ಲಕ್ಷ ಗೃಹ ಸಾಲ ಪಡೆದರೆ, ನಿಮ್ಮ ತಿಂಗಳ ಇಎಂಐ ₹43,391 ಆಗಿರುತ್ತದೆ. ನೀವು ಯಾವುದೇ ಬದಲಾವಣೆ ಮಾಡದೆ ಕೇವಲ ಈ ಇಎಂಐ ಅನ್ನು ಮಾತ್ರ 20 ವರ್ಷ ಕಟ್ಟುತ್ತಾ ಹೋದರೆ, ಕೊನೆಗೆ ಕೇವಲ ಬಡ್ಡಿಯ ರೂಪದಲ್ಲೇ ಒಟ್ಟು ₹54.14 ಲಕ್ಷ ಪಾವತಿಸುತ್ತೀರಿ! ಅಂದರೆ ನೀವು ಬ್ಯಾಂಕಿನಿಂದ ಪಡೆದ ಅಸಲು ಸಾಲಕ್ಕಿಂತಲೂ ಹೆಚ್ಚಿನ ಹಣ ಬಡ್ಡಿಗೇ ಹೋಗುತ್ತದೆ. ಇದರಲ್ಲಿ ಮೊದಲ 5 ವರ್ಷಗಳಲ್ಲಿ ಏನಾಗುತ್ತದೆ ಎಂದರೆ, ಆರಂಭದ 60 ತಿಂಗಳುಗಳಲ್ಲಿ ನೀವು ಇಎಂಐ ರೂಪದಲ್ಲಿ ಬ್ಯಾಂಕಿಗೆ ಒಟ್ಟು ₹26.03 ಲಕ್ಷ ಪಾವತಿಸಿರುತ್ತೀರಿ. ಆದರೆ ಶಾಕಿಂಗ್ ವಿಷಯ ಏನೆಂದರೆ, ನೀವು ಕಟ್ಟಿದ ಈ ₹26.03 ಲಕ್ಷದಲ್ಲಿ ಬರೋಬ್ಬರಿ ₹19.85 ಲಕ್ಷ ಹಣ ಕೇವಲ ಬಡ್ಡಿ ಆಗಿರುತ್ತದೆ. ನಿಮ್ಮ ₹50 ಲಕ್ಷದ ಅಸಲು ಸಾಲದಿಂದ ಕರಗಿರುವುದು ಬರೀ ₹6.18 ಲಕ್ಷ ಮಾತ್ರ. ಹೀಗೆ ಸಾಮಾನ್ಯ ಇಎಂಐ ಮೂಲಕ ನಿಮ್ಮ ಅಸಲು ಸಾಲವು ಆರಂಭದಲ್ಲಿ ತುಂಬಾ ನಿಧಾನವಾಗಿ ಕರಗುವುದರಿಂದ, ಸಾಲ ಮುಗಿಯುವ ತನಕ ಕಾಯದೆ ಮೊದಲೇ ನೀವು ಮಾಡುವ ಒಂದು ಸಣ್ಣ ಹೆಚ್ಚುವರಿ ಪಾವತಿ (ಪ್ರೀಪೇಮೆಂಟ್) ನಿಮ್ಮ ಪಾಲಿಗೆ ದೊಡ್ಡ ಪವಾಡವನ್ನೇ ಮಾಡಬಲ್ಲದು.

ಬೇಗ ಪಾವತಿಸಿದರೆ ಲಾಭ, ತಡ ಮಾಡಿದರೆ ನಷ್ಟ: ನಿಮ್ಮ ಸಾಲದ ಅವಧಿಯ ವಿಭಿನ್ನ ಹಂತಗಳಲ್ಲಿ ನೀವು ಒಮ್ಮೆಗೆ ₹2.5 ಲಕ್ಷ (ಒಟ್ಟು ಸಾಲದ ಕೇವಲ ಶೇ 5 ರಷ್ಟು) ಹೆಚ್ಚುವರಿ ಪಾವತಿ ಮಾಡಿದರೆ ಏನಾಗುತ್ತದೆ ಎಂಬುದನ್ನು ಪಟ್ಟಿಯಲ್ಲಿ ನೋಡಿ.

ಪ್ರಮುಖ ಒಳನೋಟಗಳು: ಸಾಲ ಕಟ್ಟುವ ವಿಷಯದಲ್ಲಿ ನಮಗೆ ಸಿಗುವ ಅತ್ಯಂತ ಪ್ರಮುಖ ಒಳನೋಟವೇನೆಂದರೆ, ಮೊದಲ ವರ್ಷದ ಕೊನೆಯಲ್ಲಿ ನೀವು ಮುಂಚಿತವಾಗಿ ಕಟ್ಟುವ ₹2.5 ಲಕ್ಷ ಹಣವು, ನಿಮಗೆ ಬಡ್ಡಿಯಲ್ಲಿ ಬರೋಬ್ಬರಿ ₹9.6 ಲಕ್ಷಗಳನ್ನು ಉಳಿಸಿಕೊಡುತ್ತದೆ. ಅಷ್ಟೇ ಅಲ್ಲದೆ, ನಿಮ್ಮ ಸಾಲದ ಅವಧಿಯನ್ನು ಪೂರ್ತಿ 2 ವರ್ಷಗಳಷ್ಟು ಕಡಿಮೆ ಮಾಡುತ್ತದೆ. ಆದರೆ, ಇದೇ ಪಾವತಿಯನ್ನು ನೀವು ತಡ ಮಾಡಿದರೆ ಭಾರಿ ನಷ್ಟ ಅನುಭವಿಸಬೇಕಾಗುತ್ತದೆ. ಅಂದರೆ, ಇದೇ ₹2.5 ಲಕ್ಷ ಹಣವನ್ನು ನೀವು ಸಾಲ ತೆಗೆದುಕೊಂಡ 10ನೇ ವರ್ಷದಲ್ಲಿ ಪಾವತಿಸಿದರೆ, ನಿಮಗಾಗುವ ಉಳಿತಾಯ ₹3.68 ಲಕ್ಷಕ್ಕೆ ಕುಸಿದು ಹೋಗುತ್ತದೆ. ಹಾಗಾಗಿ, ಗೃಹ ಸಾಲ ಮುಂಚಿತವಾಗಿ ತೀರಿಸುವ ನಿರ್ಧಾರವನ್ನು ಎಷ್ಟು ಬೇಗ ತೆಗೆದುಕೊಂಡರೆ ಅಷ್ಟು ಲಾಭ, ತಡ ಮಾಡಿದಷ್ಟೂ ನಷ್ಟ ಗ್ಯಾರಂಟಿ.

ಮೊದಲ 5 ವರ್ಷಗಳಲ್ಲಿ ಅನುಸರಿಸಬೇಕಾದ 3 ತಂತ್ರಗಳು

ಈ ಲಾಭ ಪಡೆಯಲು ನಿಮ್ಮ ಹತ್ತಿರ ಒಮ್ಮೆಗೆ ದೊಡ್ಡ ಮೊತ್ತದ ಹಣವೇ ಇರಬೇಕೆಂದಿಲ್ಲ. ಈ ಸರಳ ತಂತ್ರಗಳನ್ನು ಬಳಸಬಹುದು:

1. **ಹೆಚ್ಚುವರಿ ಇಎಂ ನಿಯಮ:** ವರ್ಷಕ್ಕೆ ಕೇವಲ ಒಂದು ಹೆಚ್ಚುವರಿ ಇಎಂಐ ಮೊತ್ತವನ್ನು ಸಾಲಕ್ಕೆ ಕಟ್ಟಿ. ಇದನ್ನು ಮೊದಲ ವರ್ಷದಿಂದಲೇ ಜಾರಿಗೆ ತಂದರೆ, 20 ವರ್ಷಗಳ ಸಾಲವು ಸುಮಾರು 17 ವರ್ಷಕ್ಕೆ ಇಳಿಯುತ್ತದೆ ಮತ್ತು ₹7 ಲಕ್ಷಕ್ಕೂ ಹೆಚ್ಚು ಹಣ ಉಳಿಯುತ್ತದೆ.
2. **ಶೇ 5ರಷ್ಟು ವಾರ್ಷಿಕ ಟಾಪ್-ಅಪ್:** ಪ್ರತಿ ವರ್ಷ ನಿಮ್ಮ ಸಂಬಳ ಅಥವಾ ಉದ್ಯಮದ ಆದಾಯ ಹೆಚ್ಚಾದಂತೆ, ನಿಮ್ಮ ಇಎಂಐ ಮೊತ್ತವನ್ನು ಕೇವಲ ಶೇ 5ರಷ್ಟು ಹೆಚ್ಚಿಸಿ. ಇದನ್ನು ಆರಂಭದ ವರ್ಷದಿಂದಲೇ ಮಾಡಿದರೆ, ನಿಮ್ಮ ಸಾಲದ ಅವಧಿ ಅರ್ಧಕ್ಕರ್ಧ ಕಡಿಮೆಯಾಗುತ್ತದೆ.
3. **ಬೋನಸ್ ಹಣವನ್ನು ಬಳಸಿ:** ಕಚೇರಿಯಿಂದ ಸಿಗುವ ವಾರ್ಷಿಕ ಬೋನಸ್, ಟ್ಯಾಕ್ಸ್ ರಿಫಂಡ್ ಅಥವಾ ಮೆಚ್ಯೂರ್ ಆಗುವ ಇನ್ಶೂರೆನ್ಸ್ ಪಾಲಿಸಿ, ನಿಶ್ಚಿತ ಠೇವಣಿ ಹಣವನ್ನು ಬೇರೆಡೆ ಖರ್ಚು ಮಾಡುವ ಮುನ್ನ, ಮೊದಲ 60 ತಿಂಗಳ ಅವಧಿಯಲ್ಲಿ ನೇರವಾಗಿ ಗೃಹ ಸಾಲದ ಖಾತೆಗೆ ಜಮಾ ಮಾಡಿ.

ಕಿವಿಮಾತು: ಗೃಹ ಸಾಲದ ವಿಷಯಕ್ಕೆ ಬಂದರೆ ಕಾಲವೇ ಹಣ. ಕೊನೆಯ 5 ವರ್ಷಗಳಲ್ಲಿ ನೀವು ಕಟ್ಟುವ ಒಂದು ರೂಪಾಯಿಗಿಂತ, ಆರಂಭದ 5 ವರ್ಷಗಳಲ್ಲಿ ಕಟ್ಟುವ ಒಂದು ರೂಪಾಯಿಗೆ ಬಡ್ಡಿ ಉಳಿಸುವ ಶಕ್ತಿ ಹತ್ತು ಪಟ್ಟು ಹೆಚ್ಚಿರುತ್ತದೆ. ಆರಂಭದಲ್ಲೇ ಸಾಲದ ಮೇಲೆ ಆಕ್ರಮಣಕಾರಿ ಪಾವತಿ ಮಾಡುವ ಮೂಲಕ ಬ್ಯಾಂಕಿನ ಚಕ್ರವ್ಯೂಹದಿಂದ ಹೊರಬನ್ನಿ, ನಿಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಬೇಗನೆ ಪಡೆದುಕೊಳ್ಳಿ ಮತ್ತು ನಿಮ್ಮ ಕಷ್ಟದ ಗಳಿಕೆಯ ಲಕ್ಷಾಂತರ ರೂಪಾಯಿಗಳನ್ನು ನಿಮ್ಮ ಸ್ವಂತ ಜೇಬಿನಲ್ಲೇ ಉಳಿಸಿಕೊಳ್ಳಿ.

ಸಾಗಣೆ ವೆಚ್ಚ ಶೇ 19ರಷ್ಟು ಏರಿಕೆ



ನವದೆಹಲಿ (ಪಿಟಿಐ): ಭಾರತ ಸೇರಿದಂತೆ ಏಷ್ಯಾ ಪೆಸಿಫಿಕ್ ಪ್ರದೇಶದಲ್ಲಿ ಪ್ರಸಕ್ತ ವರ್ಷದ ಮಾರ್ಚ್‌ನಿಂದ ಮೇ ತಿಂಗಳ ಇದುವರೆಗೆ ಸಾಗಣೆ ವೆಚ್ಚವು ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ 19ರಷ್ಟು ಏರಿಕೆಯಾಗಿದೆ ಎಂದು ಸರಕುಗಳ ಸೇವೆ ನೀಡುವ ಫಾರ್ ಐ ಸಂಸ್ಥೆಯ ವರದಿ ತಿಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷವು ಇಂಧನ ಪೂರೈಕೆ ಮೇಲೆ ಪರಿಣಾಮ ಬೀರಿದೆ. ಅಲ್ಲದೆ, ಇಂಧನ ದರ ಏರಿಕೆ, ಕಾರ್ಮಿಕರ ವೆಚ್ಚ ಹೆಚ್ಚಳ ಸೇರಿದಂತೆ ವಿವಿಧ ಅಂಶಗಳು ಸಾಗಣೆ ವೆಚ್ಚ ಏರಿಕೆಗೆ ಕಾರಣವಾಗಿವೆ ಎಂದು ಹೇಳಿದೆ.

ದೇಶದಲ್ಲಿನ ಕ್ವಿಕ್ ಕಾಮರ್ಸ್ ವಲಯವು 10 ನಿಮಿಷ, 20 ನಿಮಿಷದಲ್ಲಿ ಸರಕುಗಳನ್ನು ಗ್ರಾಹಕರಿಗೆ ತಲುಪಿಸುತ್ತಿವೆ. ಇದು ಕೋಟ್ಯಂತರ ರೂಪಾಯಿ ಹೂಡಿಕೆಯನ್ನು ಆಕರ್ಷಿಸಿದೆ. ಗ್ರಾಹಕರು ತ್ವರಿತವಾಗಿ ಸೇವೆಯನ್ನು ಬಯಸುತ್ತಿಲ್ಲ. ಅವರು ತಮ್ಮ ವಿತರಣೆ ಯಾವಾಗ ಬರುತ್ತದೆ ಎಂದು ತಿಳಿದುಕೊಳ್ಳಲು ಬಯಸುತ್ತಿದ್ದಾರೆ. ಶೇ 60ರಷ್ಟು ಗ್ರಾಹಕರು ನಿರ್ದಿಷ್ಟ ಸಂದರ್ಭಗಳಲ್ಲಿ ಹೆಚ್ಚಿನ ಹಣ ಪಾವತಿಸಲು ಸಿದ್ಧರಿದ್ದಾರೆ ಎಂದು ತಿಳಿಸಿದೆ. 500ಕ್ಕೂ ಹೆಚ್ಚು ಸಾಗಣೆ ಸೇವೆ ನೀಡುವ ಸಂಸ್ಥೆಗಳು ನೀಡಿದ ಮಾಹಿತಿಯನ್ನು ಆಧರಿಸಿ ವರದಿ ಸಿದ್ಧಪಡಿಸಲಾಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹610, 12 ಕ್ಕೆ ₹86
ಮೈಸೂರು: 100 ಕ್ಕೆ ₹620

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಸಿ.ಬಿ) ₹344-715
ದ್ವಿತಳಿ (ಬಿ.ವಿ) ₹455-985

ವಿದೇಶಿ ಪ್ರಯಾಣ ವೆಚ್ಚ ಇಳಿಕೆ

ಮುಂಬೈ (ಪಿಟಿಐ): ಭಾರತೀಯರು ವಿದೇಶಿ ಪ್ರಯಾಣಕ್ಕೆ ಮಾಡುವ ಖರ್ಚು ಮಾರ್ಚ್ ತಿಂಗಳಿನಲ್ಲಿ ಅಂದಾಜು ₹2,010 ಕೋಟಿಯಷ್ಟು ಕಡಿಮೆಯಾಗಿದ್ದು, ₹10,431 ಕೋಟಿಗೆ ಇಳಿದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅಂಕಿ ಅಂಶಗಳು ತಿಳಿಸಿವೆ.


ಪ್ರಸಕ್ತ ವರ್ಷದ ಜನವರಿಯಲ್ಲಿ ಭಾರತೀಯರು ವಿದೇಶಿ ಪ್ರಯಾಣಕ್ಕೆ ₹15,790 ಕೋಟಿ ಖರ್ಚು ಮಾಡಿದ್ದರು. ಇದು ಫೆಬ್ರುವರಿ ತಿಂಗಳಿನಲ್ಲಿ ₹12,441 ಕೋಟಿಯಷ್ಟಾಗಿತ್ತು.

ಮಾರ್ಚ್ ತಿಂಗಳಿನಲ್ಲಿ ದೇಶದಿಂದ ಒಟ್ಟು ₹24,786 ಕೋಟಿಯಷ್ಟು ರವಾನೆಯಾಗಿತ್ತು. ಈ ಪೈಕಿ ವಿದೇಶಿ ಪ್ರಯಾಣದ ವೆಚ್ಚ ₹10,431 ಕೋಟಿಯಾಗಿದ್ದು, ಅತಿದೊಡ್ಡ ಪಾಲು ಹೊಂದಿದೆ. ಶಿಕ್ಷಣ ಸಂಬಂಧಿತ ಪ್ರಯಾಣಕ್ಕಾಗಿ (ಶುಲ್ಕ, ವಸತಿ ನಿಲಯದ ವೆಚ್ಚಗಳು ಸೇರಿದಂತೆ) ಒಟ್ಟು ₹4,300 ಕೋಟಿ ಖರ್ಚು ಮಾಡಿದ್ದಾರೆ ಎಂದು ತಿಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ತೈಲ ದರ ಏರಿಕೆಯಾಗಿದೆ ಮತ್ತು ರೂಪಾಯಿ ಮೌಲ್ಯ ಇಳಿಕೆ ಆಗಿದೆ. ಇದು ಜನರ ವಿದೇಶಿ ಪ್ರವಾಸವನ್ನು ಕಡಿಮೆ ಮಾಡಿದೆ ಎಂದು ತಿಳಿಸಿದೆ.

ವಿದೇಶಗಳಲ್ಲಿ ವ್ಯಾಸಂಗ, ವಿದೇಶ ಪ್ರವಾಸ, ಹೂಡಿಕೆ ಸೇರಿದಂತೆ ವಿವಿಧ ವರ್ಗದಲ್ಲಿ ಭಾರತೀಯರು ಖರ್ಚು ಮಾಡುತ್ತಾರೆ ಎಂದು ತಿಳಿಸಿದೆ.

‘ಸಿಮೆಂಟ್ ಉದ್ಯಮದ ಪ್ರಗತಿ ಶೇ 8ರಷ್ಟು’



ನವದೆಹಲಿ (ಪಿಟಿಐ): ಮೂಲಸೌಕರ್ಯ ವಲಯದ ಮೇಲೆ ಸರ್ಕಾರ ಮಾಡುವ ವೆಚ್ಚವು ಏರಿಕೆಯಾಗಿದೆ ಮತ್ತು ಮನೆಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಹೀಗಾಗಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸಿಮೆಂಟ್ ವಲಯವು ಶೇ 7ರಿಂದ ಶೇ 8ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಪ್ರಮುಖ ಸಿಮೆಂಟ್ ತಯಾರಕ ಕಂಪನಿಗಳು ಅಂದಾಜಿಸಿವೆ.

ಉದ್ಯಮವು ಮೂಲಸೌಕರ್ಯ ಮತ್ತು ವಸತಿ ಬೇಡಿಕೆಯನ್ನು ಗುರಿಯಾಗಿರಿಸಿಕೊಂಡಿದ್ದು, ಇದೇ ಆರ್ಥಿಕ ವರ್ಷದಲ್ಲಿ ಬಂಡವಾಳ ವೆಚ್ಚವನ್ನು ಹೆಚ್ಚಳ ಮಾಡಲಾಗುವುದು ಎಂದು ಕಂಪನಿಗಳು ತಿಳಿಸಿವೆ.

‘ಹೆಚ್ಚಿದ ಇಂಧನ ದರ, ಸಾಗಣೆ ವೆಚ್ಚದ ಏರಿಕೆ ಮತ್ತು ಜಾಗತಿಕ ಅನಿಶ್ಚಿತತೆಯಿಂದ ಉಂಟಾಗಿರುವ ಪೂರೈಕೆ ಸರಪಳಿಯಲ್ಲಿನ ಅಡಚಣೆಯಿಂದ ವಲಯವು ಅಲ್ಪಾವಧಿವರೆಗೆ ಸವಾಲುಗಳನ್ನು ಕಾಣಲಿದೆ’ ಎಂದು ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಅತುಲ್ ಡಿ. ಹೇಳಿದ್ದಾರೆ.

ಇಂಧನ ದರ ಏರಿಕೆಯು ಸಿಮೆಂಟ್ ಕಂಪನಿಗಳ ಕಾರ್ಯಾಚರಣೆ ವೆಚ್ಚದ ಮೇಲೆ ಪರಿಣಾಮ ಬೀರಲಿದೆ. ಆದರೆ, ಸರ್ಕಾರದ ಬಂಡವಾಳ ವೆಚ್ಚ, ಮೂಲಸೌಕರ್ಯ ಯೋಜನೆಗಳು ಮತ್ತು ಮನೆಗಳಿಗೆ ಸದೃಢ ಬೇಡಿಕೆ ಇರುವುದರಿಂದ ಮುಂದಿನ ದಿನಗಳಲ್ಲಿ ವಲಯವು ಉತ್ತಮ ಬೆಳವಣಿಗೆ ಕಾಣಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಮತ್ತು ಮುಂಗಾರು ಋತು ವಲಯದ ಬೆಳವಣಿಗೆ ಮೇಲೆ ತಾತ್ಕಾಲಿಕ ಅವಧಿಯವರೆಗೆ ಪರಿಣಾಮ ಬೀರುವ ಸಾಧ್ಯತೆ ಇದ್ದು, ಬಳಿಕ ಚೇತರಿಕೆ ಕಾಣಲಿದೆ ಎಂದು ಶ್ರೀ ಸಿಮೆಂಟ್‌ನ ವ್ಯವಸ್ಥಾಪಕ ನಿರ್ದೇಶಕ ನೀರಜ್ ಅಖೌರಿ ಹೇಳಿದ್ದಾರೆ.

ಅಲ್ಟ್ರಾಟೆಕ್ ಸಿಮೆಂಟ್, ಅಂಬುಜಾ ಸಿಮೆಂಟ್, ಶ್ರೀ ಸಿಮೆಂಟ್, ದಾಲ್ಮಿಯಾ ಸಿಮೆಂಟ್ ಮತ್ತು ನುವೊಕೊ ವಿಸ್ಟಾಸ್ ನಂತಹ ಕಂಪನಿಗಳು ಇತ್ತೀಚೆಗೆ ಪ್ರಕಟಿಸಿದ ಮಾರ್ಚ್ ತಿಂಗಳ ತ್ರೈಮಾಸಿಕದ ಫಲಿತಾಂಶದಲ್ಲಿ, ಉದ್ಯಮದ ಬೆಳವಣಿಗೆ ಶೇ 8ರಷ್ಟು ಪ್ರಗತಿ ಕಾಣುವ ಅಂದಾಜಿದೆ ಎಂದು ಹೇಳಿವೆ.

ಅಲ್ಟ್ರಾಟೆಕ್ ಕಂಪನಿ ₹8 ಸಾವಿರದಿಂದ ₹10 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ. ದಾಲ್ಮಿಯಾ ಭಾರತ್ ₹3,200ರಿಂದ ₹3,400 ಕೋಟಿ, ಅಂಬುಜಾ ಸಿಮೆಂಟ್ ₹6,500 ಕೋಟಿ ಹೂಡಿಕೆ ಮಾಡಲು ಯೋಜನೆ ರೂಪಿಸಿವೆ.

ಸಕ್ಕರೆ ರಫ್ತಿಗೆ ಅನುಮತಿ

ನವದೆಹಲಿ (ಪಿಟಿಐ): ಅಮೆರಿಕಕ್ಕೆ 8,606 ಟನ್ ಕಡಿಮೆ ಸಂಸ್ಕರಿತ ಸಕ್ಕರೆ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಸುಂಕ ವಿನಾಯಿತಿ ಕೋಟಾದ (ಟಿಆರ್‌ಕ್ಯು) ಅಡಿಯಲ್ಲಿ ಸಕ್ಕರೆ ರಫ್ತಿಗೆ ಅನುಮತಿ ನೀಡಲಾಗಿದೆ. ಇದು ಸೆಪ್ಟೆಂಬರ್ ಅಂತ್ಯದವರೆಗೆ ಇರಲಿದೆ ಎಂದು ವಿದೇಶಿ ವ್ಯಾಪಾರಗಳ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಅಧಿಸೂಚನೆಯಲ್ಲಿ ತಿಳಿಸಿದೆ.

ಈ ವರ್ಷದ ಸೆಪ್ಟೆಂಬರ್ 30ರವರೆಗೆ ಸಾಮಾನ್ಯ ಸಕ್ಕರೆ ರಫ್ತಿಗೆ ನಿಷೇಧ ಹೇರಿದೆ.

ಎನ್‌ಟಿಪಿಸಿ ಲಾಭ ಶೇ 34ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣವಿದ್ಯುತ್ ನಿಗಮವು (ಎನ್‌ಟಿಪಿಸಿ) ಕಳೆದ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹10,614 ಕೋಟಿ ನಿವ್ವಳ ಲಾಭ ಗಳಿಸಿದೆ.

2024–25ರ ಇದೇ ಅವಧಿಯಲ್ಲಿ ₹7,897 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿಯ ಲಾಭದಲ್ಲಿ ಶೇ 34 ರಷ್ಟು ಏರಿಕೆಯಾಗಿದೆ ಎಂದು ನಿಗಮವು ಷೇರುಪೇಟೆಗೆ ತಿಳಿಸಿದೆ. ವರಮಾನವು ₹50,410 ಕೋಟಿಯಾಗಿದೆ.

ಯುದ್ಧ ಅಂತ್ಯ: ಇರಾನ್– ಅಮೆರಿಕ ಒಪ್ಪಿಗೆ ?

ಒಂದನೇ ಪುಟದಿಂದ...

ಭಾರತ ಪ್ರವಾಸದಲ್ಲಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿ, ‘ಮುಂದಿನ ಕೆಲವು ಗಂಟೆಗಳಲ್ಲಿ ಜಗತ್ತಿಗೆ ಒಳ್ಳೆಯ ಸುದ್ದಿ ಸಿಗುವ ಸಾಧ್ಯತೆಯಿದೆ’ ಎಂದು ತಿಳಿಸಿದ್ದಾರೆ.

‘ಈ ಪ್ರಕ್ರಿಯೆಯನ್ನು ಅಂತಿಮವಾಗಿ ಅಧ್ಯಕ್ಷರ ವಿವೇಚನೆಗೆ ಬಿಡಲಾಗುತ್ತದೆ. ವಿಶ್ವವು ಇನ್ನು ಮುಂದೆ ಇರಾನ್ ಪರಮಾಣು ಅಸ್ತ್ರದ ಕುರಿತು ಚಿಂತಿಸಬೇಕಾಗಿಲ್ಲ’ ಎಂದು ಹೇಳಿದ್ದಾರೆ.

‘ಅಮೆರಿಕ, ಇರಾನ್ ಹಾಗೂ ಇತರೆ ದೇಶಗಳನ್ನು ಒಳಗೊಂಡು ಮಾತುಕತೆ ಬಹುತೇಕ ಪೂರ್ಣಗೊಂಡಿದ್ದು, ಅಂತಿಮ ರೂಪ ಕೊಡುವುದು ಬಾಕಿ ಉಳಿದಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಕುರಿತು ಟ್ರಂಪ್ ಹೆಚ್ಚು ಒತ್ತು ನೀಡಿದ್ದಾರೆ. ಒಂದೊಮ್ಮೆ ಈ ಬೆಳವಣಿಗೆ ಯಶಸ್ವಿಯಾದರೆ, ದೀರ್ಘಕಾಲದಿಂದ ಇರಾನ್ ನಿರ್ಬಂಧದಿಂದ ಸಂಕಷ್ಟಕ್ಕೀಡಾಗಿರುವ ಇಂಧನ ಮಾರುಕಟ್ಟೆಗೆ ಪರಿಹಾರ ದೊರೆಯುವ ಸಾಧ್ಯತೆಯಿದೆ. ಯುದ್ಧಕ್ಕಿಂತ ಮೊದಲು ವಿಶ್ವದ ಐದನೇ ಒಂದು ಭಾಗದಷ್ಟು ಕಚ್ಚಾತೈಲವು ಇದೇ ಮಾರ್ಗದ ಮೂಲಕ ಪೂರೈಕೆಯಾಗುತ್ತಿತ್ತು.

ಹೊರ್ಮುಜ್ ಜಲಸಂಧಿ ಮತ್ತೆ ತೆರೆಯುವುದನ್ನು ಯುರೋಪ್‌ನ ನಾಯಕರು ಸ್ವಾಗತಿಸಿದ್ದು, ಅಮೆರಿಕದ ನಿರ್ಧಾರದ ಕುರಿತು ಆಶಾವಾದ ವ್ಯಕ್ತಪಡಿಸಿದ್ದಾರೆ.

ಒಪ್ಪಂದದ ಪ್ರಗತಿಯನ್ನು ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಶ್ಲಾಘಿಸಿದ್ದಾರೆ.

‘ಈ ಕ್ಷಣವನ್ನು ಸದುಪಯೋಗಪಡಿಸಿಕೊಳ್ಳಲು ಅಂತರರಾಷ್ಟ್ರೀಯ ಪಾಲುದಾರರ ಜೊತೆಗೆ ಕೆಲಸ ಮಾಡಲಾಗುವುದು’ ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ತಿಳಿಸಿದ್ದಾರೆ.

ಒಪ್ಪಂದ–ಖಚಿತಪಡಿಸಿದ ಇರಾನ್

ಅಮೆರಿಕದೊಂದಿಗಿನ ಒಪ್ಪಂದ ಕುರಿತ ಕರಡು ಸಿದ್ಧವಾಗಿದೆ. ಆದರೆ, ಯುರೇನಿಯಂ ಸಮೃದ್ಧೀಕರಣ ಕೈ ಬಿಡಬೇಕು ಎಂಬುದು ಅಮೆರಿಕದ ಬೇಡಿಕೆಯಾಗಿದೆ. ಒಂದು ವೇಳೆ ಶಾಂತಿ ಒಪ್ಪಂದ ಏರ್ಪಟ್ಟರೆ, ಆದಾದ 60 ದಿನಗಳವರೆಗೆ ಅಮೆರಿಕದ ಈ ಬೇಡಿಕೆ ಕುರಿತು ಮಾತುಕತೆ ನಡೆಸುವುದಿಲ್ಲ ಎಂದು ಇರಾನ್‌ನ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

‘ಒಪ್ಪಂದದ ಪ್ರಕಾರ, ವಿದೇಶಗಳಲ್ಲಿ ಸ್ಥಗಿತಗೊಳಿಸಲಾದ ಇರಾನ್‌ನ ನಿಧಿಗಳನ್ನು ಬಿಡುಗಡೆಗೊಳಿಸಲು ಒಪ್ಪಿಗೆ, ಇರಾನ್‌ನ ಬಂದರಿನಿಂದ ಹೊರಗೆ ಸಂಚರಿಸಲು ಹಡಗುಗಳಿಗೆ ಅನುಮತಿ ನೀಡಲು ಅಮೆರಿಕ ಒಪ್ಪಿಗೆ ಸೂಚಿಸಿದ್ದು, ತನ್ನ ನೌಕಾಪಡೆಯನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದೆ’ ಎಂದು ಇರಾನ್‌ನ ‘ಫಾರ್ಸ್’ ಸುದ್ದಿಸಂಸ್ಥೆ ವರದಿ ಮಾಡಿದೆ.

‘ಇದಕ್ಕೆ ಪ್ರತಿಯಾಗಿ ಹೊರ್ಮುಜ್ ಜಲಸಂಧಿಯನ್ನು ಯುದ್ಧಕ್ಕೂ ಮೊದಲಿನ ಸ್ಥಿತಿಯಂತೆ ಮುಕ್ತ ಸಂಚಾರಕ್ಕೆ ಅವಕಾಶ ನೀಡಲು ಇರಾನ್‌ನ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ. ಇರಾನ್‌ನ ಕಚ್ಚಾ ತೈಲ, ಅನಿಲ, ಪೆಟ್ರೋಕೆಮಿಕಲ್ಸ್‌ಗಳ ಮೇಲೆ ಮಾರಾಟಕ್ಕೆ ವಿಧಿಸಲಾಗಿರುವ ಎಲ್ಲ ನಿರ್ಬಂಧಗಳನ್ನು ತಾತ್ಕಾಲಿಕವಾಗಿ ಹಿಂದಕ್ಕೆ ಪಡೆಯಲು ಒಪ್ಪಿಗೆ ಸೂಚಿಸಿದೆ’ ಎಂದು ವರದಿ ಮಾಡಿದೆ.

‘ಮಾತುಕತೆಯ ಮೂಲಕ ಎರಡು ರಾಷ್ಟ್ರಗಳು ಯುದ್ಧದಿಂದ ಒಂದು ಹೆಜ್ಜೆ ಹಿಂದೆ ಸರಿದಿವೆ’ ಎಂದು ಇರಾನ್‌ನ ಪ್ರಮುಖ ದೈನಿಕ ‘ಜವನ್’ ವರದಿ ಮಾಡಿದೆ.

ಒಪ್ಪಂದದ ಕುರಿತು ಸೌದಿ ಅರೇಬಿಯಾ, ಸಂಯುಕ್ತ ಅರಬ್ ಒಕ್ಕೂಟ, ಕತಾರ್, ಈಜಿಪ್ಟ್, ಜೋರ್ಡನ್, ಬಹರೇನ್, ಟರ್ಕಿ ಹಾಗೂ ಪಾಕಿಸ್ತಾನದ ಪ್ರತಿನಿಧಿಗಳ ಜೊತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶನಿವಾರ ಮಾತುಕತೆ ನಡೆಸಿದ್ದಾರೆ.

ಒಪ್ಪಂದಕ್ಕೆ ಅವಸರ ಇಲ್ಲ: ಡೊನಾಲ್ಡ್ ಟ್ರಂಪ್

ಒಂದನೇ ಪುಟದಿಂದ...

‘ಶಾಂತಿ ಮಾತುಕತೆ ರಚನಾತ್ಮಕವಾಗಿ ಹಾಗೂ ವ್ಯವಸ್ಥಿತವಾಗಿಯೇ ನಡೆಯುತ್ತಿದೆ. ನಮಗೆ ಅನುಕೂಲವಾಗುವಂತಹ ಸನ್ನಿವೇಶ ಇರುವ ಕಾರಣ ಒಪ್ಪಂದ ಮಾಡಿಕೊಳ್ಳುವುದಕ್ಕೆ ಅವಸರ ಮಾಡದಂತೆ ನನ್ನ ಪ್ರತಿನಿಧಿಗಳಿಗೆ ಸೂಚಿಸಿರುವೆ’ ಎಂದು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರೂತ್ ಸೋಷಿಯಲ್’ನಲ್ಲಿ ಟ್ರಂಪ್ ಬರೆದುಕೊಂಡಿದ್ದಾರೆ.

‘ಹೊರ್ಮುಜ್ ಜಲಸಂಧಿ ಮೇಲಿನ ನಿರ್ಬಂಧವು ಒಪ್ಪಂದಕ್ಕೆ ಸಹಿ ಹಾಕುವ ತನಕ ಮುಂದುವರಿಯಲಿದೆ’ ಎಂದೂ ಹೇಳಿದ್ದಾರೆ.

ಉದ್ದೇಶಿತ ಒಪ್ಪಂದದಲ್ಲಿನ ಅಂಶಗಳು ಸೋರಿಕೆಯಾಗಿರುವುದನ್ನು ಕೆಲ ಮಾಜಿ ಸಂಸದರು ಹಾಗೂ ಅಧಿಕಾರಿಗಳು ಟೀಕಿಸಿದ ಬೆನ್ನಲ್ಲೇ, ಟ್ರಂಪ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

‘ಹೊರ್ಮುಜ್ ನಿರ್ವಹಣೆ: ಇರಾನ್ ಹಕ್ಕು’

ದುಬೈ: ‘ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಹೊರ್ಮುಜ್ ಜಲಸಂಧಿಯ ನಿರ್ವಹಣೆ ಮಾಡುವುದು ಇರಾನ್‌ನ ಕಾನೂನುಬದ್ಧ ಹಕ್ಕು’ ಎಂದು ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಅವರ ಸಲಹೆಗಾರ(ಸೇನೆ) ಮೊಹ್ಸಿನ್ ರಜಾಯಿ ಹೇಳಿದ್ದಾರೆ.

‘ಹೊರ್ಮುಜ್ ಜಲಸಂಧಿಯ ನಿರ್ವಹಣೆಯನ್ನು ಇರಾನ್ ಮಾಡುವುದರಿಂದ ಕಳೆದ 50 ವರ್ಷಗಳಿಂದ ಪರ್ಷಿಯ ಕೊಲ್ಲಿಯಲ್ಲಿ ಮನೆ ಮಾಡಿರುವ ಅಭದ್ರತೆ ಅಂತ್ಯವಾಗಲಿದೆ’ ಎಂಬ ರಜಾಯಿ ಅವರ ಹೇಳಿಕೆ ಉಲ್ಲೇಖಿಸಿ ಇರಾನ್ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ಶಾಂತಿ ಮಾತುಕತೆ ಶೀಘ್ರ: ಇರಾನ್ ಮತ್ತು ಅಮೆರಿಕ ನಡುವಿನ ಮುಂದಿನ ಸುತ್ತಿನ ಶಾಂತಿ ಮಾತುಕತೆಯನ್ನು ಪಾಕಿಸ್ತಾನ ಶೀಘ್ರದಲ್ಲೇ ಆಯೋಜಿಸುವ ಆಶಯ ಹೊಂದಿದೆ ಎಂದು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಭಾನುವಾರ ತಿಳಿಸಿದರು.



ಭದ್ರತಾ ಸಿಬ್ಬಂದಿ ಮತ್ತು ಸ್ಥಳೀಯರು ಗಾಯಗೊಂಡಿರುವವರನ್ನು ರೈಲಿನಿಂದ ಹೊರತಂದರು – ಎಎಫ್‌ಪಿ ಚಿತ್ರ

ಪಾಕ್: ರೈಲಿನ ಮೇಲೆ ದಾಳಿ, 24 ಸಾವು

ಕರಾಚಿ (ಪಿಟಿಐ/ಎಎಫ್‌ಪಿ): ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಸೇನಾ ಸಿಬ್ಬಂದಿ ಪ್ರಯಾಣಿಸುತ್ತಿದ್ದ ರೈಲೊಂದರ ಮೇಲೆ ಭಾನುವಾರ ಬಾಂಬ್ ದಾಳಿ ನಡೆದಿದ್ದು, 24 ಮಂದಿ ಮೃತಪಟ್ಟಿದ್ದಾರೆ ಮತ್ತು 50 ಮಂದಿ ಗಾಯಗೊಂಡಿದ್ದಾರೆ.

ಕ್ವೆಟಾ ಕಂಟೋನ್‌ಮೆಂಟ್‌ನಿಂದ ಪೆಶಾವರಕ್ಕೆ ಮುಂಜಾನೆ ತೆರಳುತ್ತಿದ್ದ ರೈಲಿಗೆ ಛಮನ್ ಪಾಟಕ್ ಬಳಿ ಸ್ಫೋಟಕ ತುಂಬಿದ್ದ ಕಾರೊಂದು ಡಿಕ್ಕಿ ಹೊಡೆದಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾ ಸಿಬ್ಬಂದಿ ಮತ್ತು ಅವರ ಕುಟುಂಬಸ್ಥರು ಈದ್ ಹಬ್ಬವನ್ನು ಆಚರಿಸಲು ರೈಲಿನಲ್ಲಿ ಪ್ರಯಾಣಿಸುತ್ತಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸ್ಫೋಟದಿಂದಾಗಿ ರೈಲಿನ ಎಂಜಿನ್ ಮತ್ತು ಮೂರು ಬೋಗಿಗಳಿಗೆ ಹಾನಿಯಾಗಿದೆ’ ಎಂದು ಪಾಕಿಸ್ತಾನದ ರೈಲ್ವೆ ಸಚಿವ ಹನೀಫ್ ಅಬ್ಬಾಸಿ ಅವರು ತಿಳಿಸಿದ್ದಾರೆ. ಆದರೆ ಸಾವಿಗೀಡಾದವರ ಮತ್ತು ಮೃತಪಟ್ಟವರ ನಿಖರ ಸಂಖ್ಯೆಯನ್ನು ಅವರು ತಿಳಿಸಿಲ್ಲ.

‘20 ಜನ ಮೃತಪಟ್ಟಿದ್ದಾರೆ, 70 ಮಂದಿ ಗಾಯಗೊಂಡಿದ್ದಾರೆ’ ಎಂದು ಪಾಕಿಸ್ತಾನದ ಮಾಧ್ಯಮಗಳು ಮತ್ತು ವೆಬ್‌ಸೈಟ್‌ಗಳು ವರದಿ ಮಾಡಿವೆ.

ನಿಷೇಧಿತ ಸಂಘಟನೆ ಬಲೂಚ್ ಲಿಬರೇಷನ್ ಆರ್ಮಿ(ಬಿಎಲ್‌ಎ) ದಾಳಿಯ ಹೊಣೆ ಹೊತ್ತುಕೊಂಡಿದೆ. ‘ಸೇನಾ ಸಿಬ್ಬಂದಿಯನ್ನು ಕರೆದುಕೊಂಡು ಹೋಗುತ್ತಿದ್ದ ರೈಲಿನ ಮೇಲೆ ದಾಳಿ ನಡೆಸಿದ್ದೇವೆ’ ಎಂದು ಬಿಎಲ್‌ಎ ವಕ್ತಾರರು ತಿಳಿಸಿದ್ದಾರೆ.

ದಾಳಿಯನ್ನು ಖಂಡಿಸಿರುವ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಅವರು, ‘ಇಂಥ ಹೇಡಿತನದ ಕೃತ್ಯಗಳಿಂದ ಪಾಕಿಸ್ತಾನ ಜನರ ದೃಢಸಂಕಲ್ಪವನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ದಾಳಿ ದೃಢಪಡಿಸಿದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ

ಕೀವ್ ಮೇಲೆ ಹೈಪರ್‌ಸಾನಿಕ್ ಒರೆಶ್ನಿಕ್ ಕ್ಷಿಪಣಿ ದಾಳಿ

ಕೀವ್ (ಎಪಿ): ಉಕ್ರೇನ್ ರಾಜಧಾನಿ ಕೀವ್ ಮೇಲೆ ರಷ್ಯಾ ಭಾನುವಾರ ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಿದೆ. ಈ ಸಂದರ್ಭದಲ್ಲಿ ಹೈಪರ್‌ಸಾನಿಕ್ ಒರೆಶ್ನಿಕ್ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ಸಹ ನಡೆಸಿದೆ.

ನಾಲ್ಕು ವರ್ಷಗಳಿಂದ ಉಕ್ರೇನ್ ವಿರುದ್ಧದ ನಡೆಯುತ್ತಿರುವ ಯುದ್ಧದಲ್ಲಿ ಈ ಶಸ್ತ್ರಾಸ್ತ್ರವನ್ನು ಮೂರನೇ ಬಾರಿಗೆ ಬಳಸಲಾಗಿದೆ. ಮೊದಲ ಬಾರಿಗೆ 2024ರ ನವೆಂಬರ್‌ನಲ್ಲಿ ಬಳಸಲಾಗಿತ್ತು. ನಂತರ 2025ರ ಜನವರಿಯಲ್ಲಿ ಪಶ್ಚಿಮ ಎಲ್ವಿವ್ ಪ್ರದೇಶದ ಮೇಲೆ ಬಳಸಲಾಗಿತ್ತು.

ಕ್ಷಿಪಣಿ ದಾಳಿಯಲ್ಲಿ ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ ಮತ್ತು ಕನಿಷ್ಠ 83 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ತಿಳಿಸಿದ್ದಾರೆ.

ತೀವ್ರವಾದ ವೈಮಾನಿಕ ದಾಳಿಯಿಂದಾಗಿ ಕೀವ್ ನಗರದಲ್ಲಿರುವ ಸರ್ಕಾರಿ ಕಚೇರಿಗಳು, ವಸತಿ ಕಟ್ಟಡಗಳು, ಶಾಲೆಗಳು, ಮಾರುಕಟ್ಟೆ ಮತ್ತು ಶಾಲೆಗಳ ಸಮೀಪವಿರುವ ಕಟ್ಟಡಗಳು ಹಾನಿಗೊಳಗಾಗಿವೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ಪರಮಾಣು ಅಥವಾ ಸಾಂಪ್ರದಾಯಿಕ ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯವಿರುವ ಒರೆಶ್ನಿಕ್, ಕೀವ್ ನಗರದ ಬಿಲಾ ತ್ಸೆರ್ಕ್ವಾ ಪ್ರದೇಶದ ಮೇಲೆ ತೀವ್ರ ದಾಳಿ ನಡೆಸಿದೆ ಎಂದು ಝೆಲೆನ್‌ಸ್ಕಿ ಟೆಲಿಗ್ರಾಮ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

‘ಉಕ್ರೇನ್‌ನ ಮಿಲಿಟರಿ ಕಮಾಂಡ್ ಮತ್ತು ನಿಯಂತ್ರಣ ಸೌಲಭ್ಯಗಳು, ವಾಯುನೆಲೆಗಳು ಮತ್ತು ಮಿಲಿಟರಿ ಕೈಗಾರಿಕಾ ಉದ್ಯಮಗಳನ್ನು ಹೊಡೆದುರುಳಿಸಲು ಒರೆಶ್ನಿಕ್ ಜೊತೆಗೆ ಇತರೆ ಬೇರೆ ರೀತಿಯ ಕ್ಷಿಪಣಿಗಳನ್ನು ಬಳಸಲಾಗಿದೆ’ ಎಂದು ರಷ್ಯಾದ ರಕ್ಷಣಾ ಸಚಿವಾಲಯವು ಭಾನುವಾರ ದೃಢಪಡಿಸಿದೆ.

ಯಾವುದನ್ನು ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂಬುದನ್ನು ಸಚಿವಾಲಯ ಸ್ಪಷ್ಟಪಡಿಸಿಲ್ಲ. ರಾತ್ರಿ ನಡೆದ ದಾಳಿಯಲ್ಲಿ ಯಾವುದೇ ನಾಗರಿಕ ಸ್ಥಳಗಳನ್ನು ಗುರಿಯಾಗಿಸಿಕೊಂಡಿಲ್ಲ ಎಂದು ಸಚಿವಾಲಯದ ಅಧಿಕಾರಿಗಳು ರಷ್ಯಾದ ಮಾಧ್ಯಮಗಳಿಗೆ ತಿಳಿಸಿದ್ದಾರೆ ಎಂದು ಟಾಸ್ ಸ್ಟೇಟ್ ಏಜೆನ್ಸಿ ಭಾನುವಾರ ವರದಿ ಮಾಡಿದೆ.

‘ರಷ್ಯಾದ ಭೂಪ್ರದೇಶದಲ್ಲಿರುವ ನಾಗರಿಕ ಸೌಲಭ್ಯಗಳ ಮೇಲೆ ಉಕ್ರೇನ್ ನಡೆಸಿದ ದಾಳಿಗೆ ಪ್ರತೀಕಾರವಾಗಿ ಈ ದಾಳಿ ನಡೆಸಲಾಗಿದೆ’ ಎಂದು ಸಚಿವಾಲಯವು ಹೇಳಿದೆ.

ಕಿವ್ ರಾಜಧಾನಿಯ ಹಲವು ಜಿಲ್ಲೆಗಳಲ್ಲಿನ ವಸತಿ ಕಟ್ಟಡಗಳು, ಶಾಪಿಂಗ್ ಮಾಲ್‌ಗಳು, ಶಾಲೆಗಳು ಸೇರಿದಂತೆ 50 ಸ್ಥಳಗಳಲ್ಲಿ ಹಾನಿ ದಾಖಲಾಗಿದೆ.

‘ಉಕ್ರೇನ್‌ನಲ್ಲಿ ವಾಯು ರಕ್ಷಣಾ ಕ್ಷಿಪಣಿ ಕೊರತೆ’



ಝೆಲೆನ್‌ಸ್ಕಿ

ರಷ್ಯಾ ಭಾರಿ ಪ್ರಮಾಣದ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸಿದ್ದು, ರಾಜಧಾನಿ ಕೀವ್ ನಗರವೇ ದಾಳಿಯ ಮುಖ್ಯ ಗುರಿಯಾಗಿತ್ತು. ಎಲ್ಲಾ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಡೆಹಿಡಿಯಲು ಸಾಧ್ಯವಾಗಿಲ್ಲ ಮತ್ತು ಕೀವ್‌ನಲ್ಲಿಯೇ ಹೆಚ್ಚಿನ ಹಾನಿಯಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಖಚಿತಪಡಿಸಿದ್ದಾರೆ.

ಉಕ್ರೇನ್, ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಬಲ್ಲ ಸುಧಾರಿತ ಕ್ಷಿಪಣಿಗಳ ತೀವ್ರ ಕೊರತೆಯನ್ನು ಎದುರಿಸುತ್ತಿದೆ. ಇಂಥಹ ಶಸ್ತ್ರಾಸ್ತ್ರಗಳನ್ನು ಹೊಂದಲು, ಉಕ್ರೇನ್, ಅಮೆರಿಕದ ಪೇಟ್ರಿಯಟ್ ವಾಯು ರಕ್ಷಣಾ ವ್ಯವಸ್ಥೆಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಇಂಥ ಪ್ರತಿಬಂಧಕ ಕ್ಷಿಪಣಿಗಳ ಕೊರತೆ ಉಕ್ರೇನನ್ನು ಕಾಡುತ್ತಿದೆ.


ಸಾರಿಕಾ ರಾವ್

ಮೃತ್ಯುದೇವತೆ ಶೀಘ್ರದಲ್ಲಿ ತೆರೆಗೆ

ವಂಚಕರ ಜಾಲದಲ್ಲಿ ಸಿಲುಕಿಕೊಳ್ಳುವ ಹೆಣ್ಣುಮಕ್ಕಳ ಕುರಿತಾದ ಕಥೆಯನ್ನು ಹೊಂದಿರುವ ‘ಮೃತ್ಯುದೇವತೆ’ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲು ಸಜ್ಜಾಗಿದೆ. ಚಿತ್ರಕ್ಕೆ ನವೀನ್ ಮಹದೇವ್ ನಿರ್ದೇಶನವಿದೆ. ಚಿತ್ರದ ‘ನಮ್ಮಾವ ಮಾದೇವ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಈಗಿನ ಸಮಾಜದಲ್ಲಿ ಮಹಿಳೆಯರು ವಂಚಕರ ಜಾಲದಲ್ಲಿ ಹೇಗೆ ಸಿಲುಕಿಕೊಳ್ಳುತ್ತಿದ್ದಾರೆ?, ನಂತರ ಅದರಿಂದ ಹೊರಬರಲು ಹೇಗೆ ಪ್ರಯತ್ನಿಸುತ್ತಾರೆ ಎಂಬುದೇ ಕಥೆ. ಅಂಥವರಿಗೆ ಶಿಕ್ಷಿಸಲು ಯಾವೆಲ್ಲ ಅವತಾರ ತಾಳುತ್ತಾರೆ ಎಂಬುದನ್ನು ಹೇಳಿದ್ದೇವೆ. ಈ ಹಿಂದೆ ಚಿತ್ರದ ಬಿಡುಗಡೆ ದಿನಾಂಕ ಘೋಷಿಸಿದ್ದೆವು. ತಾಂತ್ರಿಕ ಕಾರಣಗಳಿಂದ ಬಿಡುಗಡೆ ತಡವಾಗಿದೆ. ಶೀಘ್ರದಲ್ಲಿ ಚಿತ್ರ ಬಿಡುಗಡೆ ದಿನಾಂಕ ಘೋಷಿಸುತ್ತೇವೆ’ ಎಂದರು ನಿರ್ದೇಶಕ.

‘ಈ ಸಿನಿಮಾ ಕೇವಲ ಮನೋರಂಜನೆಗಾಗಿ ಅಲ್ಲ, ಸಮಾಜದಲ್ಲಿ ಬದಲಾವಣೆ ಆಗಬೇಕು ಎಂಬ ಉದ್ದೇಶದಿಂದ ಮಾಡಿರುವುದು. ಚಿತ್ರ ಎಷ್ಟೋ ಜನರಿಗೆ ಪ್ರೇರಣೆಯಾಗುತ್ತದೆ. ಹೆಣ್ಣುಮಕ್ಕಳ ಜತೆ ತಂದೆ, ತಾಯಿ ಬಂದು ಸಿನಿಮಾ ನೋಡಬೇಕು. ಹೆಣ್ಣಿನ ಸಹನೆಯ ಕಟ್ಟೆ ಒಡೆದಾಗ ಏನಾಗುತ್ತದೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ. ಆರತಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿರುವೆ’ ಎಂದರು ನಾಯಕಿ ಸಾರಿಕಾ ರಾವ್.

ವಿನಯಾ ಪ್ರಕಾಶ್, ಹಿಮಶ್ರೀ, ಮಾಹೀನ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ನಿರ್ದೇಶಕರೇ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಪವನ್ ಶೆಟ್ಟಿ, ಸೂರ್ಯ ಮುಂತಾದವರು ಚಿತ್ರದಲ್ಲಿದ್ದಾರೆ. ಅನಿರುದ್ಧ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಸಂಗೀತ ನಿರ್ದೇಶನ, ಮಂಜು ವಿಕ್ರಂ ಸಂಕಲನ ಚಿತ್ರಕ್ಕಿದೆ.

‘ದೊಡ್ಮನ್ಸ’ನ ಹಾಡು ಬಿಡುಗಡೆ

ಬಹುತೇಕ ಹೊಸಬರಿಂದಲೇ ಕೂಡಿರುವ ‘ದೊಡ್ಮನ್ಸ’ ಚಿತ್ರದ ಪ್ರಣಯ ಗೀತೆಯೊಂದು ಇತ್ತೀಚೆಗೆ ಬಿಡುಗಡೆಗೊಂಡಿದೆ. ವಿಭಿನ್ನ ಪ್ರೇಮಕಥೆಯನ್ನು ಹೊಂದಿರುವ ಚಿತ್ರಕ್ಕೆ ಶರತ್ ಕೃಷ್ಣ ಆ್ಯಕ್ಷನ್ ಕಟ್ ಹೇಳಿದ್ದಾರೆ. ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

‘ಚಿತ್ರದ ಶೀರ್ಷಿಕೆಯಲ್ಲಿಯೇ ಸೆಳೆತವಿದೆ. ದುಡ್ಡಿದ್ದವರೆಲ್ಲ ದೊಡ್ಡವರಲ್ಲ, ಒಳ್ಳೆಯ ಮನಸು ಹೊಂದಿರುವವರು ದೊಡ್ಡ ಮನುಷ್ಯರು ಎಂಬ ಸಂದೇಶ ಸಾರುವ ಚಿತ್ರವಿದು. ಆಟೋ ಚಾಲಕನೊಬ್ಬನ ಹೇಗೆ ದೊಡ್ಡ ವ್ಯಕ್ತಿಯಾಗುತ್ತಾನೆ ಎಂಬ ಕಥೆಯಿದೆ. ಆತನ ಪ್ರೇಮಕಥೆಯೂ ಬರುತ್ತದೆ. ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಎಂಟು ಜಿಲ್ಲೆಗಳಲ್ಲಿ ಆಟೋ ಚಾಲಕರಿಗಾಗಿ ವಿಶೇಷ ಪ್ರದರ್ಶನ ಏರ್ಪಡಿಸಲು ಆಲೋಚಿಸಿದ್ದೇವೆ. ಇದರ ಜತೆಗೆ ಲಕ್ಕಿ ಡಿಪ್ ನಡೆಸಿ, ಓರ್ವ ಚಾಲಕನಿಗೆ ಒಂದು ಆಟೋ ನೀಡುವ ಯೋಚನೆಯೂ ಇದೆ’ ಎಂದರು ನಿರ್ದೇಶಕ.

ರೇಷ್ಮಾ, ಶಿಲ್ಪಾ ನಾಯಕಿಯರು. ಬಲ ರಾಜವಾಡಿ, ಹುಲಿ ಕಾರ್ತಿಕ್ ಮುಂತಾದವರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಶ್ರೀಧರ ಕಶ್ಯಪ್ ಮತ್ತು ಅಲೆಕ್ಸ್ ಸಂಗೀತ ಸಂಯೋಜಿಸಿದ್ದಾರೆ. ಆನಂದ ಇಳಯರಾಜ ಛಾಯಾಚಿತ್ರಗ್ರಹಣ, ವೇದಿಕ್ ಸಂಕಲನ ಚಿತ್ರಕ್ಕಿದೆ. ‘ವೇದಿಕ್ ಕಾಸ್ಮೋಸ್’ ಬ್ಯಾನರಿನಲ್ಲಿ ವೇದಿಕ್ ವೀರ್ ಬಂಡವಾಳ ಹೂಡಿದ್ದು, ಬೆಂಗಳೂರು, ಅಹಮದಾಬಾದ್ ಸುತ್ತಮುತ್ತ ಚಿತ್ರೀಕರಣಗೊಂಡಿದೆ.


ರೇಷ್ಮಾ

‘ಅತ್ಯುತ್ತಮ ಪೋಷಕ ನಟ’ನಿಗೆ ಸಿನಿ ಸಮ್ಮಾನದ ಗೌರವ



ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಚಂದನವನದ ಪ್ರತಿಭೆಗಳನ್ನು ಗುರುತಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿ ಸಮಾರಂಭ ಜೂನ್ 19ರಂದು ನಡೆಯಲಿದೆ.

ಒಂದು ಸಿನಿಮಾಕ್ಕೆ ನಾಯಕ, ನಾಯಕಿ ಜತೆಗೆ ಪೋಷಕ ನಟರೂ ಮುಖ್ಯ. ಎಷ್ಟೋ ಸಿನಿಮಾಗಳ ಯಶಸ್ಸಿನಲ್ಲಿ ಪೋಷಕ ನಟರ ಪಾಲು ದೊಡ್ಡದಿರುತ್ತದೆ. ಕೆಲವು ಪೋಷಕ ಪಾತ್ರಗಳು ಅಚ್ಚಳಿಯದೆ ಮನಸಿನಲ್ಲಿ ಉಳಿಯುತ್ತವೆ. ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕಳೆದ ಮೂರು ಆವೃತ್ತಿಗಳಿಂದಲೂ ‘ಅತ್ಯುತ್ತಮ ಪೋಷಕ ನಟ’ ಪುರಸ್ಕಾರ ನೀಡುತ್ತ ಬಂದಿದೆ.

‘ಹುಲಿ ಕಿಶೋರ್’ ಎಂದೇ ಜನಪ್ರಿಯರಾದ ಕಿಶೋರ್‌ಗೆ ‘ಕಾಂತಾರ’ ಚಿತ್ರದಲ್ಲಿನ ಅರಣ್ಯಾಧಿಕಾರಿ ಪಾತ್ರಕ್ಕಾಗಿ ಮೊದಲ ಆವೃತ್ತಿಯಲ್ಲಿ ಈ ಪುರಸ್ಕಾರ ಲಭಿಸಿತ್ತು. ರಂಗಾಯಣ ರಘು ‘ಟಗರು ಪಲ್ಯ’ ಚಿತ್ರದ ನಟನೆಗಾಗಿ ದ್ವಿತೀಯ ಆವೃತ್ತಿಯಲ್ಲಿ ಈ ಗೌರವ ಪಡೆದಿದ್ದರು. ಮೂರನೇ ಆವೃತ್ತಿಯಲ್ಲಿ ಗೋಪಾಲಕೃಷ್ಣ ದೇಶಪಾಂಡೆ ‘ಶಾಖಾಹಾರಿ’ ಚಿತ್ರಕ್ಕಾಗಿ ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದರು. ಈಸಲವೂ ಈ ವಿಭಾಗದಲ್ಲಿ ಅರ್ಹರು ನಾಮನಿರ್ದೇಶನಗೊಂಡಿದ್ದು, ಪ್ರಬಲ ಪೈಪೋಟಿಯಿದೆ.


ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿದ್ದು, ತೀರ್ಪುಗಾರರು ನಾಮನಿರ್ದೇಶನಗಳನ್ನು ಅಂತಿಮಗೊಳಿಸಿದ್ದಾರೆ. ಇವುಗಳಿಗೆ ‘ಸಿನಿ ಸಮ್ಮಾನ’ದ ಮುಖ್ಯತೀರ್ಪುಗಾರರು ಅಂತಿಮ ಮುದ್ರೆ ಒತ್ತಲಿದ್ದಾರೆ. ಮಾಸಾಂತ್ಯದೊಳಗೆ ನಾಮನಿರ್ದೇಶನಗಳು ಪ್ರಕಟವಾಗಲಿವೆ.

ನಾಮನಿರ್ದೇಶನಗಳ ಪೈಕಿ ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ.

ಸಿನಿ ಸಮ್ಮಾನದಲ್ಲಿ ‘ಪ್ರತಿಭಾನ್ವಿತ ಕಲಾವಿದರು’ ವಿಭಾಗದಲ್ಲಿ 15 ಪ್ರಶಸ್ತಿಗಳು, ‘ಜನಮೆಚ್ಚಿದ ವಿಭಾಗ’ದಲ್ಲಿ ನಾಲ್ಕು ಪ್ರಶಸ್ತಿಗಳು, ‘ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು’ ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ ‘ಜೀವಮಾನ ಸಾಧನೆ’ ಪುರಸ್ಕಾರ ಇರಲಿವೆ. ಜೊತೆಗೆ ಸಂಪಾದಕೀಯ ಆಯ್ಕೆ ವಿಭಾಗದಲ್ಲಿ ‘ಸಿನಿ ಧ್ರುವತಾರೆ’, ‘ನವತಾರೆ (ನಟ-ನಟಿ)’ ಹಾಗೂ ‘ವರ್ಷದ ಅತ್ಯುತ್ತಮ ಸಾಧನೆ’ ಎಂಬ ನಾಲ್ಕು ಪ್ರಶಸ್ತಿಗಳಿವೆ.


ಕಿಶೋರ್ | ರಂಗಾಯಣ ರಘು | ಗೋಪಾಲಕೃಷ್ಣ ದೇಶಪಾಂಡೆ

ವ್ಯಾಪಾರ ಒಪ್ಪಂದಕ್ಕೆ ಶೀಘ್ರ ಅಂತಿಮ ರೂಪ

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಜತೆ ಸಚಿವ ಜೈಶಂಕರ್ ಮಾತುಕತೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಬಹು ನಿರೀಕ್ಷಿತ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಭಾರತ ಮತ್ತು ಅಮೆರಿಕ ಶೀಘ್ರವೇ ಅಂತಿಮ ರೂಪ ನೀಡಲಿವೆ. ಈ ಒಪ್ಪಂದವು ಉಭಯ ದೇಶಗಳಿಗೆ ಪ್ರಯೋಜನಕಾರಿಯಾಗಿರುವ ಜೊತೆಗೆ ಸುಸ್ಥಿರವೂ ಆಗಿರಲಿದೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಭಾನುವಾರ ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ದ್ವಿಪಕ್ಷೀಯ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧವು ಹೊಸ ಎತ್ತರಕ್ಕೆ ಏರಲಿದೆ. ಅಮೆರಿಕದ ನಿಯೋಗವೊಂದು ಶೀಘ್ರವೇ ಭಾರತಕ್ಕೆ ಭೇಟಿ ನೀಡಿ, ಉದ್ದೇಶಿತ ವ್ಯಾಪಾರ ಒಪ್ಪಂದಕ್ಕೆ ಅಂತಿಮ ರೂಪ ನೀಡುವ ಕುರಿತ ಮಾತುಕತೆ ಮುಂದುವರಿಸಲಿದೆ’ ಎಂದು ಹೇಳಿದ್ದಾರೆ.

ನಾಲ್ಕು ದಿನಗಳ ಭಾರತ ಪ್ರವಾಸ ಕೈಗೊಂಡಿರುವ ಅವರು, ವ್ಯಾಪಾರ, ವಿರಳ ಖನಿಜಗಳು, ಇಂಧನ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಸಹಕಾರ ಬಲಪಡಿಸುವ ಉದ್ದೇಶ ಹೊಂದಿದ್ದು, ಈ ಕುರಿತು ವ್ಯಾಪಕ ಮಾತುಕತೆ ನಡೆಸಿದ್ದಾರೆ.

ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಕಳೆದ ವರ್ಷ ಅಮೆರಿಕ ಜಾರಿಗೆ ತಂದ ಹೊಸ ನೀತಿಗಳಿಂದಾಗಿ ಅಮೆರಿಕ ಮತ್ತು ಭಾರತ ನಡುವಿನ ಸಂಬಂಧದಲ್ಲಿ ಒಡಕು ಮೂಡಿದೆ. ಎರಡೂ ದೇಶಗಳ ನಡುವಿನ ಸಂಬಂಧ ಸುಧಾರಿಸುವ ಪ್ರಯತ್ನದ ಭಾಗವಾಗಿ ರುಬಿಯೊ ಈ ಪ್ರವಾಸ ಕೈಗೊಂಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

> ವ್ಯಾಪಾರದ ವಿಚಾರವಾಗಿ ಭಾರತದೊಂದಿಗೆ ಸಂಘರ್ಷಕ್ಕೆ ದಾರಿ ಮಾಡುವ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರಲಿಲ್ಲ. ಅಮೆರಿಕದ ಆರ್ಥಿಕತೆಗೆ ವೇಗ ನೀಡುವಲ್ಲಿನ ಸಮಸ್ಯೆಯನ್ನು ಅವರು ಗುರುತಿಸಿದ್ದರು. ಈ ಸಮಸ್ಯೆಗೆ ಜಾಗತಿಕ ದೃಷ್ಟಿಕೋನದಿಂದ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ
> **ಮಾರ್ಕೊ ರುಬಿಯೊ,** ಅಮೆರಿಕ ವಿದೇಶಾಂಗ ಕಾರ್ಯದರ್ಶಿ

ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ನೀತಿಯನ್ನು ಬಲವಾಗಿ ಸಮರ್ಥಿಸಿಕೊಂಡ ಅವರು, ‘ವಿವಿಧ ದೇಶಗಳ ಜೊತೆ ತಾನು ನಡೆಸುವ ವ್ಯಾಪಾರವನ್ನು ಮರು ಹೊಂದಾಣಿಕೆ ಮಾಡುವ ಉದ್ದೇಶದಿಂದ ಅಮೆರಿಕ ಈ ಹೊಸ ನೀತಿ ಜಾರಿಗೊಳಿಸಿದೆ. ಯಾವುದೇ ಒಂದು ನಿರ್ದಿಷ್ಟ ದೇಶದ ವಿರುದ್ಧ ಕ್ರಮ ಕೈಗೊಳ್ಳುವುದಕ್ಕಾಗಿ ಅಲ್ಲ’ ಎಂದರು.

‘ಇತರ ದೇಶಗಳೊಂದಿಗೆ ಅಮೆರಿಕ ಹೊಂದಿರುವ ಸಂಬಂಧವು ಭಾರತದೊಂದಿಗಿನ ಬಾಂಧವ್ಯದ ಮೇಲೆ ಪರಿಣಾಮ ಬಿಡುವುದಿಲ್ಲ’ ಎಂದು ರುಬಿಯೊ ಹೇಳಿದರು. ಆ ಮೂಲಕ, ಪಾಕಿಸ್ತಾನ ಹಾಗೂ ಚೀನಾ ಜೊತೆ ಅಮೆರಿಕ ಸಂಬಂಧ ಹೊಂದಿರುವ ಕುರಿತು ಭಾರತದಲ್ಲಿ ಮೂಡಿರುವ ಆತಂಕವನ್ನು ದೂರ ಮಾಡುವ ಪ್ರಯತ್ನವನ್ನು ರುಬಿಯೊ ಮಾಡಿದರು.

‘ನಾನು ಭೇಟಿ ನೀಡಿ ಪ್ರತಿಯೊಂದು ದೇಶವೂ ವ್ಯಾಪಾರದ ವಿಚಾರವಾಗಿ ತನ್ನ ಕಳವಳ ವ್ಯಕ್ತಪಡಿಸಿದೆ. ಇದೇ ಕಾರಣಕ್ಕೆ ಅಮೆರಿಕದ ವ್ಯಾಪಾರವನ್ನು ಮರುಹೊಂದಾಣಿಕೆ ಮಾಡುವ ಅಗತ್ಯವಿದೆ ಎಂದು ಟ್ರಂಪ್ ಹೇಳಿದ್ದರು. ಅವರ ಈ ನಿಲುವು ಕೇವಲ ಭಾರತಕ್ಕಷ್ಟೆ ಸಂಬಂಧಿಸಿದ್ದಲ್ಲ’ ಎಂದು ಹೇಳಿದರು.

‘ವ್ಯಾಪಾರಕ್ಕೆ ಸಂಬಂಧಿಸಿ ಐರೋಪ್ಯ ಒಕ್ಕೂಟ, ಇತರ ದೇಶಗಳಿಗೂ ಹಾಗೂ ಭಾರತಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಭಾರತ ಬೃಹತ್ ಆರ್ಥಿಕತೆಯಾಗಿದ್ದು, ವ್ಯಾಪಾರದ ದೃಷ್ಟಿಯಿಂದ ಪ್ರಮುಖ ಪಾಲುದಾರ ರಾಷ್ಟ್ರವೂ ಆಗಿದೆ. ಹೀಗಾಗಿ, ಇಂತಹ ದೊಡ್ಡ ದೇಶದೊಂದಿಗೆ ನಡೆಸುವ ವ್ಯಾಪಾರದಲ್ಲಿ ಸಮತೋಲನ ಕಾಪಾಡಿಕೊಳ್ಳುವುದರಲ್ಲೂ ಸಹಜವಾಗಿ ವ್ಯತ್ಯಾಸವಿರುತ್ತದೆ’ ಎಂದು ರುಬಿಯೊ ವಿಶ್ಲೇಷಿಸಿದರು.


ನವದೆಹಲಿಯಲ್ಲಿ ಭಾನುವಾರ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಅವರು ಮಾತುಕತೆ ನಡೆಸಿದರು —ಪಿಟಿಐ ಚಿತ್ರ

‘ಪ್ರತಿಯೊಂದು ದೇಶದಲ್ಲಿ ಮೂರ್ಖರಿದ್ದಾರೆ...’

‘ಜಗತ್ತಿನ ಪ್ರತಿಯೊಂದು ದೇಶದಲ್ಲಿ ಮೂರ್ಖ ಜನರಿದ್ದಾರೆ. ಭಾರತದಲ್ಲಿ ಹಾಗೂ ಅಮೆರಿಕದಲ್ಲಿಯೂ ಮೂರ್ಖ ಜನರಿದ್ದು, ಸದಾ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುತ್ತಾರೆ...’

‘ಅಮೆರಿಕದಲ್ಲಿ ಇತ್ತೀಚಿನ ದಿನಗಳಲ್ಲಿ ಭಾರತೀಯರು ಹಾಗೂ ಭಾರತೀಯ ಅಮೆರಿಕನ್ನರ ವಿರುದ್ಧ ಜನಾಂಗೀಯ ದ್ವೇಷದ ಮಾತುಗಳು ಕೇಳಿಬರುತ್ತಿವೆ. ಉಭಯ ದೇಶಗಳ ನಡುವಿನ ಬಾಂಧವ್ಯಕ್ಕೆ ಧಕ್ಕೆ ತರುವಂತಹ ಬೆಳವಣಿಗೆ ಇದು. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು’ ಎಂದು ಜಂಟಿಸುದ್ದಿಗೋಷ್ಠಿಯಲ್ಲಿ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಮಾರ್ಕೊ ರುಬಿಯೊ ನೀಡಿದ ಪ್ರತಿಕ್ರಿಯೆ ಇದು.

‘ಜನಾಂಗೀಯ ದ್ವೇಷದ ಹೇಳಿಕೆ ನೀಡಿರುವ ವಿಚಾರವನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. ನಿಶ್ಚಿತವಾಗಿಯೂ ಆನ್‌ಲೈನ್ ಹಾಗೂ ಇತರ ವೇದಿಕೆಗಳಲ್ಲಿ ಕೆಲವರು ಇಂತಹ ದ್ವೇಷದ ಹೇಳಿಕೆಗಳನ್ನು ನೀಡಿರುತ್ತಾರೆ’ ಎಂದರು.

‘ಅಮೆರಿಕ ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸುವ ದೇಶ. ವಿಶ್ವದೆಲ್ಲೆಡೆಯಿಂದ ಇಲ್ಲಿಗೆ ಬಂದವರು ಅಮೆರಿಕನ್ನರೇ ಆಗಿಬಿಟ್ಟಿದ್ದಾರೆ. ದೇಶದ ಪ್ರಗತಿಗೆ ಅದ್ಭುತ ಕೊಡುಗೆ ನೀಡಿದ್ದಾರೆ ಎಂದಷ್ಟೆ ನಾನು ಹೇಳಬಲ್ಲೆ’ ಎಂದು ಹೇಳಿದರು.

ವೀಸಾ: ಭಾರತ ಕಳವಳ

ಉದ್ಯೋಗಿಗಳಿಗೆ ನೀಡುವ ವೀಸಾಕ್ಕೆ ಸಂಬಂಧಿಸಿ ಅಮೆರಿಕದ ಹೊಸ ನೀತಿ ಕುರಿತು ಭಾರತ ಭಾನುವಾರ ಕಳವಳ ವ್ಯಕ್ತಪಡಿಸಿದೆ. ಮಾರ್ಕೊ ರುಬಿಯೊ ಅವರೊಂದಿಗೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅಮೆರಿಕಕ್ಕೆ ಕಾನೂನುಬದ್ಧವಾಗಿ ವಲಸೆ ಹೋಗುವವರ ರಕ್ಷಣೆ ಖಾತ್ರಿಪಡಿಸಬೇಕು ಎಂದು ಕೋರಿದರು.

‘ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ಹಲವು ವಿಚಾರಗಳಲ್ಲಿ ಎರಡೂ ದೇಶಗಳ ಅಭಿಪ್ರಾಯಗಳು ಒಂದೇ ಆಗಿವೆ. ಕಾನೂನುಬದ್ಧವಾಗಿ ಅಮೆರಿಕಕ್ಕೆ ಪ್ರಯಾಣಿಸುವವರು ವೀಸಾ ಕುರಿತ ಹೊಸ ನೀತಿಯಿಂದ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ’ ಎಂದು ರುಬಿಯೊ ಅವರಿಗೆ ಜೈಶಂಕರ್ ವಿವರಿಸಿದರು.

‘ಅಕ್ರಮವಾಗಿ ದೇಶ ಪ್ರವೇಶಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಭಾರತ ಸಹಕಾರ ನೀಡಲಿದೆ. ಆದರೆ, ಅಕ್ರಮ ವಲಸೆ ವಿರುದ್ಧ ನಡೆಸುವ ಪ್ರಹಾರವು ಕಾನೂನುಬದ್ಧವಾಗಿ ಅಮೆರಿಕಕ್ಕೆ ಪ್ರಯಾಣಿಸುವವರ ಮೇಲೆ ಪರಿಣಾಮ ಬೀರುವಂತಾಗಬಾರದು’ ಎಂದೂ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ರುಬಿಯೊ, ‘ಅಮೆರಿಕ ವಲಸೆ ವ್ಯವಸ್ಥೆಯನ್ನು ಸುಧಾರಿಸಲು ಪ್ರಯತ್ನಿಸುತ್ತಿದೆ. ಈ ಪ್ರಕ್ರಿಯೆಯಲ್ಲಿ ಕೆಲ ಸಮಸ್ಯೆಗಳು ಕಂಡುಬರಬಹುದು. ಅಂತಿಮವಾಗಿ ಪ್ರತಿಯೊಬ್ಬ ಭಾಗೀದಾರಗೆ ಅನುಕೂಲವಾಗುವಂತಹ ನಿಯಮಗಳನ್ನು ರೂಪಿಸಲಾಗುವುದು’ ಎಂದು ಹೇಳಿದರು.

‘ಗ್ರೀನ್ ಕಾರ್ಡ್ ಬಯಸುವವರು ತಮ್ಮ ತಾಯ್ನಾಡಿನಿಂದಲೇ ಅರ್ಜಿ ಸಲ್ಲಿಸಬೇಕು’ ಎಂಬ ನೀತಿಯನ್ನು ಅಮೆರಿಕ ಘೋಷಿಸಿದೆ. ಇದು 12 ಲಕ್ಷ ಭಾರತೀಯ ಅಮೆರಿಕನ್ನರು ಹಾಗೂ ಅವರ ಕುಟುಂಬಗಳನ್ನು ಅನಿಶ್ಚಿತತೆಗೆ ದೂಡುತ್ತದೆ’ ಎಂಬ ಕಳವಳ ವ್ಯಕ್ತವಾಗಿದೆ.

‘ಜನರಿಗೆ ಮಿತವ್ಯಯ ಪಾಠ... ದಾಖಲೆಯ ಆಮದಿಗೆ ಒಪ್ಪಿಗೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪ್ರಧಾನಿಯವರೇ, ಒಂದೆಡೆ ವಿದೇಶಿ ವಿನಿಮಯ ಉಳಿಸುವಂತೆ ಕೋರುವ ನೀವು ದೇಶದ ಜನರಿಗೆ ಮಿತವ್ಯಯದ ಪಾಠ ಮಾಡುತ್ತೀರಿ, ಇನ್ನೊಂದೆಡೆ ಅಮೆರಿಕದಿಂದ ದಾಖಲೆ ಪ್ರಮಾಣದ ಆಮದಿಗೆ ಒಪ್ಪಿಕೊಳ್ಳುವುದು ಏಕೆ’ ಎಂದು ಕಾಂಗ್ರೆಸ್ ಭಾನುವಾರ ಪ್ರಶ್ನಿಸಿದೆ.

‘ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮಿತ್ರ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಓಲೈಸಲು ಹಾಗೂ ಅವರನ್ನು ಖುಷಿಪಡಿಸಲು ಇನ್ನಿಲ್ಲದ ಕಸರತ್ತು ಮಾಡುತ್ತಿದ್ದಾರೆ’ ಎಂದೂ ಟೀಕಿಸಿದೆ.

‘ಇಂಧನ, ತಂತ್ರಜ್ಞಾನ ಹಾಗೂ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿ ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ ಅಂದಾಜು ₹47 ಲಕ್ಷ ಕೋಟಿ (500 ಶತಕೋಟಿ ಡಾಲರ್) ಮೊತ್ತದ ಸರಕುಗಳ ಖರೀದಿಗೆ ಬದ್ಧವಿರುವುದಾಗಿ ಭಾರತ ಹೇಳಿದೆ’ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿಕೆ ನೀಡಿದ ಬೆನ್ನಲ್ಲೇ, ಕಾಂಗ್ರೆಸ್ ಈ ಟೀಕೆ ಮಾಡಿದೆ.


ಜೈರಾಮ್ ರಮೇಶ್

‘ಇಂಧನ ಬಳಕೆ, ವಿದೇಶ ಪ್ರಯಾಣ ಕಡಿಮೆ ಮಾಡುವ ಮೂಲಕ ವಿದೇಶಿ ವಿನಿಮಯ ಉಳಿಸುವಂತೆ ಮೋದಿಯವರು ದೇಶದ ಜನರಿಗೆ ಹೇಳಿದ್ದಾರೆ. ಇದೇ ವೇಳೆ ಅವರು, ಅಮೆರಿಕದಿಂದ ಭಾರಿ ಪ್ರಮಾಣದ ಸರಕುಗಳ ಆಮದಿಗೆ ಒಪ್ಪಿಗೆ ಸೂಚಿಸಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

‘ಕಳೆದ 12 ತಿಂಗಳಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಶೇ12ರಷ್ಟು ಕುಸಿದಿದೆ. ಈಗ ಅಮೆರಿಕದಿಂದ ಆಮದು ಹೆಚ್ಚಾಗಲಿದ್ದು, ಇದರಿಂದ ರೂಪಾಯಿ ಮೌಲ್ಯ ಮತ್ತಷ್ಟು ಕುಸಿಯುವುದಿಲ್ಲ ಅಲ್ಲವೇ?’ ಎಂದಿದ್ದಾರೆ.

‘ಸೌರ ಶಕ್ತಿ ಯೋಜನೆಗೆ ಸಂಬಂಧಿಸಿದ ಪ್ರಕರಣದಲ್ಲಿ ಉದ್ಯಮಿ ಗೌತಮ್ ಅದಾನಿ ವಿರುದ್ಧದ ಲಂಚದ ಆರೋಪಗಳನ್ನು ಅಮೆರಿಕ ಕೈಬಿಟ್ಟಿದೆ. ಅದಾನಿ ಅವರಿಗೆ ದೊರೆತ ಈ ‘ಪರಿಹಾರ’ಕ್ಕೂ ಹಾಗೂ ಮೋದಿ ಅವರ ಈ ‘ಶರಣಾಗತಿ’ಗೂ ಸಂಬಂಧ ಇದೆಯೇ’ ಎಂದೂ ಅವರು ಪ್ರಶ್ನಿಸಿದ್ದಾರೆ.

ಅತ್ಯಾಚಾರ ಎಸಗಿ ಬಾಲಕಿಯ ಕೊಲೆ

ಶ್ರೀನಗರ: ಮಧ್ಯ ಕಾಶ್ಮೀರದ ಬಡ್ಗಾಮ್‌ನಲ್ಲಿ 12 ವರ್ಷದ ಬಾಲಕಿಯ ಮೇಲೆ ಅತ್ಯಾಚಾರವೆಸಗಿ, ಹತ್ಯೆ ಮಾಡಲಾಗಿದೆ. ಬಾಲಕಿಯು ಶನಿವಾರ ಕಣ್ಮರೆಯಾದ ಕೆಲವೇ ಗಂಟೆಗಳ ಅಂತರದಲ್ಲಿ ಮೃತದೇಹವು ಗ್ರಾಮದ ಹೊಲದಲ್ಲಿ ಪತ್ತೆ ಆಗಿದೆ. ನಂತರ, ಪ್ರಕರಣದ ಕುರಿತು ವಿಶೇಷ ತನಿಖಾ ತಂಡ ರಚಿಸಲಾಗಿದೆ.

‘ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಪ್ರಕರಣ ಸಂಬಂಧ ಐದು ಜನರ ವಿಶೇಷ ತನಿಖಾ ತಂಡ ರಚಿಸಲಾಗಿದೆ’ ಎಂದು ಬಡ್ಗಾಮ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಕೆ.ಕೆ. ಹರಿಪ್ರಸಾದ್ ತಿಳಿಸಿದ್ದಾರೆ. ಎಸ್‌ಐಟಿ ಘಟನಾ ನಡೆದ ಸ್ಥಳಕ್ಕೆ ಈಗಾಗಲೇ ಭೇಟಿ ನೀಡಿ ಸಾಕ್ಷ್ಯಗಳನ್ನು ಕಲೆಹಾಕಿದೆ.


ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಂತೆ ಆಗ್ರಹಿಸಿ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (ಡಿವೈಎಫ್‌ಐ) ಮತ್ತು ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಸದಸ್ಯರು ಜಿರಳೆ ಚಿತ್ರವಿದ್ದ ಫಲಕಗಳನ್ನು ಹಿಡಿದು ತಮಿಳುನಾಡಿನ ಮದುರೈನಲ್ಲಿ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

‘ರಾಜಕೀಯ ಚಳವಳಿಯಾಗಬಹುದು’

ತ್ರಿಶ್ಶೂರ್ (ಪಿಟಿಐ): ಸಿಜೆಪಿ ವಿರುದ್ಧದ ಕೇಂದ್ರ ಸರ್ಕಾರ ಕ್ರಮವನ್ನು ಟೀಕಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ‘ಸಾಮಾಜಿಕ ಜಾಲತಾಣದ ವಿಡಂಬಣಾತ್ಮಕ ಸಂಘಟನೆಯು ದೇಶದ ಯುವಕರಲ್ಲಿ ಬೆಳೆಯುತ್ತಿರುವ ಅಸಮಾಧಾನದ ಪ್ರತಿಬಿಂಬವಾಗಿದೆ ಮತ್ತು ಅದನ್ನು ನಿಗ್ರಹಿಸಬಾರದು’ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯುವಕರ ಸಮಸ್ಯೆಗಳನ್ನು ನಿರ್ಲಕ್ಷಿಸುವುದನ್ನು ಮುಂದುವರಿಸಿದರೆ ಇದು ಪ್ರಮುಖ ರಾಜಕೀಯ ಚಳವಳಿಯಾಗಿ ರೂಪುಗೊಳ್ಳಬಹುದು’ ಎಂದು ಎಚ್ಚರಿಸಿದರು.

2ನೇ ಮರಣೋತ್ತರ ಪರೀಕ್ಷೆ ಪೂರ್ಣಗೊಳಿಸಿದ ಏಮ್ಸ್ ವೈದ್ಯರ ತಂಡ

ಭೋಪಾಲ್‌ನಲ್ಲಿ ನಟಿ ಟ್ವಿಶಾ ಅಂತ್ಯಕ್ರಿಯೆ

ಭೋಪಾಲ್ (ಪಿಟಿಐ): ನಟಿ ಟ್ವಿಶಾ ಶರ್ಮಾ ಅವರ ಎರಡನೇ ಮರಣೋತ್ತರ ಪರೀಕ್ಷೆಯನ್ನು ದೆಹಲಿಯ ಏಮ್ಸ್ ವೈದ್ಯರು ಪೂರ್ಣಗೊಳಿಸಿದ ಬಳಿಕ ಭಾನುವಾರ ಅಂತ್ಯಕ್ರಿಯೆ ನಡೆಸಲಾಯಿತು.

ಇಲ್ಲಿನ ಭದ್‌ಭದಾ ವಿಶ್ರಾಮ ಘಾಟ್‌ನಲ್ಲಿ ಸಂಜೆ 5 ಗಂಟೆಗೆ ಅಂತ್ಯಕ್ರಿಯೆ ನಡೆಯಿತು. ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿ ಚಿತೆಗೆ ಬೆಂಕಿ ಹಚ್ಚುವಾಗ ಟ್ವಿಶಾ ಅವರ ತಾಯಿ ಮತ್ತು ಕುಟುಂಬದ ಸದಸ್ಯರು ಕಣ್ಣೀರಿಟ್ಟರು.

‘ಮಗಳು, ಸೋದರಿ, ಗೆಳತಿ ಹಾಗೂ ಮುಗ್ಧ ಜೀವಕ್ಕೆ ನಾವು ವಿದಾಯ ಹೇಳಿದ್ದೇವೆ. ಕನಸುಗಳೊಂದಿಗೆ ಜೀವನದ ಹೊಸ ಹಂತವನ್ನು ಆರಂಭಿಸಿದ್ದ ಮಗಳು ನಮ್ಮನ್ನೆಲ್ಲಾ ಬಹು ಬೇಗನೆ ಅಗಲಿದ್ದಾಳೆ. ಹೆತ್ತವರ ಕಣ್ಣುಗಳು, ನುಚ್ಚುನೂರಾದ ಕನಸುಗಳು ಮತ್ತು ನ್ಯಾಯಕ್ಕಾಗಿ ಕಾಯುತ್ತಾ ಕಳೆಯುತ್ತಿರುವ ಪ್ರತಿ ಕ್ಷಣ ಸಮಾಜದ ಮುಂದೆ ಮೌನ ಪ್ರಶ್ನೆಯನ್ನು ಎತ್ತುತ್ತಿವೆ’ ಎಂದು ಟ್ವಿಶಾ ಅವರ ತಂದೆ ನವನಿಧಿ ಶರ್ಮಾ ಹೇಳಿದ್ದಾರೆ.

ಭೋಪಾಲ್‌ನ ಕತಾರ ಹಿಲ್ಸ್ ಪ್ರದೇಶದಲ್ಲಿರುವ ಮನೆಯಲ್ಲಿ ಟ್ವಿಶಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಗಿತ್ತು.

ಪತಿ ಸಮರ್ಥ್ ಸಿಂಗ್ ಮತ್ತು ಅತ್ತೆ, ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ವಿರುದ್ಧ ವರದಕ್ಷಿಣೆ ಕಿರುಕುಳ ಆರೋಪದಡಿ ಕತಾರ ಹಿಲ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಹತ್ತು ದಿನಗಳವರೆಗೆ ತಲೆಮರೆಸಿಕೊಂಡಿದ್ದ ಸಮರ್ಥ್ ಸಿಂಗ್ ಅವರನ್ನು ಶುಕ್ರವಾರ ಜಬಲಪುರದಲ್ಲಿ ಬಂಧಿಸಲಾಗಿತ್ತು. ಭೋಪಾಲ್ ನ್ಯಾಯಾಲಯವು ಸಮರ್ಥ್ ಅವರನ್ನು ಏಳು ದಿನಗಳ ಪೊಲೀಸ್ ಕಸ್ಟಡಿಗೆ ನೀಡಿ ಶನಿವಾರ ಆದೇಶಿಸಿತ್ತು.


ಭೋಪಾಲ್‌ನ ಭದ್‌ಭದಾ ವಿಶ್ರಾಮ ಘಾಟ್‌ನಲ್ಲಿ ಭಾನುವಾರ ಟ್ವಿಶಾ ಶರ್ಮಾ ಅವರ ಅಂತ್ಯಕ್ರಿಯೆ ವೇಳೆ ತಾಯಿ ರೇಖಾ ಶರ್ಮಾ ಕಣ್ಣೀರಿಟ್ಟರು —ಪಿಟಿಐ ಚಿತ್ರ

‘ವರದಿ ಸಿದ್ಧಪಡಿಸಲು ಸಮಯ ಬೇಕು’

‘ಟ್ವಿಶಾ ಶರ್ಮಾ ಅವರ ಎರಡನೇ ಮರಣೋತ್ತರ ಪರೀಕ್ಷೆ ಪೂರ್ಣಗೊಂಡಿದೆ. ಅಂಗಾಂಶ ಪರೀಕ್ಷೆ ಮತ್ತು ಒಳಾಂಗಗಳ ಪರೀಕ್ಷೆ ಸೇರಿದಂತೆ ಕೆಲ ಪ್ರಯೋಗಾಲಯ ಪರೀಕ್ಷೆಗಳ ಅಗತ್ಯ ಇರುವುದರಿಂದ ವರದಿ ಸಿದ್ಧಪಡಿಸಲು ಸ್ವಲ್ಪ ಸಮಯ ಹಿಡಿಯುತ್ತದೆ’ ಎಂದು ದೆಹಲಿಯ ಏಮ್ಸ್‌ನ ವಿಧಿವಿಜ್ಞಾನ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ. ಸುಧೀರ್ ಗುಪ್ತಾ ತಿಳಿಸಿದ್ದಾರೆ.

ಫಾಲ್ಟಾ: ಬಿಜೆಪಿಗೆ ಭರ್ಜರಿ ಗೆಲುವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಮರುಮತದಾನದಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ.

ಒಂದು ಲಕ್ಷ ಮತಗಳ ಅಂತರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದರೆ, ಇತ್ತ ಟಿಎಂಸಿ ಅಭ್ಯರ್ಥಿ ಠೇವಣಿ ಕಳೆದುಕೊಂಡಿದ್ದಾರೆ.

ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಏಪ್ರಿಲ್ 29ರಂದು ನಡೆದ ಮತದಾನದ ವೇಳೆ ಹಲವಾರು ಅಕ್ರಮಗಳು ನಡೆದಿವೆ ಎಂಬ ಕಾರಣ ನೀಡಿ ಚುನಾವಣಾ ಆಯೋಗವು ಈ ಕ್ಷೇತ್ರದಲ್ಲಿ ಮೇ 21ರಂದು ಮರು ಮತದಾನ ನಡೆಸಿತ್ತು, ಭಾನುವಾರ ಫಲಿತಾಂಶ ಘೋಷಣೆಯಾಗಿದೆ.

ಬಿಜೆಪಿ ಅಭ್ಯರ್ಥಿ ದೇವಾಂಗ್ಶು ಪಾಂಡಾ ಅವರು 1,49,666 ಮತಗಳನ್ನು ಗಳಿಸುವ ಮೂಲಕ ತಮ್ಮ ಪ್ರತಿಸ್ಪರ್ಧಿಯಾಗಿದ್ದ ಸಿಪಿಎಂನ ಶಂಭು ನಾಥ್ ಅವರನ್ನು 1,09,021 ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ಶಂಭು 40,645 ಮತಗಳನ್ನು ಮಾತ್ರ ಗಳಿಸುವಲ್ಲಿ ಸಫಲರಾಗಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಅಬ್ದುಲ್ ರಜಾಕ್ ಮುಲ್ಲಾ 10,084 ಮತಗಳನ್ನು ಪಡೆದಿದ್ದಾರೆ.

ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ 7,783 ಮತಗಳನ್ನು ಮಾತ್ರ ಪಡೆದು, ಠೇವಣಿ ಕಳೆದುಕೊಂಡಿದ್ದಾರೆ. ಮತದಾನಕ್ಕೂ ಎರಡು ದಿನಗಳ ಹಿಂದಷ್ಟೇ ಸ್ಪರ್ಧೆಯಿಂದ ಹಿಂದೆ ಸರಿಯುವುದಾಗಿ ಖಾನ್ ಘೋಷಿಸಿದ್ದರು. ಆದರೆ, ಆ ಸಂದರ್ಭದಲ್ಲಿ ನಾಮಪತ್ರ ಹಿಂಪಡೆಯಲು ಅವಕಾಶ ಇಲ್ಲದ ಕಾರಣ ಅವರು ಕಣದಲ್ಲೇ ಮುಂದುವರಿದಿದ್ದರು.

ಫಾಲ್ಟಾ ಗೆಲುವು ಕುರಿತಂತೆ ಮುಖ್ಯಮಂತ್ರಿ ಸುವೇಂದು ಅಧಿಕಾರಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿ,‘ ಬಿಜೆಪಿ ಅಭ್ಯರ್ಥಿ ದೇವಾಂಗ್ಶು ಅವರಿಗೆ ಅಭೂತಪೂರ್ವ ಗೆಲುವು ನೀಡಿದ ಫಾಲ್ಟಾ ಜನರಿಗೆ ಸರ್ಕಾರವು ಅಭಿವೃದ್ಧಿಯ ಮೂಲಕ ಋಣ ಸಂದಾಯ ಮಾಡಲಿದೆ’ ಎಂದಿದ್ದಾರೆ.

ಫಾಲ್ಟಾದ ಗೆಲುವಿನೊಂದಿಗೆ ಬಿಜೆಪಿ ಒಟ್ಟು 208 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದಂತಾಗಿದೆ. ಆದರೆ, ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ನಂದಿಗ್ರಾಮ ಕ್ಷೇತ್ರವನ್ನು ಬಿಟ್ಟುಕೊಟ್ಟಿರುವ ಕಾರಣ ಪ್ರಸಕ್ತ ವಿಧಾನಸಭೆಯಲ್ಲಿ ಬಿಜೆಪಿಯ ಬಲ 207 ಆಗಿದೆ.



ಎಲಿಮಿನೇಟರ್‌ಗೆ ರಾಜಸ್ಥಾನ ರಾಯಲ್ಸ್

ಜೋಫ್ರಾ ಆರ್ಚರ್ ಆಲ್‌ರೌಂಡ್ ಆಟಕ್ಕೆ ಒಲಿದ ಜಯ • ಸೂರ್ಯ ಅರ್ಧಶತಕ

ಮುಂಬೈ (ಪಿಟಿಐ): ಜೋಫ್ರಾ ಆರ್ಚರ್ ಅವರ ಆಲ್‌ರೌಂಡ್ ಆಟದ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡವು ಪ್ಲೇ ಆಫ್ ಪ್ರವೇಶಿಸಿತು.

ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು 30 ರನ್‌ಗಳ ಜಯ ಸಾಧಿಸಿದ ರಾಯಲ್ಸ್ ಪ್ಲೇ ಆಫ್ ಪ್ರವೇಶಿಸಿದ ನಾಲ್ಕನೇ ತಂಡವಾಯಿತು. ಒಟ್ಟು 16 ಅಂಕ ಗಳಿಸಿತು. ಇದರಿಂದಾಗಿ ಪಂಜಾಬ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಪ್ಲೇ ಆಫ್ ಆಸೆ ಕಮರಿತು.

ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ರಾಜಸ್ಥಾನ ತಂಡದ ಆರಂಭ ಉತ್ತಮವಾಗಿರಲಿಲ್ಲ. ಪವರ್‌ಪ್ಲೇ ಅವಧಿಯಲ್ಲಿಯೇ ತಂಡವು 54 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಅದರಲ್ಲಿ ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ ಮತ್ತು ರಿಯಾನ್ ಪರಾಗ್ ಔಟಾದವರು. ಕೊನೆಯಲ್ಲಿ ಜೋಫ್ರಾ (32; 15ಎ, 4x1, 6x3) ಮತ್ತು ರವೀಂದ್ರ ಜಡೇಜ (ಔಟಾಗದೇ 19; 11ಎ) ಮಿಂಚಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 205 ರನ್ ಗಳಿಸಿತು.

ಈ ಇನಿಂಗ್ಸ್‌ನಲ್ಲಿ ರಾಯಲ್ಸ್ ತಂಡದ ಯಾರೊಬ್ಬರೂ ಅರ್ಧಶತಕ ಗಳಿಸಲಿಲ್ಲ. ಆದರೂ ತಂಡದ ಮೊತ್ತ 'ದ್ವಿಶತಕ' ದಾಟಿತು. ಅದರಲ್ಲಿ ಧ್ರುವ ಜುರೆಲ್ (38; 26ಎ), ದಸುನ್ ಶನಕಾ (29; 15ಎ) ಹಾಗೂ ಡೊನೊವ್ಯಾನ್ ಫೆರಿರಾ (18; 15ಎ) ಅವರೂ ಉಪಯುಕ್ತ ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ಮುಂಬೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 175 ರನ್ ಗಳಿಸಿ ಅಭಿಯಾನ ಮುಗಿಸಿತು. ಆತಿಥೇಯ ತಂಡವು ಆರಂಭದಲ್ಲಿಯೇ ಕುಸಿದಿದ್ದರಿಂದ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣವಾಗಿದ್ದು ಜೋಫ್ರಾ ಆರ್ಚರ್ (4–0–17–3) ಅವರ ದಾಳಿ. ಅವರ ಮೊದಲ ಓವರ್‌ನಲ್ಲಿಯೇ ರೋಹಿತ್ ಶರ್ಮಾ ಖಾತೆ ತೆರೆಯುವ ಮುನ್ನವೇ ನಿರ್ಗಮಿಸಿದರು. ನಮನ್ ಧೀರ್ (6 ರನ್) ಕೂಡ ಕ್ಲೀನ್ ಬೌಲ್ಡ್ ಆದರು. ಇನ್ನೊಂದು ಬದಿಯಿಂದ ನಾಂದ್ರೆ ಬರ್ಗರ್ (43ಕ್ಕೆ2) ಕೂಡ ಉತ್ತಮ ಜೊತೆ ನೀಡಿದರು.

ಈ ನಡುವೆಯೂ ಸೂರ್ಯಕುಮಾರ್ ಯಾದವ್ (60; 42ಎ, 4x3, 6x4) ಲಯಕ್ಕೆ ಮರಳಿದರು. ವಿಲ್ ಜ್ಯಾಕ್ಸ್ (33 ರನ್) ಮತ್ತು ನಾಯಕ ಹಾರ್ದಿಕ್ (34 ರನ್) ಕಾಣಿಕೆ ನೀಡಿದರು.

ಮೇ 27ರಂದು ಮುಲ್ಲನಪುರದಲ್ಲಿ ನಡೆಯುವ ಎಲಿಮಿನೇಟರ್‌ನಲ್ಲಿ ರಾಜಸ್ಥಾನ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು ಆಡಲಿದೆ.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 8ಕ್ಕೆ205 (ಯಶಸ್ವಿ ಜೈಸ್ವಾಲ್ 27, ಧ್ರುವ ಜುರೇಲ್ 38, ದಸುನ್ ಶನಾಕ 29, ಜೋಫ್ರಾ ಆರ್ಚರ್ 32, ರವೀಂದ್ರ ಜಡೇಜ ಔಟಾಗದೇ 19, ಡೊನೊವ್ಯಾನ್ ಫೆರಿರಾ 18, ದೀಪಕ್ ಚಾಹರ್ 43ಕ್ಕೆ2, ಶಾರ್ದೂಲ್ ಠಾಕೂರ್ 41ಕ್ಕೆ2) ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9ಕ್ಕೆ175 (ಸೂರ್ಯಕುಮಾರ್ ಯಾದವ್ 60, ವಿಲ್ ಜ್ಯಾಕ್ಸ್ 33, ಹಾರ್ದಿಕ್ ಪಾಂಡ್ಯ 34, ಜೋಫ್ರಾ ಆರ್ಚರ್ 17ಕ್ಕೆ3, ನಾಂದ್ರೆ ಬರ್ಗರ್ 43ಕ್ಕೆ2, ಬ್ರಿಜೇಶ್ ಶರ್ಮಾ 26ಕ್ಕೆ2, ಯಶ್ ರಾಜ್ ಪೂಂಜಾ 44ಕ್ಕೆ2) **ಫಲಿತಾಂಶ:** ರಾಜಸ್ಥಾನ ರಾಯಲ್ಸ್ ತಂಡಕ್ಕೆ 30 ರನ್ ಜಯ.
ಪಂದ್ಯದ ಆಟಗಾರ: ಜೋಫ್ರಾ ಆರ್ಚರ್.



ವಿಕೆಟ್ ಗಳಿಸಿದ ರಾಜಸ್ಥಾನ ರಾಯಲ್ಸ್ ತಂಡದ ಜೋಫ್ರಾ ಆರ್ಚರ್ (ಬಲ) ಅವರನ್ನು ಯಶಸ್ವಿ ಜೈಸ್ವಾಲ್ (ಎಡ) ಅಭಿನಂದಿಸಿದರು ಪಿಟಿಐ ಚಿತ್ರ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	14	9	5	0	18	0.783
ಜಿ ಟಿ	14	9	5	0	18	0.695
ಎಸ್‌ಆರ್‌ಎಚ್	14	9	5	0	18	0.524
ಆರ್ ಆರ್	14	8	6	0	16	0.189
ಪಿಬಿಕೆಎಸ್	14	7	6	1	15	0.309
ಡಿ ಸಿ	14	7	7	0	14	- 0.651
ಕೆಕೆಆರ್	14	6	7	1	13	- 0.147
ಸಿಎಸ್‌ಕೆ	14	6	8	0	12	- 0.345
ಎಂ ಐ	14	4	10	0	8	- 0.584
ಎಲ್‌ಎಸ್‌ಜಿ	14	4	10	0	8	- 0.740

ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್, ಜಿಟಿ (638 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)

ಆಟದಂಗಳದಲ್ಲಿ ಪಂದ್ಯ ಆಡುವಾಗಲೇ ದುರಂತ ಸಾವು

ಕ್ರಿಕೆಟಿಗ ಅಕ್ಷಯ್‌ಗೆ ಹೃದಯಾಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಣಜಿ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ್ದ ಎಸ್.ಎಲ್. ಅಕ್ಷಯ್ (39) ಅವರು ಭಾನುವಾರ ಮೂರನೇ ಡಿವಿಷನ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಆಡುವ ಸಂದರ್ಭದಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾದರು.

ಕೆಎಸ್‌ಸಿಎ –ನಾಸೂರ್ ಸ್ಮರಣಾರ್ಥ ಶೀಲ್ಡ್ ಗುಂಪು–1 ಡಿವಿಷನ್–3ರ ಪಂದ್ಯದಲ್ಲಿ ಅವರು ಆಡುತ್ತಿದ್ದರು. ಅವಲಹಳ್ಳಿಯ ಎಸ್‌ಎಸ್‌ಎಲ್‌ಎಸ್ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಭಾರತ್ ಕ್ರಿಕೆಟ್ ಕ್ಲಬ್ ವಿರುದ್ಧದ ಆ ಪಂದ್ಯದಲ್ಲಿ ಸಫೈಯರ್ ಕ್ಲಬ್ ತಂಡದ ಪರವಾಗಿ ಅವರು ಕಣಕ್ಕಿಳಿದಿದ್ದರು.

ಬಲಗೈ ಮಧ್ಯಮವೇಗಿ ಅಕ್ಷಯ್ ಬೆಳಗಿನ ಅವಧಿಯಲ್ಲಿ ನಾಲ್ಕು ಓವರ್ ಬೌಲಿಂಗ್ ಮಾಡಿದ್ದರು. ಸ್ವಲ್ಪ ಆಯಾಸ ಮತ್ತು ಅಸ್ವಸ್ಥತೆ ಕಂಡು ಬಂದಾಗ ಬೌಲಿಂಗ್ ಮುಂದುವರಿಸಲಿಲ್ಲ. ಸ್ಲಿಪ್‌ನಲ್ಲಿ ಫೀಲ್ಡಿಂಗ್ ಮಾಡತೊಡಗಿದರು. ಆದರೆ ಸುಸ್ತು ಹೆಚ್ಚಿದ್ದರಿಂದ ಮೈದಾನ ತೊರೆದರು. ಡಗ್‌ಔಟ್‌ನಲ್ಲಿ ವಿಶ್ರಾಂತಿ ಪಡೆದರು. ಆದರೂ ಎದೆನೋವು ಹೆಚ್ಚಿದ ಕಾರಣ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮೂಲಗಳು ತಿಳಿಸಿವೆ.

'ಒಬ್ಬ ಒಳ್ಳೆಯ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ. ಬದ್ಧತೆ ಇರುವ ತರಬೇತುದಾರನೂ ಆಗಿದ್ದರು. ಕ್ರಿಕೆಟ್‌ಗಾಗಿ ಸದಾ ತುಡಿಯುತ್ತಿದ್ದ ವ್ಯಕ್ತಿ. ಒಳ್ಳೆಯ ಆಟಗಾರ. ತಮ್ಮ ಅನುಭವವನ್ನು ಯುವ ಆಟಗಾರರಿಗೆ ಹೇಳಿಕೊಡುವಲ್ಲಿ ಸದಾ ಮುಂದಿದ್ದರು. ಅವರಿಲ್ಲ ಎಂಬ ಸುದ್ದಿ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಅಕ್ಷಯ್ ಜೊತೆಗೆ ಬಹುಕಾಲ ಆಡಿರುವ ಕೆ.ಬಿ. ಪವನ್ ಒಡನಾಟ ನೆನಪಿಸಿಕೊಂಡರು.

ಶಿವಮೊಗ್ಗದಲ್ಲಿ 1987ರ ಏಪ್ರಿಲ್ 30ರಂದು ಅಕ್ಷಯ್ ಜನಿಸಿದ್ದರು. ಹಂತ ಹಂತವಾಗಿ ಬೆಳೆದು ಕರ್ನಾಟಕ ತಂಡದಲ್ಲಿ ಸ್ಥಾನ ಗಳಿಸಿದ್ದರು. 2010ರಲ್ಲಿ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಅವರು ರಾಜ್ಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಬಾಲ್ಯದಿಂದಲೂ ಕರ್ನಾಟಕ ತಂಡವನ್ನು ರಣಜಿ ಟ್ರೋಫಿ ಟೂರ್ನಿಯಲ್ಲಿ ಪ್ರತಿನಿಧಿಸುವ ಕನಸು ಕಂಡವರು. ಅದೂ ಕೈಗೂಡಿತು. 2011ರಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೌರಾಷ್ಟ್ರ ಎದುರಿನ ಪಂದ್ಯದಲ್ಲಿ ಅಕ್ಷಯ್ ಪದಾರ್ಪಣೆ ಮಾಡಿದರು. ಆ ಪಂದ್ಯದಲ್ಲಿ ಎರಡೂ ಇನಿಂಗ್ಸ್ ಸೇರಿ ಮೂರು ವಿಕೆಟ್ ಗಳಿಸಿದ್ದರು.

ಪ್ರತಿಭೆ, ಛಲ ಮತ್ತು ಉತ್ತಮ ಕೌಶಲವಿದ್ದರೂ ಅಕ್ಷಯ್‌ಗೆ ಹೆಚ್ಚು ಪಂದ್ಯಗಳಲ್ಲಿ ಆಡುವ ಅವಕಾಶ ಸಿಗಲಿಲ್ಲ. ಏಕೆಂದರೆ ಆ ಕಾಲಘಟ್ಟದಲ್ಲಿ ಕರ್ನಾಟಕ ತಂಡದಲ್ಲಿ ಆರ್. ವಿನಯಕುಮಾರ್, ಶ್ರೀನಾಥ್ ಅರವಿಂದ್, ಅಭಿಮನ್ಯು ಮಿಥುನ್ ಮತ್ತು ಸ್ಟುವರ್ಟ್ ಬಿನ್ನಿ ಅವರಂತಹ ಅನುಭವಿ ಹಾಗೂ ಶ್ರೇಷ್ಠ ಆಟಗಾರರು ಇದ್ದರು. ಎರಡನೇ ಸಾಲಿನಲ್ಲಿ ಎಚ್.ಎಸ್. ಶರತ್ ಮತ್ತು ರೋನಿತ್ ಮೋರೆ ಅವರಿದ್ದರು. 2012ರಲ್ಲಿ ಹರಿಯಾಣ ವಿರುದ್ಧ ರಣಜಿ ಪಂದ್ಯವೇ ಅಕ್ಷಯ್ ಅವರಿಗೆ ಕೊನೆಯ ಪ್ರಥಮ ದರ್ಜೆ ಪಂದ್ಯವಾಯಿತು. ಆದರೆ ತಮಗೆ ಅವಕಾಶ ಸಿಕ್ಕಾಗಲೆಲ್ಲ ಸಾಮರ್ಥ್ಯ ಮೆರೆದರು. 2013-14ರಲ್ಲಿ ರಣಜಿ ಟ್ರೋಫಿ ಜಯಿಸಿದ ಕರ್ನಾಟಕದ ಬಳಗದಲ್ಲಿ ಅವರಿದ್ದರು.

ಆರು ಪ್ರಥಮ ದರ್ಜೆ ಪಂದ್ಯಗಳಿಂದ 18 ವಿಕೆಟ್ ಗಳಿಸಿದರು. 3 ಲಿಸ್ಟ್ ಎ ಪಂದ್ಯಗಳಲ್ಲಿ 6 ವಿಕೆಟ್ ಹಾಗೂ 9 ಟಿ20 ಪಂದ್ಯಗಳಲ್ಲಿ 8 ವಿಕೆಟ್ ಗಳಿಸಿದರು.

ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಮತ್ತು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಗಳಲ್ಲಿಯೂ ಅವರು ಛಾಪು ಮೂಡಿಸಿದ್ದರು. 19 ವರ್ಷದೊಳಗಿನವರ ರಾಜ್ಯ ತಂಡದ ಸಹಾಯಕ ಕೋಚ್ ಆಗಿದ್ದರು.



ಎಸ್.ಎಲ್. ಅಕ್ಷಯ್

ಶಿವಮೊಗ್ಗದಲ್ಲಿ ಇಂದು ಅಂತ್ಯಕ್ರಿಯೆ

ಎಸ್.ಎಲ್.ಅಕ್ಷಯ್ ಮೂಲತಃ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರಿನವರು. ಅವರ ತಂದೆ ಶಿವಮೊಗ್ಗದಲ್ಲಿ. ಸಹಾಯಕ ಸಬ್ ಇನ್ಸ್‌ಪೆಕ್ಟರ್ ಆಗಿ ನಿವೃತ್ತರಾಗಿದ್ದು, ನಿಧನರಾಗಿದ್ದಾರೆ. ತಾಯಿ ರಾಧಾಲಕ್ಷ್ಮಿ, ಶಿವಮೊಗ್ಗದ ಅರವಿಂದನಗರದಲ್ಲಿ ನೆಲೆಸಿದ್ದಾರೆ.

ಶಿವಮೊಗ್ಗದ ದುರ್ಗಿಗುಡಿ ಕ್ರಿಕೆಟ್ ಕ್ಲಬ್ ಪರ ಆಡಿದ್ದ ಅಕ್ಷಯ್ ನಗರದ ಡಿವಿಎಸ್ ಕಾಲೇಜಿನ ಹಳೆಯ ವಿದ್ಯಾರ್ಥಿ. ಬೆಂಗಳೂರಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪದವಿ ಮುಗಿಸಿದ್ದ ಅಕ್ಷಯ್, ವಿಜಯ ಬ್ಯಾಂಕ್‌ನಲ್ಲಿ ಕೆಲಸಕ್ಕೆ ಸೇರಿದ್ದರು.

ಅಕ್ಷಯ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಸಾರ್ವಜನಿಕರಿಗೆ ಬೆಳಿಗ್ಗೆ 11.30ಕ್ಕೆ ಶಿವಮೊಗ್ಗದ ನವುಲೆಯ ಕೆಎಸ್ ಸಿಎ ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ಸೋಮವಾರ ಮಧ್ಯಾಹ್ನ ರೋಟರಿ ಚಿತಾಗಾರದಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಅಕ್ಷಯ್ ಅವರ ಕೋಚ್, ಕೆಎಸ್ ಸಿಎ ಶಿವಮೊಗ್ಗ ವಲಯದ ಮಾಜಿ ಸಂಚಾಲಕ ಡಿ.ಆರ್.ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್‌ಗೆ ರಾಜ್ಯ ಬಾಲಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಲಯದಲ್ಲಿರುವ ಸಮರ್ಥ್ ಕುಮಾರ್ ಮಣೂರ್ ಅವರು ಪುದುಚೆರಿಯಲ್ಲಿ ನಡೆಯುತ್ತಿರುವ 76ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಿ ಗುಂಪಿನ ಪಂದ್ಯದಲ್ಲಿ ಭಾನುವಾರ ಚಂಡೀಗಢ ವಿರುದ್ಧ 33 ಅಂಕ ಗಳಿಸಿದರು. ಅವರ ಆಟದ ಬಲದಿಂದ ಕರ್ನಾಟಕ ಬಾಲಕರ ತಂಡವು 87–67ರಿಂದ ಜಯ ಸಾಧಿಸಿತು. ಹ್ಯಾಟ್ರಿಕ್ ಗೆಲುವಿನೊಂದಿಗೆ ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಟ್ಟಿತು.

ರಾಜೀವಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಮರ್ಥ್ ಆರಂಭದಿಂದಲೂ ಮಿಂಚಿನ ಆಟವಾಡಿದರು. ವೈಭವ್ ಗೌಡ ಹಾಗೂ ಅನ್ಮುಲ್ ಸಾಯಿ ತಲಾ 12 ಅಂಕ ಗಳಿಸಿ, ಸಮರ್ಥ್ ಅವರಿಗೆ ಉತ್ತಮ ಜೊತೆ ನೀಡಿದರು. ಚಂಡೀಗಢ ತಂಡದ ಅಜಯ್ (21 ಅಂಕ) ಹಾಗೂ ತುಷಾರ್ (17 ಅಂಕ) ಹೋರಾಟ ತೋರಿದರು.

ರಾಜ್ಯ ಬಾಲಕರ ತಂಡವು ಗುಂಪು ಹಂತದ ಮೊದಲೆರಡು ಪಂದ್ಯಗಳಲ್ಲಿ 71–55ರಿಂದ ಪಂಜಾಬ್ ವಿರುದ್ಧ ಮತ್ತು 87–46ರಿಂದ ರಾಜಸ್ಥಾನ ವಿರುದ್ಧ ಜಯ ಸಾಧಿಸಿತ್ತು.

ಬಾಲಕಿಯರ ವಿಭಾಗದ ಎ ಗುಂಪಿನ ಪಂದ್ಯದಲ್ಲಿ ರಾಜ್ಯ ತಂಡವು 69–62ರಿಂದ ತಮಿಳುನಾಡು ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು. ನಿಲಯ ರೆಡ್ಡಿ (19 ಅಂಕ), ನಿಧಿ ಉಮೇಶ್ (18 ಅಂಕ) ಹಾಗೂ ಶ್ರಾವಣಿ ಶಿವಣ್ಣ (13 ಅಂಕ) ಕರ್ನಾಟಕ ತಂಡದ ಗೆಲುವಿನಲ್ಲಿ ಮಿಂಚಿದರು.

ಕೆ.ಎಲ್.ರಾಹುಲ್ ಅರ್ಧಶತಕ; ಕುಲದೀಪ್, ಎನ್‌ಗಿಡಿಗೆ ತಲಾ ಮೂರು ವಿಕೆಟ್

ಡೆಲ್ಲಿ ಕ್ಯಾಪಿಟಲ್ಸ್‌ಗೆ ಗೆಲುವಿನ 'ಸಿಹಿ'

ಕೋಲ್ಕತ್ತ (ಪಿಟಿಐ): ಆಲ್‌ರೌಂಡ್ ಆಟ ಆಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಐಪಿಎಲ್‌ನ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಭಾನುವಾರ 40 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಸೋಲಿಸಿತು.

ಗೆಲುವಿನ ಸಿಹಿನೆನಪಿನೊಂದಿಗೆ ಡೆಲ್ಲಿ ತಂಡವು ಈ ಆವೃತ್ತಿಯಲ್ಲಿ ಅಭಿಯಾನ ಮುಗಿಸಿತು. ಅಜಿಂಕ್ಯ ರಹಾನೆ ಪಡೆಯು ನಿರಾಶೆ ಅನುಭವಿಸಿತು. ಮಧ್ಯಾಹ್ನದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಗೆದ್ದ ಕಾರಣ ಡೆಲ್ಲಿ ಮತ್ತು ಕೋಲ್ಕತ್ತ ತಂಡಗಳ ಪ್ಲೇ ಆಫ್ ಅವಕಾಶ ಮುಗಿದಿದ್ದರಿಂದ, ಈ ಪಂದ್ಯವು ಔಪಚಾರಿಕವಾಗಿತ್ತು.

ಈಡನ್ ಗಾರ್ಡನ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕನ್ನಡಿಗ ಕೆ.ಎಲ್. ರಾಹುಲ್ ಅವರ ಅಮೋಘ ಅರ್ಧಶತಕದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 203 ರನ್ ಗಳಿಸಿತು.

ಕಠಿಣ ಗುರಿ ಬೆನ್ನಟ್ಟಿದ ಕೆಕೆಆರ್ ತಂಡವು ಕುಲದೀಪ್ ಯಾದವ್ (29ಕ್ಕೆ3), ಲುಂಗಿ ಎನ್‌ಗಿಡಿ (27ಕ್ಕೆ3) ಹಾಗೂ ಮಿಚೆಲ್ ಸ್ಟಾರ್ಕ್ (26ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಎದುರು 18.4 ಓವರ್‌ಗಳಲ್ಲಿ 163 ರನ್‌ಗಳಿಗೆ ಹೋರಾಟ ಮುಗಿಸಿತು.

ಅಗ್ರಕ್ರಮಾಂಕದ ಬ್ಯಾಟರ್‌ಗಳಾದ ನಾಯಕ ಅಜಿಂಕ್ಯ ರಹಾನೆ (63; 39ಎ, 4x4, 6x4), ಮನೀಷ್ ಪಾಂಡೆ (25; 16 ಎ) ಹಾಗೂ ರೋವ್‌ಮನ್ ಪಾವೆಲ್ (29; 21ಎ) ಹೋರಾಟ ತೋರಿದರಾದರೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವಿಫಲರಾದರು.

ಇದಕ್ಕೆ ಮೊದಲು, ಲಯದಲ್ಲಿರುವ ರಾಹುಲ್ (60; 30ಎ) ಅಮೋಘ ಅರ್ಧಶತಕ ಗಳಿಸಿದರೆ, ಅಭಿಷೇಕ್ ಪೊರೆಲ್ (33; 18ಎ) ಬಿರುಸಿನ ಆಟವಾಡಿದರು. ಇವರಿಬ್ಬರು ಮೊದಲ ವಿಕೆಟ್ ಜೊತೆಯಾಟದಲ್ಲಿ 40 (27ಎ) ರನ್ ಸೇರಿಸಿ ಉತ್ತಮ ಆರಂಭ ಕೊಟ್ಟರು.

ಮಧ್ಯಮ ಕ್ರಮಾಂಕದಲ್ಲಿ ನಾಯಕ ಅಕ್ಷರ್ ಪಟೇಲ್ (39; 25ಎ) ಹಾಗೂ ಡೇವಿಡ್ ಮಿಲ್ಲರ್ (28; 19ಎ) ಅವರು ಅಮೂಲ್ಯ ಕಾಣಿಕೆ ನೀಡಿದರು. 'ಫಿನಿಷರ್' ಆಶುತೋಷ್ ಶರ್ಮಾ 11 ಎಸೆತಗಳಲ್ಲಿ ಅಜೇಯ 18 ರನ್ ಸೂರೆ ಮಾಡಿದರು.

ರಾಹುಲ್ ಅವರ ಬ್ಯಾಟಿಂಗ್ ಸಿಡಿಲಬ್ಬರದಿಂದ ಕೂಡಿತ್ತು. 200ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದರು. ಅವರ ಇನಿಂಗ್ಸ್‌ನಲ್ಲಿ ಐದು ಬೌಂಡರಿ ಹಾಗೂ 4 ಸಿಕ್ಸರ್‌ಗಳಿದ್ದವು. ಹಾಲಿ ಲೀಗ್‌ನಲ್ಲಿ ಅವರು 14 ಇನಿಂಗ್ಸ್‌ಗಳಲ್ಲಿ 593 ರನ್ ಕಲೆಹಾಕಿದರು. ಅದರಲ್ಲಿ ಒಂದು ಶತಕ ಹಾಗೂ ಐದು ಅರ್ಧಶತಕಗಳು ಸೇರಿವೆ.

ಕೋಲ್ಕತ್ತ ತಂಡದ ಅನುಕೂಲ್ ರಾಯ್ (23ಕ್ಕೆ1) ಮತ್ತು ಸೌರಭ್ ದುಬೆ (28ಕ್ಕೆ2) ಪರಿಣಾಮಕಾರಿ ದಾಳಿ ನಡೆಸಿದರು. ಸ್ಪಿನ್ನರ್‌ಗಳಾದ ಸುನಿಲ್ ನಾರಾಯಣ್ ಮತ್ತು ವರುಣ್ ಚಕ್ರವರ್ತಿ ಅವರು ತಲಾ ಒಂದು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5ಕ್ಕೆ203 (ಅಭಿಷೇಕ್ ಪೊರೆಲ್ 22, ಕೆ.ಎಲ್. ರಾಹುಲ್ 60, ಸಾಹಿಲ್ ಪರಕ್ 24, ಅಕ್ಷರ್ ಪಟೇಲ್ 39, ಡೇವಿಡ್ ಮಿಲ್ಲರ್ 28, ಆಶುತೋಷ್ ಶರ್ಮಾ ಔಟಾಗದೇ 18; ಸೌರಭ್ ದುಬೆ 28ಕ್ಕೆ2, ಅನುಕೂಲ್ ರಾಯ್ 23ಕ್ಕೆ1, ಸುನಿಲ್ ನಾರಾಯಣ್ 38ಕ್ಕೆ1, ವರುಣ್ ಚಕ್ರವರ್ತಿ 35ಕ್ಕೆ1). ಕೋಲ್ಕತ್ತ ನೈಟ್ ರೈಡರ್ಸ್: 18.4 ಓವರ್‌ಗಳಲ್ಲಿ 163 (ಅಜಿಂಕ್ಯ ರಹಾನೆ 69, ಮನೀಷ್ ಪಾಂಡೆ 25, ರೋವ್‌ಮನ್ ಪಾವೆಲ್ 29; ಕುಲದೀಪ್ ಯಾದವ್ 29ಕ್ಕೆ3, ಲುಂಗಿ ಎನ್‌ಗಿಡಿ 27ಕ್ಕೆ3, ಮಿಚೆಲ್ ಸ್ಟಾರ್ಕ್ 26ಕ್ಕೆ2). ಪಂದ್ಯದ ಆಟಗಾರ: ಕುಲದೀಪ್ ಯಾದವ್.





ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್, ಕುಲದೀಪ್ ಯಾದವ್ –ಪಿಟಿಐ ಚಿತ್ರಗಳು

ರಾಜ್ಯಮಟ್ಟದ ಮುಕ್ತ ರ್‍ಯಾಪಿಡ್ ಚೆಸ್ ಟೂರ್ನಿ

ಬೆಳಗಾವಿಯ ಶ್ರೀಕರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಧಾರವಾಡ: ಕಾಸ್ಮೊಸ್ ಕ್ಲಬ್ ಮತ್ತು ಅಭಿಜಿತ್ ಬೆಂಗೇರಿ ಫೌಂಡೇಷನ್ (ಎಬಿಎಫ್) ವತಿಯಿಂದ ನಗರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಮುಕ್ತ ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ ಬೆಳಗಾವಿಯ ಶ್ರೀಕರ ದರ್ಬಾ ಪ್ರಥಮ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಕಾಸ್ಮೊಸ್ ಕ್ಲಬ್‌ನಲ್ಲಿ ನಡೆದ ಟೂರ್ನಿಯಲ್ಲಿ ಅವರು 7.5 ಅಂಕ ಗಳಿಸಿ ಈ ಸಾಧನೆ ಮಾಡಿದರು.

ಆತಿಥೇಯ ಧಾರವಾಡದ ಸಿದ್ಧಾರ್ಥ್ ಎಂ.ಜೋಶಿ ಅವರು 7 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಶಿವಮೊಗ್ಗದ ವಿಲಾಸ್ ಅಂಡ್ರಾಡೆ ಅವರು 7 ಪಾಯಿಂಟ್ಸ್‌ಗಳೊಂದಿಗೆ ತೃತೀಯ ಸ್ಥಾನ ಪಡೆದರು.

ಪ್ರಥಮ ₹5 ಸಾವಿರ, ದ್ವಿತೀಯ ₹4 ಸಾವಿರ, ತೃತೀಯ ₹3 ಸಾವಿರ ನಗದು ಬಹುಮಾನ ಮತ್ತು ಮೂವರಿಗೂ ಟ್ರೋಫಿ ನೀಡಲಾಯಿತು.

ಹಿರಿಯ ನಾಗರಿಕರ ವಿಭಾಗದಲ್ಲಿ ಧಾರವಾಡದ ಬಳಿಗಾರ ವಿಶ್ವನಾಥ ಅವರು 5.5 ಅಂಕ ಪಡೆದು ಅತ್ಯುತ್ತಮ ಆಟಗಾರರಾಗಿ, ಮಹಿಳಾ ವಿಭಾಗದಲ್ಲಿ ಧಾರವಾಡ ರೂಪಾ ಎನ್. ಟಗರ್‌ಪುರ್ ಅವರು (4 ಅಂಕ) ಅತ್ಯುತ್ತಮ ಆಟಗಾರ್ತಿಯಾಗಿ ಹೊಮ್ಮಿದರು.

ವಿವಿಧ ವಿಭಾಗಗಳ ಫಲಿತಾಂಶ: ಬಾಲಕರು ಮತ್ತು ಬಾಲಕಿಯರ ವಿವಿಧ ವಿಭಾಗಗಳಲ್ಲಿ ನಡೆದ ಸ್ಪರ್ಧೆಗಳು ಫಲಿತಾಂಶ ಇಂತಿದೆ.

15 ವರ್ಷದೊಳಗಿನ ಬಾಲಕರು: ಬೆಳಗಾವಿಯ ಗಗನ್ ಗಿರೀಶ್ ಕೊಪ್ಪಳ 1, ಶಿವಮೊಗ್ಗದ ಚಿರಂತ್ ಯಾದವ್ ಪಿ 2 ಹಾಗೂ ಹುಬ್ಬಳ್ಳಿಯ ಚಂದನ್ ಮೃತ್ಯುಂಜಯ ದೊಡ್ಡಮನಿ 3.

ಬಾಲಕಿಯರು: ಧಾರವಾಡದ ಶ್ರೇಯಾ ರಘುಪತಿ ಹೆಗಡೆ 1, ಗದಗಿನ ಸುಭಿಕ್ಷಾ ಕೃಷ್ಣ ಜಂಗಳಿ 2 ಹಾಗೂ ಬೆಳಗಾವಿಯ ಸ್ನೇಹಾ ಉಪ್ಪಿನಪಾಟೀಲ 3.

12 ವರ್ಷದೊಳಗಿನ ಬಾಲಕರು: ಧಾರವಾಡದ ವಿರಾಜ್ ಸಿದ್ದೇಶ ಕಟ್ಟಿಮನಿ 1, ಚಂದನ್ ಲಕ್ಷ್ಮಣ್ ಮುಂದಿನಮನಿ 2 ಹಾಗೂ ಬೆಳಗಾವಿಯ ದಿವ್ಯಾಂಶ್ ಮನೋಹರ್ ತಳ್ಳಿಮನಿ 3.

ಬಾಲಕಿಯರು: ಬೆಂಗಳೂರಿನ ಹಿರಾಲ್ ಚೇತನ್ ಷಾ 1, ಬೆಳಗಾವಿಯ ಇರಾ ಪಿ.ರಾಂಪುರೆ 2 ಹಾಗೂ ಧ್ರುವಿಕಾ ಬಿ 3.

9 ವರ್ಷದೊಳಗಿನ ಬಾಲಕರು: ಧಾರವಾಡದ ಆದಿತ್ಯ ಕಲ್ಲೊಳ್ಳಿ 1, ಗೋವಾದ ವೇಗಾಸ್ ಡ್ವೆನ್ನನ್ ಜಾಕೆ 2 ಹಾಗೂ ಧಾರವಾಡದ ಕಬೀರ್ ಮೋಹನ್ 3.

ಬಾಲಕಿಯರು: ಧಾರವಾಡದ ಸಮೈರಾ ಎಸ್.ಕಟಗಿ 1, ಹುಬ್ಬಳ್ಳಿಯ ಪ್ರಣವಿ ಚಂದಾಲವರ್ 2 ಹಾಗೂ ಬೆಳಗಾವಿಯ ಅದಿತಿ ಪಾಟೀಲ 3ನೇ ಸ್ಥಾನ ಪಡೆದರು.



ಶ್ರೀಕರ ದರ್ಬಾ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಬೆಲಿಂಡಾ ಬೆನ್ಸಿಕ್ ಮುನ್ನಡೆ

ಜ್ವರೇವ್, ಮಿರಾ ಶುಭಾರಂಭ

ಪ್ಯಾರಿಸ್ (ಎಎಫ್‌ಪಿ): ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಹಾಗೂ ರಷ್ಯಾದ ಮಿರಾ ಆ್ಯಂಡ್ರೀವಾ ಅವರು ಭಾನುವಾರ ಆರಂಭವಾದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಎರಡನೇ ಶ್ರೇಯಾಂಕದ ಆಟಗಾರ ಜ್ವರೇವ್ ಅವರು ಪುರುಷರ ವಿಭಾಗದ ಮೊದಲ ಸುತ್ತಿನಲ್ಲಿ 6-3, 6-4, 6-2ರಿಂದ ಫ್ರಾನ್ಸ್‌ನ ಬೆಂಜಮಿನ್ ಬೊಂಜಿ ಅವರನ್ನು ಸೋಲಿಸಿದರು. ಎಂಟನೇ ಶ್ರೇಯಾಂಕ ಪಡೆದಿರುವ ಮಿರಾ ಅವರು ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 6-3, 6-3ರಿಂದ ನೇರ ಸೆಟ್‌ಗಳಲ್ಲಿ ಆತಿಥೇಯ ದೇಶದ ಫಿಯೊನಾ ಫೆರೊ ಅವರನ್ನು ಹಿಮ್ಮೆಟ್ಟಿಸಿದರು.


29 ವರ್ಷ ವಯಸ್ಸಿನ ಜ್ವರೇವ್ ಅವರು ಎರಡನೇ ಸುತ್ತಿನಲ್ಲಿ ಜೆಕ್ ಗಣರಾಜ್ಯದ ಥಾಮಸ್ ಮಕಾವ್ ಅವರನ್ನು ಎದುರಿಸಲಿದ್ದಾರೆ. ಥಾಮಸ್ ಅವರು ಆರಂಭಿಕ ಸುತ್ತಿನಲ್ಲಿ 6–4, 6–4, 6–3ರಿಂದ ಬೆಲ್ಜಿಯಂನ ಝಿಝೌ ಬರ್ಗ್ಸ್ ಅವರನ್ನು ಸೋಲಿಸಿದರು. 19 ವರ್ಷ ವಯಸ್ಸಿನ ಮಿರಾ ಅವರು ಎರಡನೇ ಸುತ್ತಿನಲ್ಲಿ ಕೊಲಂಬಿಯಾದ ಎಮಿಲಿಯಾನಾ ಅರಂಗೊ ಅವರನ್ನು ಎದುರಿಸಲಿದ್ದಾರೆ. ಎಮಿಲಿಯಾನಾ ಅವರು ಅರ್ಹತಾ ಸುತ್ತು ಆಡಿ, ಮುಖ್ಯ ಸುತ್ತು ಪ್ರವೇಶಿಸಿದ್ದಾರೆ.

13ನೇ ಶ್ರೇಯಾಂಕದ ಆಟಗಾರ, ರಷ್ಯಾದ ಕರೆನ್ ಕಚನೋವ್ ಅವರೂ ಎರಡನೇ ಸುತ್ತಿಗೆ ಮುನ್ನಡೆದರು. ಅವರು ಮೊದಲ ಸುತ್ತಿನ ಪಂದ್ಯದಲ್ಲಿ 6–3, 7–6 (7–3), 6–0ಯಿಂದ ಆತಿಥೇಯ ರಾಷ್ಟ್ರದ ಅರ್ಥರ್ ಜಿಯಾ ಅವರನ್ನು ಮಣಿಸಿದರು.

11ನೇ ಶ್ರೇಯಾಂಕದ ಆಟಗಾರ್ತಿ, ಸ್ವಿಟ್ಜರ್ಲೆಂಡ್‌ನ ತಾರೆ ಬೆಲಿಂಡಾ ಬೆನ್ಸಿಕ್ ಅವರು 6–2, 6–3ರಿಂದ ಆಸ್ಟ್ರಿಯಾದ ಸಿಂಜಾ ಕ್ರೌಸ್ ವಿರುದ್ಧ ಸುಲಭವಾಗಿ ಗೆದ್ದರು.

ಉಕ್ರೇನಿನ ಮಾರ್ತಾ ಮಾರ್ತಾ ಕೊಸ್ಟಿಯುಕ್ ಅವರೂ ಎರಡನೇ ಸುತ್ತು ಪ್ರವೇಶಿಸಿದರು. ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು 6–2, 6–3ರಿಂದ ರಷ್ಯಾದ ಒಕ್ಸಾನಾ ಸೆಲೆಖ್ಮೆಟೆವಾ ವಿರುದ್ಧ ಜಯ ಸಾಧಿಸಿದರು.





ರಷ್ಯಾದ ಮಿರಾ ಆ್ಯಂಡ್ರೀವಾ, ಸ್ವಿಟ್ಜರ್ಲೆಂಡ್‌ನ ತಾರೆ ಬೆಲಿಂಡಾ ಬೆನ್ಸಿಕ್ ಎಎಫ್‌ಪಿ ಚಿತ್ರಗಳು

5,000 ಮೀ. ಓಟ: ಗುಲ್ವೀರ್ ದಾಖಲೆ

ನವದೆಹಲಿ (ಪಿಟಿಐ): ಭಾರತದ ಗುಲ್ವೀರ್ ಸಿಂಗ್ ಅವರು ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಶನಿವಾರ ನಡೆದ 'ಲಾ ಟ್ರ್ಯಾಕ್ ಫೆಸ್ಟ್' ಕೂಟದ ಪುರುಷರ 5,000 ಮೀ. ಓಟದಲ್ಲಿ ಬೆಳ್ಳಿ ಪದಕ ಜಯಿಸಿದರು. 13 ನಿಮಿಷ 03.93 ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದ ಅವರು ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಟೂರ್ ಸಿಲ್ವರ್ ಮಟ್ಟದ ಈ ಕೂಟದಲ್ಲಿ ಎರಿಟ್ರಿಯಾದ ಹ್ಯಾಬ್ಟಮ್ ಸ್ಯಾಮುಯೆಲ್ (12 ನಿ., 57.23 ಸೆ.) ಸ್ವರ್ಣ ಪದಕ ಜಯಿಸಿದರು. ಆಸ್ಟ್ರೇಲಿಯಾದ ಜಾಕ್ಸನ್ ಶಾರ್ಪ್ (13 ನಿ., 05.22 ಸೆ.) ಕಂಚು ತಮ್ಮದಾಗಿಸಿಕೊಂಡರು.

ದೇಶದ ಅಗ್ರಮಾನ್ಯ ದೂರ ಅಂತರದ ಓಟಗಾರನಾಗಿರುವ ಗುಲ್ವೀರ್ ಅವರು ಜಪಾನ್‌ನಲ್ಲಿ 2024ರ ಸೆಪ್ಟೆಂಬರ್‌ನಲ್ಲಿ ನಡೆದ ಏಷ್ಯನ್ ಅಥ್ಲೆಟಿಕ್ಸ್ ಕೂಟದಲ್ಲಿ 13 ನಿ., 11.82 ಸೆ.ಗಳಲ್ಲಿ ಸ್ಪರ್ಧೆ ಮುಗಿಸಿದ್ದರು. ಈ ಬಾರಿ ಎಂಟು ಸೆಕೆಂಡುಗಳಿಂದ ಆ ದಾಖಲೆಯನ್ನು ಮುರಿದಿದ್ದಾರೆ.

ಮೊದಲ ಬಾರಿ ಕನ್ನಡದಲ್ಲಿ ವೀಕ್ಷಕ ವಿವರಣೆ

ಬೆಂಗಳೂರು: ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ವೀಕ್ಷಕ ವಿವರಣೆಯನ್ನೂ ಇದೇ ಮೊದಲ ಬಾರಿ ಕನ್ನಡದಲ್ಲಿ ನೀಡಲು ಪ್ರಸಾರ ಸಂಸ್ಥೆ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಸಂಸ್ಥೆಯು ಸಿದ್ಧತೆ ನಡೆಸಿದೆ.

ರೋಲ್ಯಾಂಡ್ ಗ್ಯಾರೋಸ್‌ನ ಪ್ರಧಾನ ಕೋರ್ಟ್‌ನಲ್ಲಿ ನಡೆಯುವ ಪಂದ್ಯಗಳ ವೀಕ್ಷಕ ವಿವರಣೆಯನ್ನು 'ಸೋನಿ ಟೆನ್ 4' ವಾಹಿನಿಯಲ್ಲಿ ಕನ್ನಡದಲ್ಲೇ ಆಲಿಸಬಹುದಾಗಿದೆ. ಟೆನಿಸ್ ಮಾಜಿ ಆಟಗಾರ, ಏಷ್ಯನ್ ಗೇಮ್ಸ್ ಪದಕ ವಿಜೇತ ಶ್ರೀನಾಥ್ ಪ್ರಹ್ಲಾದ್ ಮತ್ತು ಅನುಭವಿ ಆಟಗಾರ ಮೈಸೂರಿನ ಎಸ್.ಡಿ.ಪ್ರಜ್ವಲ್ ದೇವ್ ಅವರು ಕನ್ನಡದಲ್ಲಿ ಕಮೆಂಟ್ರಿ ನೀಡಲು ಸಜ್ಜಾಗಿದ್ದಾರೆ.

'ಕರ್ನಾಟಕದ ಟೆನಿಸ್ ಅಭಿಮಾನಿಗಳಿಗೆ ಹೊಸ ಅನುಭವ ನೀಡುವ ಉದ್ದೇಶದಿಂದ ಸೋನಿ ಸಂಸ್ಥೆ ಹೊಸ ಪ್ರಯೋಗಕ್ಕೆ ಮುಂದಾಗಿದೆ. ಆ ಸಂಸ್ಥೆಯವರು ನನ್ನನ್ನು ಸಂಪರ್ಕಿಸಿ, ಕನ್ನಡದ ವೀಕ್ಷಕ ವಿವರಣೆ ಪ್ರಸ್ತಾವ ಇಟ್ಟಾಗ ಖುಷಿಯಿಂದ ಒಪ್ಪಿಕೊಂಡೆ. ಈ ಹಿಂದೆ ಇಂಗ್ಲಿಷ್ ಭಾಷೆಯಲ್ಲಿ ವೀಕ್ಷಕ ವಿವರಣೆ ನೀಡಿದ ಅನುಭವವಿದೆ. ಈಗ ಮಾತೃಭಾಷೆಯಲ್ಲಿ ಕಮೆಂಟ್ರಿ ನೀಡಲು ಕಾತರನಾಗಿದ್ದೇನೆ' ಎಂದು ಪ್ರಜ್ವಲ್ ದೇವ್ ಹೇಳಿದರು.

'ಪ್ರಾದೇಶಿಕ ಭಾಷೆಯಲ್ಲಿ ಈ ರೀತಿಯ ಪ್ರಯತ್ನ ನಡೆಯುತ್ತಿರುವು ಉತ್ತಮ ಬೆಳವಣಿಗೆ. ಇದೊಂದು ನಮಗೂ ಅಪೂರ್ವ ಅವಕಾಶ. ಸಾಧ್ಯವಾದಷ್ಟು ಕನ್ನಡದ ಪದಗಳ ಪ್ರಯೋಗಕ್ಕೆ ಪ್ರಯತ್ನಿಸುತ್ತೇವೆ. ಆದರೆ, ಕೆಲವೊಂದು ಆಂಗ್ಲ ಪದಗಳನ್ನು ಬಳಸುವ ಅನಿವಾರ್ಯತೆ ಬರಬಹುದು. ಮೊದಲ ಒಂದು ವಾರ ಪ್ರಜ್ವಲ್ ಅವರು ವೀಕ್ಷಕ ವಿವರಣೆ ನೀಡಿದರೆ, ನಂತರ ಫೈನಲ್‌ವರೆಗೆ ನಾನು ಆ ಕೆಲಸ ನಿರ್ವಹಿಸಲಿದ್ದೇನೆ' ಎಂದು ಶ್ರೀನಾಥ್ ತಿಳಿಸಿದ್ದಾರೆ.

ಪ್ಯಾರಾ ಅಥ್ಲೆಟಿಕ್ಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟನೇ ಆವೃತ್ತಿಯ ರಾಷ್ಟ್ರೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಅಂತರರಾಷ್ಟ್ರೀಯ ಚಾಂಪಿಯನ್‌ಷಿಪ್ ಬೆಂಗಳೂರಿನಲ್ಲಿ ಮಂಗಳವಾರ ಆರಂಭವಾಗಲಿದೆ.

ನಗರದ ಕಂಠೀರವ ಕ್ರೀಡಾಂಗಣದಲ್ಲಿ 3 ದಿನ ನಡೆಯಲಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಸೇರಿ ಒಟ್ಟು 5 ರಾಷ್ಟ್ರಗಳ ಪ್ಯಾರಾ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಬಾರಿ ಸ್ವರ್ಣ ಜಯಿಸಿರುವ ಜಾವೆಲಿನ್ ಪಟು ಸುಮಿತ್ ಅಂಟಿಲ್ ಅವರು ಕೂಟದ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಈ ಕೂಟವು ಜಪಾನ್‌ನಲ್ಲಿ ಅಕ್ಟೋಬರ್ 18ರಿಂದ 24ರ ವರೆಗೆ ನಡೆಯಲಿರುವ 5ನೇ ಆವೃತ್ತಿಯ ಏಷ್ಯನ್ ಪ್ಯಾರಾ ಗೇಮ್ಸ್‌ಗೆ ಆಯ್ಕೆ ಟ್ರಯಲ್ಸ್ ಆಗಿರಲಿದೆ ಎಂದು ಭಾರತ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಝುಝಾರಿಯಾ ಭಾನುವಾರ ತಿಳಿಸಿದರು.

ಭಾರತದ 341 ಪ್ಯಾರಾ ಅಥ್ಲೀಟ್‌ಗಳು ಹಾಗೂ ಕಿರ್ಗಿಸ್ತಾನ, ಫಿಲಿಪ್ಪೀನ್ಸ್, ಶ್ರೀಲಂಕಾ ಹಾಗೂ ಥಾಯ್ಲೆಂಡ್‌ನ ಸ್ಪರ್ಧಿಗಳು ಕೂಟದಲ್ಲಿ ಭಾಗವಹಿಸಲಿದ್ದಾರೆ. ಅಫ್ಗಾನಿಸ್ತಾನದ ಕೆಲ ಸ್ಪರ್ಧಿಗಳೂ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಝುಝಾರಿಯಾ ಹೇಳಿದರು.

ಕೂಟದಲ್ಲಿ 100 ಮೀ., 200 ಮೀ., 400 ಮೀ., 800 ಮೀ., 1,500 ಮೀ. ಓಟ, ಹೈಜಂಪ್, ಲಾಂಗ್ ಜಂಪ್, ಶಾಟ್‌ಪಟ್, ಜಾವೆಲಿನ್ ಥ್ರೋ ಸೇರಿದಂತೆ ಪುರುಷ ಹಾಗೂ ಮಹಿಳೆಯರ ಒಟ್ಟು 155 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ರಾಜ್ಯದ 15 ಪ್ಯಾರಾ ಅಥ್ಲೀಟ್‌ಗಳು ಭಾಗಿ: ಕೂಟದಲ್ಲಿ ಕರ್ನಾಟಕದ 15 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಮಂಜುಳಾ, ಭಾರತಿ ಭಾರತೇಶ್, ಗಂಗವ್ವ ನೀಲಪ್ಪ, ಹರ್ಷಿತಾ, ಶೈಲಾ ಶಿಲ್ಪಾ, ಮೇಧಾ ಜಯಂತ್, ರಾಧಾ ವೆಂಕಟೇಶ್, ರಕ್ಷಿತಾ ರಾಜು, ಸೌಮ್ಯ, ಬಸವರಾಜ ಕುರುಬ, ಸಚ್ಚಿದಾನಂದ ದೇವಾಡಿಗ, ಗುರುರಾಜು, ಶಂಕರಪ್ಪ ಶರತ್, ರಕ್ಷಿತ್ ಹೊಸನಗರ ಸೋಮಶೇಖರ, ಸಿದ್ಧಾರ್ಥ್ ಮಂಜುನಾಥ್ ಕಣಕ್ಕಿಳಿಯಲು ಸಜ್ಜಾಗಿದ್ದಾರೆ.



ಸುಮಿತ್ ಅಂಟಿಲ್